
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 17
ಸಂಚಿಕೆ 14
ರೂ. 2.00

ಐಕ್ಯರಂಗ

2 ಏಪ್ರಿಲ್ 1995



ಜನರ ಜ್ವಲಂತ ಪ್ರಶ್ನೆಗಳ ಪರಿಹಾರಕ್ಕಾಗಿ ಹೋರಾಟ

ಮೇ ತಿಂಗಳಲ್ಲಿ ರ್‍ಯಾಲಿ: ಐದು ಪ್ರಶ್ನೆಗಳ ಮೇಲೆ ಸಮಾವೇಶಗಳು

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಈಗ ರಾಜ್ಯದ ಜನತೆಯ ಮುಂದೆ ವಿದ್ಯುತ್, ನೀರಾವರಿ, ಕುಡಿಯುವ ನೀರು, ಉದ್ಯೋಗ, ಭೂಮಿ, ಕೂಲಿ, ವಸತಿಯ ಜ್ವಲಂತ ಪ್ರಶ್ನೆಗಳಿವೆ. ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟದ ಜತೆಗೆ ಒಂದೆಡೆ ಸ್ವಾವಲಂಬನೆಯನ್ನು, ಇನ್ನೊಂದೆಡೆ ಜಾತ್ಯಾತೀತತೆಯನ್ನು ನಾಶಮಾಡಲೆತ್ನಿಸುವ ಶಕ್ತಿಗಳನ್ನು ಎದುರಿಸಬೇಕಾಗಿದೆ. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಮತ್ತು ಇತರ ಎಡ ಜಾತ್ಯಾತೀತ ಪಕ್ಷಗಳ, ಶಕ್ತಿಗಳ ಪಾತ್ರ ಮಹತ್ವದ್ದಾಗಿದೆ. ಈ ಶಕ್ತಿಗಳು ಜನರೊಡನೆ ನಿಂತು, ಅವರ ಅಭಿಪ್ರಾಯವನ್ನು ರೂಪಿಸಿ, ವ್ಯಕ್ತಪಡಿಸಿ, ಸರಕಾರದ ಮುಂದೆ ಇಡಲು ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಈ ದಿಕ್ಕಿನಲ್ಲಿ ಮೇ ತಿಂಗಳ ಎರಡನೇ ವಾರದಲ್ಲಿ ಕಾರ್ಮಿಕರು, ರೈತರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಭಾಗವಹಿಸಲಿರುವ ಒಂದು ರ್‍ಯಾಲಿಯನ್ನು ನಡೆಸಬೇಕು ಎಂದು ರಾಜ್ಯ ಸಮಿತಿ ನಿರ್ಧರಿಸಿದೆ.

ಜನಗಳ ಐದು ಪ್ರಶ್ನೆಗಳ ಮೇಲೆ ರಾಜ್ಯದ ವಿವಿಧೆಡೆ ಮೇ ಅಂತ್ಯದೊಳಗೆ ಸಮಾವೇಶಗಳನ್ನು ನಡೆಸಬೇಕೆಂದು ರಾಜ್ಯ ಸಮಿತಿ ನಿರ್ಣಯಿಸಿದೆ. ಈ ಸಮಾವೇಶಗಳು ಹೀಗಿರುತ್ತವೆ.

* ವಿದ್ಯುತ್ ಪ್ರಶ್ನೆಯ ಮೇಲೆ ಬೆಂಗಳೂರಿನಲ್ಲಿ ಸಮಾವೇಶ -ಕಾರ್ಮಿಕರು ಹಾಗೂ ರೈತರ ಸಂಘಟನೆಗಳ ಸಹಕಾರದೊಂದಿಗೆ.
* ಕನಿಷ್ಠ ಕೂಲಿಯ ಮೇಲೆ ಮಂಗಳೂರಿನಲ್ಲಿ ಸಮಾವೇಶ -ಕಾರ್ಮಿಕರು ಹಾಗೂ ಕೃಷಿಕೂಲಿಕಾರರ ಸಂಘಟನೆಗಳೊಡನೆ
* ನೀರಾವರಿ ಬಗ್ಗೆ ಗುಲ್ಬರ್ಗಾದಲ್ಲಿ -ರೈತರ ಸಂಘಟನೆಯೊಂದಿಗೆ
* ಭೂಮಿ ಪ್ರಶ್ನೆಯ ಬಗ್ಗೆ ಧಾರವಾಡದಲ್ಲಿ -ರೈತರು, ಕೃಷಿಕೂಲಿಕಾರರ ಸಂಘಟನೆಗಳ ಸಹಯೋಗದೊಂದಿಗೆ
* ಉದ್ಯೋಗದ ಪ್ರಶ್ನೆಯ ಮೇಲೆ - ವಿದ್ಯಾರ್ಥಿ-ಯುವಜನರ ಸಂಘಟನೆಗಳ ನೆರವಿನೊಂದಿಗೆ

ಈ ರ್‍ಯಾಲಿ ಹಾಗೂ ಸಮಾವೇಶಗಳ ಮೂಲಕ ಜನತಾದಳ ಸರಕಾರದ ಮುಂದೆ, ರಾಜ್ಯದ ಜನತೆಯ ಮುಂದೆ ರಾಜ್ಯದ ಪ್ರಮುಖ ಪ್ರಶ್ನೆಗಳ ಪರಿಹಾರಕ್ಕಾಗಿ ಜನಪರ, ಸ್ವಾವಲಂಬೀ ಮಾರ್ಗದ ಎಡ ಪರ್ಯಾಯವನ್ನು ಇಡಲಾಗುವುದು. ಈ ಸಮಾವೇಶಗಳಲ್ಲಿ ಈಗಾಗಲೇ ದೇಶದ ಮುಂದೆ ಒಂದು ಪರ್ಯಾಯ ಮಾದರಿಯನ್ನು ಇಟ್ಟಿರುವ ಪಶ್ಚಿಮ ಬಂಗಾಳದ ಮಂತ್ರಿಗಳು ಭಾಗವಹಿಸುವ ನಿರೀಕ್ಷೆಯಿದೆ. ಈ ಹೋರಾಟದ ಕಾರ್ಯಕ್ರಮಗಳ ಮೂಲಕ ರಾಜ್ಯದಲ್ಲಿ ಎಡ-ಜಾತ್ಯಾತೀತ ಶಕ್ತಿಗಳ ಮಧ್ಯೆ ಪ್ರವೇಶವನ್ನು ಸಶಕ್ತಗೊಳಿಸಬೇಕು. ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಮಾರ್ಚ್ 21 ರಂದು ಕಾಂ. ವಿ.ಜೆ.ಕೆ. ನಾಯರ್ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ರಾಜ್ಯ ಸಮಿತಿ ರಾಜ್ಯದ ಪ್ರಸ್ತುತ ರಾಜಕೀಯ ಸನ್ನಿವೇಶವನ್ನು ವಿವರವಾಗಿ ಪರಿಶೀಲಿಸಿ ಈ ನಿರ್ಣಯಗಳನ್ನು ಕೈಗೊಂಡಿದೆ.

"ರಾಷ್ಟ್ರದ ಬಂಡವಾಳಿಗರ ಕೇಂದ್ರವಾದ ಮಹಾರಾಷ್ಟ್ರದಲ್ಲಿ ಶಿವಸೇನೆ-ಬಿಜೆಪಿ ನಾಯಕತ್ವದ ಸರಕಾರ, ಗುಜರಾತಿನಲ್ಲಿ ಬಿಜೆಪಿಯ ಸರಕಾರ ಸ್ಥಾಪನೆಯಾಗಿರುವುದು ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ಕಾಂಗ್ರೆಗೆ ತಾನೇ ಪರ್ಯಾಯವೆಂಬ ಘೋಷಣೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ದೊಡ್ಡ ಬಂಡವಾಳ ಶಾಹಿಗಳ ಪತ್ರಿಕೆಗಳು ಈ ತುತ್ತೂರಿಯನ್ನು ಊದಲು ಈಗಾಗಲೇ ಆರಂಭಿಸಿವೆ.

"ಈ ಗೆಲುವುಗಳು ಕರ್ನಾಟಕದಲ್ಲಿ ವಿಕಾಲಕ್ಕೆ ಬಿಜೆಪಿ ಮೊದಲಾದ ಕೋಮು ಶಕ್ತಿಗಳನ್ನು ಹಾಗೂ ಭಾಷಾಂಧ ಶಕ್ತಿಗಳನ್ನು ಹಾಗೂ ಈ ಎರಡೂ ಶಕ್ತಿಗಳ ನಡುವೆ ಕರ್ನಾಟಕದಲ್ಲಿ ಇನ್ನೂ ಬೆಳೆಯದಿರುವ ಮೈತ್ರಿಯನ್ನು ಉತ್ತೇಜಿಸುವಂತಿದೆ. ಶಿವಸೇನೆ ಮಹಾರಾಷ್ಟ್ರದಲ್ಲಿ ಭಾಷಾ ಅಲ್ಪಸಂಖ್ಯಾತರ ಮೇಲೆ ಎಸಗಬಹುದಾದ ಧಾಳಿಗಳು; ಎತ್ತುತ್ತಿರುವ ಗಡಿ ಸಮಸ್ಯೆ

ಪುಟ 8 ನೋಡಿ

ಹುಬ್ಬಳ್ಳಿಯ ಕೋಮು ಗಲಭೆಗಳು

ಕೋಮು ಶಕ್ತಿಗಳ ಪ್ರಚೋದನೆಗಳನ್ನು ಹಿಮ್ಮೆಟ್ಟಿಸಬೇಕು

ಮಾರ್ಚ್ 21ರಂದು ಹುಬ್ಬಳ್ಳಿಯಲ್ಲಿ ನಡೆದ ಕೋಮು ಗಲಭೆ ಹಾಗೂ ಗೋಲಿಬಾರ್‌ನ್ನು ಸಿಪಿಐ(ಎಂ) ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ಸೂಕ್ಷ್ಮ ಪ್ರದೇಶಗಳಲ್ಲಿ ಮೆರವಣಿಗೆಗಳು ಸಾಗಲು ಅವಕಾಶ ನೀಡುವುದರ ಬಗ್ಗೆ ಅದರಲ್ಲೂ ರಂಗಪಂಚಮಿಯಂತಹ ದಿನಗಳಲ್ಲಿ ಎಚ್ಚರ ವಹಿಸುವ ಬಗ್ಗೆ ಅಲಕ್ಷ್ಯ ತೋರಿಸುವುದೇ ಒಂದು ತೀವ್ರವಾದ ಹೊಣೆಗೇಡಿತನ.

ಅದರಲ್ಲಿಯೂ ಹಲವಾರು ವರ್ಷ ಅವಕಾಶ ಕೊಡದ ಸೂಕ್ಷ್ಮ ಪ್ರದೇಶದಲ್ಲಿ ಮೆರವಣಿಗೆಗೆ ಅವಕಾಶ ಕೊಟ್ಟ ಮೇಲಂತೂ, ಹಲವಾರು ಪಟ್ಟು ಹೆಚ್ಚು ಎಚ್ಚರಿಕೆ ವಹಿಸಬೇಕಾಗಿತ್ತು. ತಮ್ಮ ಕರ್ತವ್ಯವನ್ನು ಹೊಣೆಗಾರಿಕೆಯಿಂದ ನಿರ್ವಹಿಸದ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ಸಾವಿಗೀಡಾದ ಕುಟುಂಬಗಳಿಗೆ ಪರಿಹಾರ ನೀಡಬೇಕು, ಇಡೀ ಪ್ರಕರಣದ ಬಗ್ಗೆ ವಿಚಾರಣೆ ನಡೆಸಬೇಕು ಎಂದು ರಾಜ್ಯ ಸಮಿತಿಯು ಒತ್ತಾಯಿಸಿದೆ.

ಕೋಮು ಶಕ್ತಿಗಳು ತಮಗೆ ವಿಧಾನಸಭಾ ಚುನಾವಣೆಯಲ್ಲಿ ದೊರೆತ ವಿಜಯವನ್ನು ದುರುಪಯೋಗಪಡಿಸಿಕೊಂಡು ಅಧಿಕಾರಿಗಳ ಮೇಲೆ ಒತ್ತಡ ಹೇರಿ ತಮಗೆ ಬೇಕಾದಂತೆ ಮೆರವಣಿಗೆಯ ದಾರಿಯನ್ನು ಬದಲಾಯಿಸಿಕೊಂಡಿರುವುದೇ ಅಲ್ಲದೇ ಈ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಕೋಮು ಗಲಭೆಗೆ ಕಾರಣವಾಗಿರುವುದು ತೀವ್ರ ಖಂಡನೀಯ ಎಂದು ರಾಜ್ಯ ಸಮಿತಿ ಹೇಳಿಕೆ ತಿಳಿಸಿದೆ.

ವಿಧಾನಸಭೆಯಲ್ಲಿ ಬಿಜೆಪಿ ಪಡೆದ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡು ಮುಂದೆ ಇಂತಹ ಪ್ರವೃತ್ತಿ ಎಲ್ಲ ಹಬ್ಬಗಳಲ್ಲಿಯೂ ಹೆಚ್ಚುವ ಸಾಧ್ಯತೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರ ಇಡೀ ರಾಜ್ಯದಲ್ಲಿ ಗಲಭೆಗಳನ್ನು ತಪ್ಪಿಸುವ ಬಗ್ಗೆ ಯೋಜನೆಯನ್ನು ರೂಪಿಸಬೇಕು ಹಾಗೂ ದೃಢ ನಿರ್ಧಾರದಿಂದ ಕೋಮು ಶಕ್ತಿಗಳ ಪ್ರಚೋದನೆಗಳನ್ನು ಹಿಮ್ಮೆಟ್ಟಿಸಬೇಕು ಎಂದು ರಾಜ್ಯ ಸಮಿತಿ ಮನವಿ ಮಾಡಿದೆ.

ದುಡಿಯುವ ಜನರಿಗೆ ನಿರಾಸೆ ತಂದಿರುವ 245 ಕೋಟಿ ರೂಪಾಯಿ ಕರಭಾರದ ಜನತಾ ಸರಕಾರದ ಬಜೆಟ್

ರಾಜ್ಯ ಹಣಕಾಸು ಸಚಿವ ಸಿದ್ದರಾಮಯ್ಯನವರು ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಜನತಾದಳ ಸರಕಾರದ ಪ್ರಥಮ ಬಜೆಟ್ ನ್ನು ವಿಧಾನ ಸಭೆಯಲ್ಲಿ ಮಂಡಿಸಿದ್ದಾರೆ. ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯಿಂದಾಗಿ ಹಣದುಬ್ಬರ, ಬೆಲೆಯೇರಿಕೆ ಉಳಿತಾಯದ ಪ್ರಮಾಣದಲ್ಲಿ ಇಳಿತ, ಬಡತನ ಪ್ರಮಾಣದಲ್ಲಿ ಏರಿಕೆ, ಭವಿಷ್ಯದಲ್ಲಿ ರೂಪಾಯಿಯ ಅಪಮೌಲ್ಯ, ನಿರುದ್ಯೋಗದ ಭಯಾನಕ ಸಮಸ್ಯೆ ಬಗ್ಗೆ ಕಳವಳ ವ್ಯಕ್ತಮಾಡಿದ್ದಾರೆ. ಹಣಕಾಸು ಮಂತ್ರಿಗಳು ಕೇಂದ್ರವು ರಾಜ್ಯಗಳಿಗೆ ನೀಡುವ ಸಂಪನ್ಮೂಲಗಳ ವರ್ಗಾವಣೆಯ ವಿಧಾನ ಸರಿಯಾಗಿಲ್ಲವೆಂದು, ಕೇಂದ್ರ ನೀಡುವ ಧನಸಹಾಯ ರಾಜ್ಯಗಳಿಗೆ ತಾರತಮ್ಯ ಮಾಡಲಾಗುತ್ತಿದೆಂದೂ ಅದರಲ್ಲಿ ಕೇಂದ್ರದ ನೆರವು ಸಕಾಲದಲ್ಲಿ ರಾಜ್ಯಗಳಿಗೆ ತಲುಪುತ್ತಿಲ್ಲವೆಂದೂ ಆರೋಪಿಸಿದ್ದಾರೆ. ಆರ್ಥಿಕ ನೀತಿ, ಸಹಾಯಧನ ಕೊಡುವ ಅವರ ವಿಧಾನಗಳನ್ನು ಟೀಕಿಸಿದ್ದರೂ ಕೂಡ, ಅವುಗಳನ್ನು ಯಾವ ರೀತಿ ವಿರೋಧಿಸಬೇಕೆಂಬುದರ ಕುರಿತು ಅರ್ಥಮಂತ್ರಿ ಸಿದ್ದರಾಮಯ್ಯನವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿಲ್ಲ.


ಕೆಲವು ಜೀವನಾವಶ್ಯಕ ವಸ್ತುಗಳ ತೆರಿಗೆಯಲ್ಲಿ ಇಳಿಮುಖ ತೋರಿಸಿದ್ದರೂ, ರಬ್ಬರ್, ಟೈಯರ್, ಡೀಸೆಲ್ ಪೆಟ್ರೋಲ್, ಸಾಬೂನು, ಸಿಮೆಂಟ್, ಸಿದ್ಧ ಉಡುಪು, ದ್ವಿಚಕ್ರವಾಹನಗಳ ಬಿಡಿಭಾಗ, ಅದರಲ್ಲೂ ಮುಖ್ಯವಾಗಿ ಮೈದಾ, ರವೆ, ಕಾಫಿ ಮೊದಲಾದ ಮಧ್ಯಮ ವರ್ಗದ ಜನರ ಬಹುಪಯೋಗಿ ವಸ್ತುಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಿದ್ದಾರೆ. ವೃತ್ತಿ ತೆರಿಗೆ ರದ್ದುಪಡಿಸಬೇಕೆಂಬ ಹಲವಾರು ವರ್ಷಗಳ ಹಿಂದಿನ ಬೇಡಿಕೆಯನ್ನೇ ಕಡೆಗಣಿಸಿ ಜನತಾದಳ ಸರಕಾರ ವೃತ್ತಿ ತೆರಿಗೆಯನ್ನು ಹಾಗೆಯೇ ಮಧ್ಯಮ ವರ್ಗ ಮತ್ತು ಬಡವರಿಗೂ ನೇರವಾಗಿ ಭಾರ ಬೀಳುವ ಸ್ಟಾಂಪ್ ಮತ್ತು ನೋಂದಣಿ ಶುಲ್ಕವನ್ನು ಹೆಚ್ಚಿಸಲಾಗಿದೆ.

ಬಡತನದ ಪ್ರಮಾಣದಲ್ಲಿ ಏರಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದರೂ, ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು ಶೇ.10ರಷ್ಟು ಜನರು ಬಡತನದ ರೇಖೆಗೆ ಕೆಳಗಿರುವರೆಂಬ

ಪುಟ 8 ನೋಡಿ

ವಾರದ ವ್ಯಂಗ್ಯ ಚಿತ್ರ

ಕೃಪೆ: ಫೈನಾನ್ಶಿಯಲ್ ಎಕ್ಸ್‌ಪ್ರೆಸ್



ತಲೆಕೆಳಗಾಗಿ ನೋಡಿದಾಗ ಮಾತ್ರ ಹಣದುಬ್ಬರ ಇಳಿತ!

ಪಶ್ಚಿಮ ಭಾರತದಲ್ಲಿನ ಚುನಾವಣೆಗಳ ಬಗ್ಗೆ ಸುರ್ಜಿತ್
ಶೇಷನ್‌ರ ಗುರುತು ಪತ್ರದ ಅಬ್ಬರ ಬಗ್ಗೆ ಪ್ರಕಾಶ್ ಕಾರಾಟ್
"ಮಾನವೀಯ ಮುಖ"ದ ಹಿಂದೆ ಕರಾಳ ಮನಸ್ಸು
ಕೇರಳ: ಕರುಣಾಕರನ್‌ರನ್ನು ಕೊನೆಗೂ ಕಳಿಸಿದರು-ಮುಂದೇನು
ಅಫಘಾನಿಸ್ತಾನದಲ್ಲಿ ಮುಗಿಯದ ಯಾದವೀ ಕಲಹ
ಕಲ್ಪನಾ ಜೋಷಿ ಬಗ್ಗೆ ರಾಹುಲ್ ಸಾಂಕೃತ್ಯಾಯನ


ಇತಿಹಾಸ
ಸಂಸ್ಕೃತಿ

ಕಲ್ಪನಾ ಜೋಷಿ: ಸ್ವಾತಂತ್ರ್ಯ ಸಂಗ್ರಾಮದ ಧೀಮಂತ ಮಹಿಳೆ

ರಾಹುಲ ಸಾಂಕೃತ್ಯಾಯನ

ಕನ್ನಡಕ್ಕೆ: ವಿಶ್ವ

ಭಾರತದ ಕ್ರಾಂತಿಕಾರಿ ಚಳುವಳಿಯ ಪ್ರಮುಖರಲ್ಲಿ ಕಲ್ಪನಾ(ದತ್ತ) ಜೋಷಿ ಅವರೂ ಒಬ್ಬರು. ಹದಿಹರೆಯದಲ್ಲೇ ಕ್ರಾಂತಿಕಾರಿ ಆಂದೋಲನಕ್ಕೆ ಧುಮುಕಿದ್ದಲ್ಲದೆ, ಆತ್ಮಸ್ಥೈರ್ಯದಿಂದ ಸೆಣಸಿದ ಕಲ್ಪನಾರ ಜೀವನಯುವ ಜನಾಂಗಕ್ಕೆ ಸ್ಫೂರ್ತಿಯ ಸೆಲೆ ಆಗಬಲ್ಲುದು. ದೇಶದ ಕಮ್ಯುನಿಸ್ಟ್ ಆಂದೋಲನದ ಪ್ರಮುಖರಲ್ಲೊಬ್ಬರೂ ಪ್ರಕಾಂಡ ಪಂಡಿತರೂ ಮಹಾನ್ ಸಾಹಿತಿಯೂ ಆಗಿದ್ದ ರಾಹುಲ ಸಾಂಕೃತ್ಯಾಯನ ಈ ಧೀರ ಮಹಿಳೆ ಬಗ್ಗೆ 1944ಕ್ಕೂ ಮೊದಲೇ ಹಿಂದಿಯಲ್ಲಿ ಲೇಖನವೊಂದನ್ನು ಬರೆದಿದ್ದರು. ಕಲ್ಪನಾ ಜೋಷಿ ತಮ್ಮ 81ನೇ ವಯಸ್ಸಿನಲ್ಲಿ ಇದೇ ಫೆಬ್ರುವರಿ ಎಂಟರಂದು ನಿಧನರಾದರು. ಅವರ ಕ್ರಾಂತಿಕಾರಿ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುವ ಸಾಂಕೃತ್ಯಾಯನರ ಬರಹದ ಆಯ್ದ ಭಾಗ ಇಲ್ಲಿದೆ.



ಚಿತ್ತಗಾಂಗ್ ಬಂಡಾಯ ದೇಶದ ಸ್ವಾತಂತ್ರ್ಯ ಆಂದೋಲನದ ಪ್ರಮುಖ ಕ್ರಾಂತಿಕಾರಿ ಅಧ್ಯಾಯವಾಗಿದೆ. ಬ್ರಿಟಿಷರ ಎದೆ ನಡುಗಿಸಿದ ಈ ಬಂಡಾಯ ಕಲ್ಪನಾ ಮೇಲೆ ಮಹತ್ವದ ಪ್ರಭಾವ ಬೀರಿತು.

1930ರ ಎಪ್ರಿಲ್‌ನಲ್ಲಿ ಜವಾಹರಲಾಲ್ ನೆಹರೂರನ್ನು ಬ್ರಿಟಿಷ್ ಸರಕಾರ ಬಂಧಿಸಿದಾಗ ಸರಕಾರಿ ವೇಥುನಿ ಕಾಲೇಜಿನಲ್ಲಿ ಯಶಸ್ವಿ ಮುಷ್ಕರ ನಡೆಯಿತು. ಇದಕ್ಕಾಗಿ ಕಲ್ಪನಾ ತುಂಬಾ ಪರಿಶ್ರಮ ಪಟ್ಟರು. ಆಗ ಕಾಲೇಜಿನ ಪ್ರಿನ್ಸಿಪಾಲ್ ಅನೇಕ ವಿದ್ಯಾರ್ಥಿಯರನ್ನು ಬೆದರಿಸಿದರು, ಅವಮಾನಿಸಿದರು. ಇದನ್ನು ಪ್ರತಿಭಟಿಸಿ ಪರೀಕ್ಷೆಗಳನ್ನು ಬಹಿಷ್ಕರಿಸಲು ನಿರ್ಧರಿಸಿದರು. ಅಂತ್ಯದಲ್ಲಿ ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಕ್ಷಮೆಯನ್ನು ಕೋರಬೇಕಾಯಿತು.

1931 ಎಪ್ರಿಲ್ 18 ರಂದು ಚಿತ್ತಗಾಂಗ್ ಶಸ್ತ್ರಾಗಾರದ ಮೇಲೆ ಕ್ರಾಂತಿಕಾರಿಗಳು ಆಕ್ರಮಣ ಮಾಡಿದರು. ಇದೊಂದು ಸಾಧಾರಣವಾದ ಆಕ್ರಮಣ ಆಗಿರಲಿಲ್ಲ. ಈ ಧಾಳಿಯಿಂದ ಕ್ರಾಂತಿಕಾರಿಗಳ ಸೇನಾ ಸನ್ನದ್ಧತೆ, ಕೆಚ್ಚು, ಸಂಘಟನಾ ಸಾಮರ್ಥ್ಯ ಬಹಿರಂಗಕ್ಕೆ ಬಂದು ಎಲ್ಲರೂ ಮೂಗಿನ ಮೇಲೆ ಬೆರಳಿಡುವಂತಾಯಿತು. ಶತ್ರುಗಳಂತೂ ನಡುಗಿ ಹೋದರು. ವೈರಿಗಳು, ಅಂದರೆ ಬ್ರಿಟಿಷರು ಹಿಂದಿನಂತೆ ಇನ್ನು ಮುಂದೆ ನಿಶ್ಚಿಂತೆಯಿಂದ ಇರಲು ಸಾಧ್ಯವಿಲ್ಲ ಎಂಬುದನ್ನು ಈ ಪ್ರಕರಣ ತೋರಿಸಿತು. ಇದೊಂದು ಅವಿಸ್ಮರಣೀಯವಾದ ಆಕ್ರಮಣವಾಗಿತ್ತು.

ಮುಷ್ಕರ ನಡೆದ ನಂತರ ಚಿತ್ತಗಾಂಗ್ ಗೆ ಹೋಗಲು ಕಲ್ಪನಾ ತಯಾರಿ ಮಾಡಿಕೊಳ್ಳತೊಡಗಿದರು. ಆದರೆ ಬಂಡಾಯದ ಹಿನ್ನೆಲೆಯಲ್ಲಿ ಎಲ್ಲಾ ರಸ್ತೆಗಳನ್ನು ಮುಚ್ಚಲಾಗಿತ್ತು. ಬಹುತೇಕ ಕ್ರಾಂತಿಕಾರಿಗಳನ್ನು ಬಂಧಿಸಲಾಗಿತ್ತು.

ಕಲ್ಪನಾ ಎಪ್ರಿಲ್‌ನಲ್ಲಿ ಚಿತ್ತಗಾಂಗ್ ತಲುಪಿದರಾದರೂ ಅಲ್ಲಿ ಕ್ರಾಂತಿಕಾರಿಗಳೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ಸಾಧ್ಯವಾಗಲಿಲ್ಲ. ಕರ್ಫ್ಯೂ ಇನ್ನೂ ಜಾರಿಯಲ್ಲಿತ್ತು.

'ಕಲ್ಕತ್ತಾದಲ್ಲಿ ಆಗಾಗ ಮುಷ್ಕರ ನಡೆಯುತ್ತಿರುವುದರಿಂದ ಶಿಕ್ಷಣಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ನಾನು ಚಿತ್ತಗಾಂಗ್ ನಲ್ಲೇ ಶಿಕ್ಷಣವನ್ನು ಮುಂದುವರಿಸುತ್ತೇನೆ. ಅದಕ್ಕೆ ಅನುಮತಿ ಕೊಡಿ' ಎಂದು ಕಲ್ಪನಾ ತನ್ನ ತಂದೆಯೊಂದಿಗೆ ಹಠ ಹೂಡಿದಳು.

ಚಿತ್ತಗಾಂಗ್‌ನಲ್ಲಿ ಪ್ರಯತ್ನ ನಡೆಸಿದ ಮೇಲೆ ಮೂರ್ನಾಲ್ಕು ಕ್ರಾಂತಿಕಾರಿಗಳ ಸಂಪರ್ಕ ಬೆಳೆಯಿತು. ಕಲ್ಪನಾರ ಚಟುವಟಿಕೆಯೂ ಹೆಚ್ಚಿತು. ವೇಥುನಿ ಕಾಲೇಜು ಕಲ್ಪನಾಗೆ ವರ್ಗಾವಣೆ ಪತ್ರ ಕೊಡಲು ತಯಾರಿರಲಿಲ್ಲ. ಅತ್ತ ಚಿತ್ತಗಾಂಗ್ ಕಾಲೇಜು ಒಬ್ಬ ಹುಡುಗಿಗೆ ಸೀಟ್ ಕೊಡಲು ಸಿದ್ಧವಿರಲಿಲ್ಲ. ಇದರಿಂದಾಗಿ ಶೈಕ್ಷಣಿಕ ವರ್ಷದ ಸ್ವಲ್ಪ ಸಮಯ ಹಾಳಾಗಿ ಹೋಯಿತು. ಹೀಗಾಗಿ ಪರೀಕ್ಷೆ ಕುಳಿತು ಕೊಳ್ಳಬಾರದೆಂದು ಕಲ್ಪನಾ ನಿರ್ಧರಿಸಿದರು. ಆದರೆ ಅನಂತಸಿಂಹ ಮೊದಲಾದವರು ಅದಕ್ಕೆ ಅವಕಾಶ ಕೊಡಲಿಲ್ಲ. ವೇಥುನಿ ಕಾಲೇಜಿನಲ್ಲಿ ಕಲ್ಪನಾಗೆ ಸಿಗುತ್ತಿದ್ದ ವಿದ್ಯಾರ್ಥಿ ವೇತನ (ಸ್ಕಾಲರ್ ಶಿಪ್) ಮುಷ್ಕರದಿಂದಾಗಿ ನಿಂತುಹೋಗಿತ್ತು. ಇತರರು ಮನವರಿಕೆ ಮಾಡಿಕೊಟ್ಟ ಮೇರೆಗೆ ಕಲ್ಪನಾ ಇಂಟರ್ ಮೀಡಿಯೆಟ್ ವಿಜ್ಞಾನ ಪರೀಕ್ಷೆಯನ್ನು ಖಾಸಗಿಯಾಗಿ ಕುಳಿತು ಬರೆದು ಉತ್ತಮ ಫಲಿತಾಂಶ ಪಡೆದರು. ಪರೀಕ್ಷೆ ಪಾಸಾದ ಮೇಲೆ ಚಿತ್ತಗಾಂಗ್‌ಗೆ ತೆರಳಿದರು. ಆ ಕೇಂದ್ರದಿಂದಲೇ ಆಕೆ ಪರೀಕ್ಷೆಗೆ ಕುಳಿತುಕೊಳ್ಳಬೇಕಿತ್ತು.

ಅತ್ಯುತ್ಸಾಹ......

ಚಿತ್ತಗಾಂಗ್ ಶಸ್ತ್ರಾಗಾರದ ಮೇಲಿನ ಆಕ್ರಮಣದ ಆ ಭಾರೀ ಪ್ರಕರಣ ನಡೆದ ನಂತರವಂತೂ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕೆಂಬ ಉತ್ಸಾಹ ಕಲ್ಪನಾರಲ್ಲಿ ಪುಟಿದೇಳತೊಡಗಿತು. ಅವರಲ್ಲಿನ ಅತ್ಯುತ್ಸಾಹ ಎಷ್ಟಿತ್ತೆಂದರೆ ಬೇರೆ ಯಾವ ಚಟುವಟಿಕೆಗಳಲ್ಲೂ ಮನಸ್ಸನ್ನು ಕೇಂದ್ರೀಕರಿಸಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಕ್ರಾಂತಿಕಾರಿ ಚಟುವಟಿಕೆಯದ್ದೇ ಧ್ಯಾನ....

ಗುಪ್ತವಾಗಿ ಕ್ರಾಂತಿಕಾರಿ ಕೆಲಸಗಳನ್ನು ನಡೆಸತೊಡಗಿದರು. ಮತ್ತು ಕ್ರಾಂತಿಕಾರಿ ಸಾಹಿತ್ಯವನ್ನು ಓದತೊಡಗಿದರು. ಮಧ್ಯೆ ಮಧ್ಯೆ ಪಿಸ್ತೂಲು ಪ್ರಯೋಗಿಸುವುದನ್ನು (ಅಂದರೆ ಗುಂಡು ಹಾರಿಸುವುದು) ಕಲಿಯತೊಡಗಿದ್ದರು. ಚಿತ್ತಗಾಂಗ್ ನಲ್ಲಿನ ಮೆಟ್ರಿಕ್ ಸಹಪಾಠಿ ಸುರಭದತ್ತ ಕಮ್ಯುನಿಸ್ಟ್ ವಿಚಾರಧಾರೆಯನ್ನು ಹೊಂದಿದ್ದ ಯುವತಿಯಾಗಿದ್ದಳು. ಬಂಡವಾಳಶಾಹಿ, ಕಾರ್ಮಿಕ ವರ್ಗ ಮೊದಲಾದ ವಿಚಾರಗಳ ಬಗ್ಗೆ ಅವಳು ಮಾತನಾಡುತ್ತಿದ್ದಳು. ಆದರೂ ಆಕೆ ಕಲ್ಪನಾದಿಂದ ಪ್ರತ್ಯೇಕವಾಗಿ ಇರುತ್ತಿದ್ದರು.

ಏನನ್ನು ಮಾಡಬಲ್ಲೆ

'ನಿನ್ನ ಆದರ್ಶ ಮತ್ತು ಉದ್ದೇಶಕ್ಕಾಗಿ ತಂದೆ-ತಾಯಿ , ಸೋದರರನ್ನು ಕೂಡಾ ಸಾಯಿಸಲು ಹಿಂದೆ ಮುಂದೆ ನೋಡಬಾರದು. ಇದಕ್ಕೆ ನೀನು ಸಿದ್ಧಳಿದ್ದೀಯೋ' - ಇದು ಒಮ್ಮೆ ಕಲ್ಪನಾಗೆ ಅಚಾನಕ್ಕಾಗಿ ಎದುರಾದ ಪ್ರಶ್ನೆ. ಅನಂತ ಸಿಂಹ ಇದನ್ನು ಕೇಳಿದ್ದರು. ತಕ್ಷಣವೇ ಕಲ್ಪನಾರಿಂದ ಬಂದ ಉತ್ತರ ಆಕೆಯಲ್ಲಿನ ಕ್ರಾಂತಿಕಾರಿ ಸತ್ವವನ್ನು ತೋರಿಸುವಂಥದ್ದಾಗಿತ್ತು. "ನಾನು ಏನನ್ನು ಮಾಡಬಲ್ಲೆ" ಎಂಬುದು ಕಲ್ಪನಾ ನೀಡಿದ ಉತ್ತರವಾಗಿತ್ತು.

ಇಂಡಿಯನ್ ರಿಪಬ್ಲಿಕನ್ ಆರ್ಮಿ (ಐಆರ್ಎ)ಯ ಅಧ್ಯಕ್ಷ ಮಾಸ್ಟರ್ ಸೂರ್ಯಸೇನ್ 1931 ಫೆಬ್ರುವರಿಯಲ್ಲಿ ಕಲ್ಕತ್ತಾಗೆ ಹೋಗಿ ಮದ್ದುಗುಂಡುಗಳನ್ನು ತರುವಂತೆ ಕಲ್ಪನಾಗೆ ಆದೇಶಿಸಿದರು. ಕಣ್ಣು ಪರೀಕ್ಷೆಯ ನೆಪ ಹೇಳಿ ಅದೇ. ದಿನ ಅಲ್ಲಿಗೆ ಹೋದ ಕಲ್ಪನಾ ಏಳು ದಿನಗಳ ನಂತರ ಎಲ್ಲಾ ಸಾಮಗ್ರಿಗಳೊಂದಿಗೆ ಮರಳಿದರು. ಇದನ್ನು ಕಂಡ ಸೂರ್ಯಸೇನರಿಗೆ ೧೭ ವರ್ಷ ಪ್ರಾಯದ ಬಾಲಕಿ ಬಗ್ಗೆ ಅತೀವ ಹೆಮ್ಮೆಯುಂಟಾಯಿತು. ಯಾವುದೇ ಕಾರ್ಯಕ್ಕೆ ಆಕೆಯನ್ನು ನಿಯೋಜಿಸಬಹುದೆಂದು ಆತ್ಮವಿಶ್ವಾಸ ಉಂಟಾಯಿತು. ಆ ಬಗ್ಗೆ ನಿಶ್ಚಯವನ್ನು ಮಾಡಿದರು.

ಬ್ರಿಟಿಷ್ ಅಧಿಕಾರಿ ಸಿಮ್ಸನ್ ಹತ್ಯೆಯ ಸಂಬಂಧದಲ್ಲಿ ದಿನೇಶ್ ಗುಪ್ತ ಮತ್ತು ರಾಮಕೃಷ್ಣ ವಿಶ್ವಾಸ್ ರನ್ನು ಗಲ್ಲಿಗೇರಿಸಲು ಸರಕಾರ ತೀರ್ಮಾನಿಸಿತು: ಗಲ್ಲಿಗೇರಿಸುವ ದಿನ ಮಹತ್ಕಾರ್ಯವೊಂದನ್ನು ನಡೆಸಲು ಕ್ರಾಂತಿಕಾರಿಗಳು ನಿರ್ಧರಿಸಿದರು.

ಜೈಲಿನ ಗೋಡೆಯನ್ನು ಸ್ಫೋಟಿಸಿ ಗುಪ್ತ ಮತ್ತು ವಿಶ್ವಾಸರನ್ನು ಬಿಡುಗಡೆ ಮಾಡುವುದು ಕ್ರಾಂತಿಕಾರಿಗಳ ಉದ್ದೇಶವಾಗಿತ್ತು. ಆದರೆ ಅವರ ಯೋಜನೆ ತಲೆಕೆಳಗಾಯಿತು. ಡೈನಮೈಟನ್ನು ಪತ್ತೆ ಹಚ್ಚಲಾಯಿತು. ಗುಡ್ಡದ ಮೇಲಿದ್ದ ಸರಕಾರಿ ಕಚೇರಿಯಲ್ಲಿಟ್ಟು ಡೈನಮೈಟನ್ನು ಕೂಡ ಪತ್ತೆ ಹಚ್ಚಲಾಯಿತು. ಬಹುತೇಕ ತರುಣರನ್ನು ಬಂಧಿಸಲಾಯಿತು. ಇಬ್ಬರನ್ನು ಗಲ್ಲಿಗೇರಿಸಲಾಯಿತು. ಇದರಿಂದಾಗಿ ಪರೀಕ್ಷೆಯಲ್ಲಿ ಪಾಸಾದರೂ ಕಲ್ಪನಾ ಸಂತೋಷಗೊಳ್ಳಲಿಲ್ಲ.

ಮಹಿಳೆಯೂ ಮಹತ್ಕಾರ್ಯವನ್ನು ಮಾಡಬಲ್ಲಳು ಎಂಬುದನ್ನು ಸಾಧಿಸಿ ತೋರಬೇಕೆಂಬ ಉತ್ಕಟೇಚ್ಛೆ ಅವರಲ್ಲಿ ಪ್ರಬಲವಾಗಿತ್ತು. ವಿಷಸರ್ಪ ಮೊದಲಾದ ಅಪಾಯಕಾರಿ ಪ್ರಾಣಿಗಳಿದ್ದ ಪ್ರದೇಶವನ್ನು ಕಗ್ಗತ್ತಲ್ಲೇ ತಲುಪಿ ಗುಂಡು ಹಾರಿಸುವುದನ್ನು ಕಲಿಯುತ್ತಿದ್ದರು.

ಪುರುಷವೇಷಧಾರಿ.....

ಒಂದು ದಿನ ಪೋಲೀಸರು ಕಲ್ಪನಾ ಹಾಗೂ ಆಕೆಯ ತಂದೆಯನ್ನು ಕರೆಸಿದರು. 'ನಿಮ್ಮ ಮಗಳು ಆತಂಕವಾದಿಗಳೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾಳೆ ಎಂದು ಪೋಲೀಸ್ ಸೂಪರಿಂಟೆಂಡೆಂಟ್ ತಂದೆಗೆ ಹೇಳಿದನು. 'ನಾನು ಕಾನೂನು ಬಾಹಿರ ಪುಸ್ತಕಗಳನ್ನು ಇಟ್ಟುಕೊಳ್ಳುವುದಿಲ್ಲ, ಯಾವುದೇ ಸಭೆ ಅಥವಾ ಗುಪ್ತ ಸಮಿತಿಗಳಿಗೆ ಹೋಗುವುದಿಲ್ಲ' ಎಂದು ಕಲ್ಪನಾರಿಂದ ಮುಚ್ಚಳಿಕೆಯನ್ನು ಬರೆಸಿಕೊಳ್ಳಲಾಯಿತು. ಆದರೆ ಮುಚ್ಚಳಿಕೆ ಕೊಟ್ಟ ಮಾತ್ರಕ್ಕೆ ಸುಮ್ಮನೇ ಕುಳಿತುಕೊಳ್ಳುವ ಜೀವವಲ್ಲ ಕಲ್ಪನಾ. ಅಡಗಿಕೊಂಡಿದ್ದ ಸಂಗಾತಿಯೊಬ್ಬರನ್ನು ಭೇಟಿ ಮಾಡಲು ಪುರುಷ ವೇಷ ಧರಿಸಿ ಹೋಗುತ್ತಿದ್ದಾಗ ಆಕೆಯನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. 1930 ಸೆಪ್ಟೆಂಬರ್ 17 ರಂದು ಆಕೆಯ ಬಂಧನವಾಯಿತು. ಎರಡು ತಿಂಗಳ ನಂತರ ಜಾಮೀನಿನ ಮೇಲೆ ಕಲ್ಪನರನ್ನು ಬಿಡುಗಡೆಮಾಡಲಾಯಿತು.

ಕಲ್ಪನಾ ಮನೆಯಿಂದ ಹೊರಗೆ ಹೋಗಬಾರದೆಂದು ಅಧಿಕಾರಿಗಳು ಷರತ್ತು ಹಾಕಿದ್ದರು. ಆರು ವರ್ಷದ ತಂಗಿಯನ್ನು ಸಹಾಯಕಿಯನ್ನಾಗಿ ಮಾಡಿಕೊಂಡ ಕಲ್ಪನಾ, ತಂಗಿಯ ಮುಖಾಂತರ ಕ್ರಾಂತಿಕಾರಿಗಲೊಂದಿಗೆ ಸಂಪರ್ಕ ಸ್ಥಾಪಿಸಿಕೊಂಡರು. ಕಲ್ಪನಾ ಪರಾರಿಯಾಗುವುದು ಅಗತ್ಯ ಎಂದು ಸೂರ್ಯಸೇನ್ ಸಲಹೆ ಮಾಡಿದರು.

ಆದರೆ ಪಾರಾಗುವುದಾದರೂ ಹೇಗೆ? ಮನೆಯ ಸುತ್ತ ಸದಾ ಬಟ್ಟೆಯಲ್ಲಿದ್ದ ಪೋಲೀಸರು ಹಗಲಿರುಳು ಕಾವಲು ಕಾಯುತ್ತಿದ್ದರು. ಅದು ೧೯೩೨ ಡಿಸೆಂಬರ್ 20 ಅಂದು ರಾಯಬಹಾದೂರ್ ದುರ್ಗಾ ದಾಸ್ ದತ್ತಾ ಅವರ ಶ್ರಾದ್ಧವಿತ್ತು. ಮನೆಯವರು ಸಂಬಂಧಿಗಳು ಭಾರಿ ಬೋಜನ ಉಂಟು ಹಾಡುಹಗಲಲ್ಲೇ ಗಡ್ಡದ್ದಾಗಿ ನಿದ್ದೆ ಮಾಡುತ್ತಿದ್ದರು. ಆದರೆ ಎರಡು ಕಣ್ಣುಗಳು ಮಾತ್ರ ಎಚ್ಚರವಾಗೇ ಇದ್ದವು. ಆ ಕಣ್ಣುಗಳು ಮನೆಯ ಒಂದು ಕಡೆಯ ಕಿಟಕಿಯಿಂದ ಇಣುಕಿ ನೋಡುತ್ತಿದ್ದವು. ಆ ಬರಿಯ ಕಾವಲುಗಾರ ಪೋಲೀಸ್ ಆಗಾಗ ಬರುತ್ತಿರಲಿಲ್ಲ, ಆ ದಿನ ಕೂಡಾ ಹಾಗೇ ಆಯಿತು. ಅದೇ ತಕ್ಕ ಸಮಯವೆಂದು ಯೋಚಿಸಿದ ಕಲ್ಪನಾ ನಿಶ್ಶಬ್ದವಾಗಿ ತನ್ನ ಸೀರೆಯ ಸಹಾಯದಿಂದ ಕೆಳಗಿಳಿದು ಓಡಿದಳು. ಕ್ಷಣಮಾತ್ರದಲ್ಲಿ ಆ ಬೃಹತ್ ಮಹಲು ಕಲ್ಪನಾಳ ಕಣ್ಣುಗಳಿಂದ ದೂರವಾಗಿತ್ತು.

ಕ್ರಾಂತಿಕಾರಿಗಳ ಚಟುವಟಿಕೆ ಜಾಸ್ತಿಯಾಗಿದ್ದ ಆ ದಿನಗಳಲ್ಲಿ ಎಲ್ಲಿ ನೋಡಿದರಲ್ಲಿ ಪೋಲೀಸರ ಸೈನಿಕರ ಪಹರೆ ಬಿಗಿಯಾಗಿತ್ತು. ಅಂಥ ಸನ್ನಿವೇಶದಲ್ಲೂ ಕಲ್ಪನಾ ತಪ್ಪಿಸಿಕೊಂಡು ಪರಾರಿಯಾಗಿದ್ದನ್ನು ಕೇಳಿ ಪೋಲೀಸರು ಸ್ತಂಭೀಭೂತರಾದರು. ಸರಕಾರದವರು ಮಗಳ ಮೇಲಿನ ಕೋಪವನ್ನು ತಂದೆ ಮೇಲೆ ತೀರಿಸಿದರು. ಅವರನ್ನು ಕೆಲಸದಿಂದ ತೆಗೆದು ಹಾಕಿದರು. ಚಿಂತಾಕ್ರಾಂತರಾದ ತಂದೆ ಮಗಳಿಗಾಗಿ ಗುಡ್ಡ ಬೆಟ್ಟವನ್ನು ಅಲೆದಾಡಿದರು.

ಮಾಸ್ಟರ್ ದಾ(ಸೂರ್ಯಸೇನ) ಮತ್ತು ಕಲ್ಪನಾ ಹಗಲು ಅವರಿವರ ಮನೆಯಲ್ಲಿದ್ದು ರಾತ್ರಿ ಹೊತ್ತು ಸಂಚರಿಸಿ ದೂರವನ್ನು ಕ್ರಮಿಸುತ್ತಿದ್ದರು. 1933ರ ಜನವರಿಯಲ್ಲಿ ಒಂದು ದಿನ ರಾತ್ರಿ ಸೂರ್ಯಸೇನ, ಕಲ್ಪನಾ ಮತ್ತು ಇತರ ಮೂವರು ಕ್ರಾಂತಿಕಾರಿಗಳು ಅಡಗಿಗೊಂಡಿದ್ದ ಮನೆಯನ್ನು ಸೈನಿಕರು ಸುತ್ತುವರಿದಿದ್ದರು. ಅಚಾನಕ್ ಸದ್ದಿನಿಂದ ಎಚ್ಚೆತ್ತ ಕಲ್ಪನಾ ಮಾಸ್ಟರ್ ದಾರನ್ನು ಎಬ್ಬಿಸಿದರು. ಮನೆಯ ಒಂದು ಬದಿ ಸುತ್ತುವರಿಯಲು ಸೈನಿಕರು ವಿಫಲರಾಗಿದ್ದನ್ನು ಗಮನಿಸಿದ ಐವರೂ ಸಂಗಾತಿಗಳು ಆ ಮಾರ್ಗದಿಂದ ಕತ್ತಲಲ್ಲಿ ಪಾರಾರಿಯಾದರು.

ಕಲ್ಪನಾಗೆ ಇದು ಈ ರೀತಿಯ ಮೊದಲು ಅನುಭವವಾಗಿತ್ತು. ಸ್ವಲ್ಪ ದಿನಗಳ ನಂತರ ಮತ್ತೆ ಅದೇ ರೀತಿಯ ಅನುಭವವನ್ನು ಪಡೆದರು.

ಐವರು ಸಂಗಾತಿಗಳು ರಾತ್ರಿ ಹೊತ್ತು ಮನೆಯೊಂದರಲ್ಲಿ ಕುಳಿತು ಗಹನ ಚರ್ಚೆ ನಡೆಸುತ್ತಿದ್ದರು. ಆಗ ಆ ಊರಿನಲ್ಲಿ ಸೈನಿಕರು ಬೀಡುಬಿಟ್ಟಿದ್ದರು. ಇವರು ಚರ್ಚೆ ಮಾಡಿ ಮನೆಯಿಂದ ಹೊರಗೆ ಬರುವಾಗ ಒಬ್ಬ ಸೈನಿಕ 'ಯಾರು' ಎಂದು ಜೋರಾಗಿ ಕೇಳಿದ. ಇವರು ಮನೆಯ ಹಿಂದಿನ ತೋಟದತ್ತ ಸರಿದರು. ಆಗ ಸೈನಿಕರು ಗುಂಡು ಹಾರಿಸಿದರು. ಕ್ರಾಂತಿಕಾರಿಗಳು ಗುಂಡಿನ ಮಾರುತ್ತರ ನೀಡತೊಡಗಿದರು.

ಏಳು ಸೈನಿಕರ ಬಲಿ

ಇಂಥ ಪರಿಸ್ಥಿತಿಯಲ್ಲಿ ಕಲ್ಪನಾ ಧೃತಿಗೆಡದೆ ಶತ್ರುಗಳ ವಿರುದ್ಧ ಕಾದಾಡಿದರು. ಮೈಗೆ ಗುಂಡು ತಾಗಿ ರಕ್ತ ಸುರಿಯುತ್ತಿದ್ದರೂ ತನ್ನಲ್ಲಿರುವ ಪಿಸ್ತೂಲಿನ ಒಂದೊಂದು ಗುಂಡು ಕೂಡಾ ನಿಷ್ಫಲವಾಗದ ರೀತಿಯಲ್ಲಿ ಹೋರಾಟ ನಡೆಸಿದರು. ತಾನೂ ಎಷ್ಟು ಜನರನ್ನು ಗಾಯಗೊಳಿಸಿದೆ ಅಥವಾ ಕೊಂದೆ ಎಂಬುದು ಕಲ್ಪನಾಗೇ ಗೊತ್ತಿರಲಿಲ್ಲ. ಆನಂತರ ಜನರು ಹೇಳಿದ ಪ್ರಕಾರ ಕಲ್ಪನಾರ ಗುಂಡುಗಳಿಗೆ ಏಳು ಸೈನಿಕರು ಬಲಿಯಾಗಿದ್ದರು...

(ಮುಂದುವರಿಯುವುದು)

ಮಹಾಚೈತ್ರ ರದ್ಧತಿ ವಿರೋಧಿಸಿ ಧರಣಿ ಸತ್ಯಾಗ್ರಹ

ಗುಲ್ಬರ್ಗ ಹಾಗೂ ಕುವೆಂಪು ವಿ.ವಿ.ಗಳಿಗೆ ಪಠ್ಯವಾಗಿದ್ದ 'ಮಹಾಚೈತ್ರ' ನಾಟಕವನ್ನು ಸರಕಾರ ಏಕಪಕ್ಷೀಯವಾಗಿ ರದ್ದುಪಡಿಸಿರುವುದರ ವಿರುದ್ಧ ಹಾಗೂ ಸೃಜನ ಶೀಲತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ವಿ.ವಿ. ಸ್ವಾಯತ್ತತೆ ರಕ್ಷಣೆಗೆ ಒತ್ತಾಯಿಸಿ ವಿಧಾನ ಸೌಧದ ಎದುರು ಸಾಹಿತಿಗಳ, ಕಲಾವಿದರ, ವಿದ್ಯಾರ್ಥಿ-ಯುವಜನ ಮತ್ತು ಪ್ರಗತಿಪರರ ಧರಣಿ, ಸತ್ಯಾಗ್ರಹ 20-3-1995 ರಂದು ನಡೆಯಿತು.

ಈ ಸಂದರ್ಭದಲ್ಲಿ ಒಂದು ನಿಯೋಗ ಹೋಗಿ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿ ಸರಕಾರದ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ಒತ್ತಾಯಿಸಿತು. ಮತೀಯವಾದಿಗಳಿಗೆ ಸರಕಾರ ಮಣಿದು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವುದರಲ್ಲಿ ಸರಕಾರ ಸೋತಿದೆ ಎಂದು ತಿಳಿಸಲಾಯಿತು. ಮುಖ್ಯಮಂತ್ರಿಗಳು ನಿಯೋಗದ ಜೊತೆ ಮಾತನಾಡುತ್ತಾ "ಮಹಾಚೈತ್ರ ರದ್ದಿಗೆ ಸಂಪೂರ್ಣವಾಗಿ ಗುಲ್ಬರ್ಗ ವಿಶ್ವವಿದ್ಯಾಲಯದ ಉಪಕುಲಪತಿ ಡಾ. ರುದ್ರಯ್ಯ ಹಾಗೂ ವಿ.ವಿ. ಶಿಕ್ಷಣ ಮಂಡಳಿ ಶಿಫಾರಸ್ಸೇ ಮುಖ್ಯಕಾರಣವೆಂದು ತಿಳಿಸುತ್ತ ಎಲ್ಲ ವಿದ್ಯಾಮಾನಗಳನ್ನು ಕುರಿತು ಹಿಂದೆ ರಚಿಸಿರುವ ತಜ್ಞರ ಸಮಿತಿಯಿಂದ ವರದಿ ತರಿಸಿಕೊಳ್ಳುವುದಾಗಿ ತಿಳಿಸಿದ್ದರು ಮಂತ್ರಿ ಎಂ.ಪಿ. ಪ್ರಕಾಶ್ ಈ ಸಂದರ್ಭದಲ್ಲಿ ಹಾಜರಿದ್ದರು.

ಧರಣಿ ಸತ್ಯಾಗ್ರಹದಲ್ಲಿ ಸಿಪಿಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿ ಹಾಜರಿದ್ದು ವಿಧಾನಸೌಧದಲ್ಲಿ ಈ ಪ್ರಶ್ನೆಯನ್ನು ಪ್ರಶ್ನಿಸುವುದಾಗಿ ಘೋಷಿಸಿದರು. ಶಾಸಕರುಗಳಾದ ಯು.ಆರ್. ಸಭಾಪತಿ, ಪುಟ್ಟಸಿದ್ದ ಶೆಟ್ಟಿ ಹಾಗೂ ಸುದರ್ಶನ ಧರಣಿ ಸ್ಥಳಕ್ಕೆ ಭೇಟಿ ನೀಡಿ ಹೋರಾಟಕ್ಕೆ ಬೆಂಬಲಿಸುವುದಾಗಿ ತಿಳಿಸಿದರು.

ಧರಣಿಯನ್ನು ಸಮುದಾಯ, ಎಸ್.ಎಫ್.ಐ., ಡಿ.ವೈ.ಎಫ್.ಐ., ಡಿ.ಎಸ್.ಎಸ್. ಶಿಕ್ಷಕರ ಸಂಘಟನೆಗಳು, ಬಂಡಾಯ ಸಾಹಿತ್ಯ ಸಂಘಟನೆ ಮುಂತಾದ ಸಂಘಟನೆಗಳು ಸಂಘಟಿಸಿದ್ದವು.

ಹಿರಿಯ ಸಾಹಿತಿ, ಕಲಾವಿದರಾದ ಜಿ.ಎಸ್. ಸಿದ್ಧಲಿಂಗಯ್ಯ, ಜಿ.ಕೆ. ಗೋವಿಂದರಾವ್, ಡಾ. ವಿಜಯ, ಸಿಜಿ. ಕೃಷ್ಣಸ್ವಾಮಿ, ಕಿ.ರಂ. ನಾಗರಾಜ, ಎಲ್. ಹನುಮಂತಯ್ಯ, ಟಿ.ಎಸ್. ನಾಗಭರಣ, ವಿವಿಧ ಸಂಘಟನೆಗಳ ಮುಖಂಡರಾದ ಶಾಂತರಾಮ ನಾಯಕ, ಕೆ. ಪ್ರಕಾಶ್, ಎಸ್.ವೈ. ಗುರುಶಾಂತ್, ವೈಎಸ್. ವಿದತ್, ಗುಂಡಣ್ಣ, ಸುರೇಂದ್ರ ರಾವ್ ಮುಂತಾದ ನೂರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ವಸಂತದಲಿ
'ಚೈತ್ರ'ದ ಕುಡಿ ಮುರಿದರಯ್ಯ
ನೀನಿತ್ತ ನುಡಿ ಮುತ್ತ ನಾಲಿಗೆಯಿಂದ
ಇಂದು ಮಾತೆ ಕಸಿದರಯ್ಯ
ಅಯ್ಯ! ಬಸವಯ್ಯ
ಮತದಗಾಳದ ಸುಳಿಗೆ ಮಾಯೆ ಮಾದೇವಿ
ಈ ಕೆಡುಕ ನಿವಾರಿಸೋ ನಿಲುವ ಕರುಣಿಸೋ ತಂದೆ!
ಕಲ್ಯಾಣ ದೂರಲ್ಲಿ,
ಮಹಾಮನೆಯ ಬಯಲಲ್ಲಿ
ನಿಜ ಕೆಡಹಿ, ನಡೆ ಕೆಡಹಿ
ಅಂತರಂಗ ಬಹಿರಂಗಗಳ ಕತ್ತಲಗೆ
ಕೆಡವಿ, ಕುಣಿದವರಿಗೆರಗಿ
ಮಣಿದರೊ ಪ್ರಭುವೆ!
ಧನ ದರ್ಪ ಗರ ಬಡಿದ
ಮತಿಹೀನ ಮೂಢರಿಗೆ,
ಮತಿಯಿತ್ತು, ಮನವಿತ್ತು, ಸತ್ಯ ಸಹಿಸುವ ಗುಣವಿತ್ತು
ನೀ ನಡೆದತ್ತ ನಡೆವ ಗತಿ ತೋರೋ ಪ್ರಭುವೆ!

(ಧರಣಿ ಸತ್ಯಾಗ್ರಹದ ವೇಳೆ ಮೂಡಿ ಬಂದ ಕವನ)

ಗಮನಿಸಿ

ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ರಾಜ್ಯ ಸಮಿತಿಗಳ ಕಛೇರಿಗೆ ದೂರವಾಣಿ ಬಂದಿರುತ್ತದೆ. ಸಂಖ್ಯೆ ಕೆಳಕಂಡಂತಿದೆ.

2275042

ಇನ್ನು ಮುಂದೆ ಸಂಬಂಧಪಟ್ಟ ಸಂಗಾತಿಗಳು ಈ ದೂರವಾಣಿ ಸಂಖ್ಯೆಯ ಪ್ರಯೋಜನವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

ಕೋಮುವಾದಿಗಳನ್ನು ಎದುರಿಸದೆ ಕೋಮು ಸೌಹಾರ್ದ ಕಾಪಾಡುವುದು ಸಾಧ್ಯವಿಲ್ಲ

ಸಿಪಿಐ(ಎಂ) ರಾಜ್ಯ ಸಮಿತಿ ಎಚ್ಚರಿಕೆ

ಮಾರ್ಚ್ 21 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ರಾಜ್ಯ ಸಮಿತಿ ಕೋಮುವಾದಿಗಳ ಒತ್ತಡಕ್ಕೆ ಮಣಿದು "ಮಹಾಚೈತ್ರ" ನಾಟಕವನ್ನು ಪಠ್ಯಪುಸ್ತಕವಾಗಿ ಹಿಂತೆಗೆದುಕೊಂಡಿರುವ ಹಾಗೂ 'ಬಾಂಬೆ' ಚಲನಚಿತ್ರದ ಪ್ರದರ್ಶನವನ್ನು ನಿಷೇಧಿಸುವ ಪ್ರಯತ್ನದ ಬಗ್ಗೆ ತನ್ನ ತೀವ್ರ ಆತಂಕ ವ್ಯಕ್ತಪಡಿಸಿತು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದ ಕರ್ನಾಟಕ ಸಾಹಿತ್ಯ ಹಾಗೂ ರಂಗ ವಿಮರ್ಶಕರು ಉದ್ದಾಮ ಸಾಹಿತಿಗಳಿಂದ ಪ್ರಶಂಸೆಗೊಳಗಾದ ಕೃತಿ "ಮಹಾಚೈತ್ರ" ಅದು ಪಠ್ಯ ಪುಸ್ತಕವಾಗಿ ಹಲವಾರು ವರ್ಷಗಳು ಕಳೆದ ನಂತರ ಪಾಳೆಯಗಾರಿ ಮೌಢ್ಯವನ್ನು ಪ್ರತಿಪಾದಿಸುವ ಶಕ್ತಿಗಳಿಂದ ಒತ್ತಡಕ್ಕೊಳಗಾಗಿ ಹಿಂತೆಗೆದಿರುವುದು ಖಂಡನಾರ್ಹ ಕ್ರಮ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ. ಈ ಕ್ರಮ ಹತ್ತಾರು ಸಾವಿರ ವಿದ್ಯಾರ್ಥಿಗಳಲ್ಲಿ ಗೊಂದಲ ಉಂಟುಮಾಡುವುದಲ್ಲದೆ ಸರ್ಕಾರ ತಾನೇ ನೇಮಿಸಿದ ಸಮಿತಿಯನ್ನು ನಿರ್ಲಕ್ಷಿಸಿ ಈ ಕೋಮು ಶಕ್ತಿಗಳ ಆಟಕ್ಕೆ ಮಣಿದಿರುವುದು ಶೋಚನೀಯವೆಂದು ಹೇಳುತ್ತಾ ಈ ಬಗ್ಗೆ ಕೂಡಲೇ ಪುನಾರಾಲೋಚನೆ ಮಾಡಿ 'ಮಹಾಚೈತ್ರ'ವನ್ನು ಪಠ್ಯಪುಸ್ತಕವನ್ನಾಗಿ ಮುಂದುವರೆಸಬೇಕೆಂದು ಒತ್ತಾಯಿಸಿದೆ.

ಜೊತೆಗೆ ವೀರಶೈವ ಚಳುವಳಿಯ ಪ್ರಗತಿಪರ ಆಯಾಮಗಳ ಬಗೆಗೆ ಹಾಗೂ ಮಹಾಚೈತ್ರ ವಿವಾದದ ಬಗೆಗೆ ಪ್ರಚಾರಾಂದೋಲನ ಕೈಗೊಳ್ಳಲು ರಾಜ್ಯ ಸಮಿತಿ ತೀರ್ಮಾನಿಸಿದೆ.

ಬಾಂಬೆ ಚಲನಚಿತ್ರದ ಪ್ರದರ್ಶನವನ್ನು ರಾಜ್ಯದ ಕೆಲವೆಡೆ ಕೋಮುವಾದಿಗಳ ಒತ್ತಡಕ್ಕೆ ಮಣಿದು ಕೋಲಾರ, ಧಾರವಾಡ ಜಿಲ್ಲಾ, ರಾಯಚೂರು ಬಳ್ಳಾರಿಗಳಲ್ಲಿ ರದ್ದುಪಡಿಸಿದ ಸರ್ಕಾರದ ಕ್ರಮವನ್ನು ರಾಜ್ಯ ಸಮಿತಿ ಖಂಡಿಸಿದೆ.

ಜನಪ್ರಿಯ ನಿರ್ದೇಶಕ ಮಣಿರತ್ನಂರವರು ನಿರ್ದೇಶಿಸಿದ ಈ ಚಿತ್ರವು ಡಿಸೆಂಬರ್ 6 ರಂದು ಬಾಬ್ರಿ ಮಸೀದಿಯ ಧ್ವಂಸ, ಅದರ ನಂತರ ದೇಶದಲ್ಲಿ ಭುಗಿಲೆದ್ದ ಕೋಮು ಗಲಭೆ ಅದರಲ್ಲೂ ಮುಂಬೈಯಲ್ಲಿ ನಡೆದ ವ್ಯಾಪಕ ಹಿಂಸಾಚಾರ, ಕೊಲೆ, ಲೂಟಿಗಳ ಸರಮಾಲೆಯ ಅಮಾನುಷ ಘಟನೆಗಳನ್ನು ಬಿಚ್ಚಿಡುತ್ತಾ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕಿರುವ ತುರ್ತು ಅಗತ್ಯ ಚಿತ್ರ ಸಾರುತ್ತದೆ. ಕೋಮು ಸೌಹಾರ್ದತೆ ನಾಶ ಮಾಡುವ ಬಹುಸಂಖ್ಯಾತ ಅಲ್ಪಸಂಖ್ಯಾತ ಮತೀಯ ಮೂಲಭೂತವಾದಿಗಳ ಕುಕೃತ್ಯಗಳನ್ನು ಅದರ ಹಿಂದಿರುವ ರಾಜಕೀಯ ಹುನ್ನಾರಗಳನ್ನು ಸ್ವಲ್ಪ ಮಟ್ಟಿಗೆ ಬಯಲಿಗೆಳೆಯುತ್ತದೆ.

ಇಂತಹ ವಸ್ತು ಒಳಗೊಂಡಿರುವ ಚಲನಚಿತ್ರದ ವಿರುದ್ಧ ಬಿಜೆಪಿ, ಆರ್.ಎಸ್.ಎಸ್. ಮುಂತಾದ ಕೋಮುವಾದಿಗಳು ಕಿಡಿಕಾರುತ್ತಿದ್ದಾರೆ. ರಾಯಚೂರಿನಲ್ಲಿ ಗಲಭೆಯೆಬ್ಬಿಸಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಪ್ರದರ್ಶನ ಕೂಡದೆಂದು ಆಡಳಿತಕ್ಕೆ ತಾಕೀತು ಮಾಡಿದ್ದಾರೆ. ಬೆಂಗಳೂರಿನ ಕೆಲವು ಚಿತ್ರಮಂದಿರದಲ್ಲಿ ಗಲಭೆಯೆಬ್ಬಿಸಲು ಯತ್ನಿಸಿದ್ದಾರೆ. ರಾಜ್ಯದ ಗೃಹ ಸಚಿವರು ಚಿತ್ರ ವೀಕ್ಷಿಸಿದ್ದು ಈ ಚಿತ್ರವನ್ನು ರಾಜ್ಯದಲ್ಲಿ ನಿಷೇಧಿಸಬಹುದೆಂದು ಗುಮಾನಿ ಎದ್ದಿದೆ.

ಇಂತಹ ಕೋಮುವಾದಿ ಶಕ್ತಿಗಳ ವಿರುದ್ಧ ನಿಷ್ಠುರ ಕ್ರಮಕ್ಕೆಗೊಂಡು ಕೋಮು ಸೌಹಾರ್ದತೆ ಸಾರುವ 'ಬಾಂಬೆ' ಚಿತ್ರವನ್ನು ಅಡೆತಡೆಯಿಲ್ಲದೆ ಪ್ರದರ್ಶಿಸುವಂತೆ ಸರ್ಕಾರ ನೋಡಿಕೊಳ್ಳಬೇಕು. ಕೋಮುವಾದಿಗಳನ್ನು ಎದುರಿಸದೆ ಸೌಹಾರ್ದತೆ ಕಾಪಾಡುವ ಸರ್ಕಾರದ ಯೋಚನೆಯೇ ಅಸಂಬದ್ಧವಾದುದು ಆದ್ದರಿಂದ ಸರ್ಕಾರವು ಚಿತ್ರದ ಪ್ರದರ್ಶನಕ್ಕೆ ಎಲ್ಲ ಕಡೆ ಅವಕಾಶ ಕಲ್ಪಿಸಬೇಕು ಸೂಕ್ತ ರಕ್ಷಣೆ ನೀಡಬೇಕು ಚಿತ್ರಕ್ಕೆ ಪೂರ್ತಿ ತೆರಿಗೆ ವಿನಾಯ್ತಿ ನೀಡಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿಯು ಒತ್ತಾಯಿಸಿದೆ.

ಕೈಮಗ್ಗ ನೇಕಾರರ ಬೃಹತ್ 'ಬೆಂಗಳೂರು ಚಲೋ'

ಮಾರ್ಚ್ 21ರಂದು ರಾಜ್ಯದ ವಿವಿಧೆಡೆಗಳಿಂದ ಬಂದ ಸಾವಿರಾರು ಕೈಮಗ್ಗ ನೇಕಾರರು ಚಿಕ್ಕಲಾಲ್ ಬಾಗ್ ನಿಂದ ಮೆರವಣಿಯೆನ್ನು ಹೋಗಿ ವಿಧಾನಸೌಧದ ಎದುರು ಕಬ್ಬನ್ ಪಾರ್ಕಿನಲ್ಲಿ ಧರಣಿ ನಡೆಸಿದರು.

ಸಿಐಟಿಯು ಅಡಿಯಲ್ಲಿ ನೇಕಾರರು ನಡೆಸಿದ ಹೋರಾಟದ ಫಲವಾಗಿ ಕಳೆದ ವರ್ಷ ಸರಕಾರ ಕನಿಷ್ಟ ವೇತನವನ್ನು ಪರಿಷ್ಕರಿಸಿ ಪ್ರಕಟಿಸಿತು. ಆದರೆ ನಿಗಮದ ಕೈವಾಡದಿಂದಾಗಿ ಅದರ ಲಾಭ ನಿಗಮದ ನೇಕಾರರಿಗೆ ದಕ್ಕಲಿಲ್ಲ. ಕನಿಷ್ಟ ವೇತನದ ಅಧಿಸೂಚನೆಯಲ್ಲಿ ಸೂಚಿಸಲಾದ ಜೀವನ ನಿರ್ವಹಣಾ ಭತ್ತೆಯನ್ನು ನಿಗಮದ ನೇಕಾರರಿಗೆ ನೀಡಲಾಗುತ್ತಿಲ್ಲ. ಕೆಲಸ ಕೊಡಲಾಗದ ದಿನಕ್ಕೆ ಜೀವನ ನಿರ್ವಹಣಾ ಭತ್ತೆಯನ್ನು ಕೊಡಬೇಕಾದ ತನ್ನ ಕರ್ತವ್ಯವನ್ನು ನಿಗಮವು ಉಲ್ಲಂಘಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿ ಹೇಳಿದೆ.

ಅಗತ್ಯ ವಸ್ತುಗಳ ಬೆಲೆಗಳು ಸಿಕ್ಕಾಪಟ್ಟೆ ಏರುತ್ತಿವೆ. ನಿಗಮದಲ್ಲಿ ನೇಯ್ಗೆ ಕೂಲಿಯ ದರಗಳನ್ನು ಬಂಗಾರಪ್ಪ ಸರಕಾರ ಏರಿಸಿತ್ತು. ಅಲ್ಲಿಂದ ಇಲ್ಲಿಯವರೆಗೆ ಬೆಲೆಗಳು ಸಿಕ್ಕಾಪಟ್ಟೆ ಏರುತ್ತಿವೆ. ನಿಗಮಕ್ಕಾಗಲೀ ಸರಕಾರಕ್ಕಾಗಲೀ ನೇಕಾರರ ಬಗ್ಗೆ ಎಳ್ಳಷ್ಟು ಕನಿಕರವಿಲ್ಲ.

ನೇಕಾರರಿಗೆ ಡಚ್ ಸರಕಾರದ ನೆರವಿನಿಂದ ಕಟ್ಟಿಸಿಕೊಡಲಾದ ಕಾರ್ಯಾಗಾರಗಳ ಸಾಲದ ಮೇಲಿನ ಬಡ್ಡಿಯನ್ನಾದರೂ ಸರಕಾರ ಮನ್ನಾ ಮಾಡಬೇಕಾಗಿದೆ. ಮನೆ ಇಲ್ಲದ ನೇಕಾರರಿಗೆ ತಮಿಳುನಾಡು ಸರಕಾರದ ಮಾದರಿಯಲ್ಲಿ ಮನೆಗಳನ್ನು ಒದಗಿಸಲು ವ್ಯಾಪಕ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ನಿಗಮದ ಅಧೀನದಲ್ಲಿರುವ ಖಾಲಿ ನಿವೇಶನಗಳನ್ನು ಅರ್ಹ ನೇಕಾರರಿಗೆ ವಿತರಣೆ ಮಾಡಬೇಕಾಗಿದೆ. ಅರಣ್ಯ ಜಮೀನಿನಲ್ಲಿ ನೇಕಾರರು ಕಟ್ಟಿಸಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸಿ ಪಟ್ಟಾ ಕೊಡಬೇಕಾಗಿದೆ. ಎಲ್ಲಾ ನೇಕಾರರಿಗೆ ಹಸಿರು ಕಾರ್ಡ್ ಗಳನ್ನು ನೀಡಬೇಕಾಗಿದೆ. ನೇಕಾರರ ಸರಳೀಕೃತ ಥ್ರಿಫ್ಟ್ ಫಂಡ್ ಯೋಜನೆಗೆ ಸರಕಾರ ಮಂಜೂರಾತಿ ನೀಡಬೇಕಾಗಿದೆ. ನೇಕಾರರ ವೃದ್ಧಾಪ್ಯ ಮಿತ್ರ ಯೋಜನೆ ಜಾರಿಗೆ ತರಬೇಕಾಗಿದೆ. ಕೈಮಗ್ಗದ ನೇಕಾರರ ಕಲ್ಯಾಣ ನಿಧಿ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕಾಗಿದೆ. ನೇಕಾರರ ಕಾಲನಿಗಳಲ್ಲಿ ಸಂಚಾರಿ ಆಸ್ಪತ್ರೆ ಸೌಲಭ್ಯವನ್ನು ಒದಗಿಸಬೇಕಾಗಿದೆ. 'ಮಾಸ್ಟರ್ಸ್ ವೀವರ್ಸ್' ಅಡಿಯಲ್ಲಿ ನೇಯುತ್ತಿರುವ ನೇಕಾರರು ಸ್ವತಂತ್ರವಾಗಿ ಉದ್ಯೋಗ ನಡೆಸಿಕೊಂಡು ಹೋಗಲು ಯೋಜನೆಯೊಂದನ್ನು ಚರ್ಚಿಸಬೇಕಾಗಿದೆ. ಕೈಮಗ್ಗ ಮೀಸಲಾತಿ ಕುರಿತಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕಾಗಿದೆ. ನಿಗಮದಲ್ಲಿ ಹಣದ ದುರುಪಯೋಗ ನಿಲ್ಲಬೇಕಾಗಿದೆ. ನಿಗಮದ ಆಡಳಿತದಲ್ಲಿ ನೇಕಾರರು ಪಾಲ್ಗೊಳ್ಳುವಂತಾಗಬೇಕಾಗಿದೆ. ರಾಜ್ಯಮಟ್ಟದ ಸಲಹಾ ಸಮಿತಿ ರಚಿಸಿ ನೇಕಾರರ ಸಮಸ್ಯೆಗಳ ಬಗ್ಗೆ ಅದರಿಂದ ಸರಕಾರ ಸಲಹೆಗಳನ್ನು ಪಡೆಯುವಂತಾಗಬೇಕಾಗಿದೆ.

ಈ ಎಲ್ಲಾ ಹಾಗೂ ಇತರ ಸ್ಥಳೀಯ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಲು ನೇಕಾರರ ಸಭೆಯನ್ನು ಕರೆಯಬೇಕೆಂದು ಜವಳಿ ಮಂತ್ರಿಗಳಾಗ ಶ್ರೀಯುತ ಪಿ.ಸಿ.ಸಿದ್ದನಗೌಡರ್ ಅವರನ್ನು ಕೇಳಿಕೊಳ್ಳಲಾಗಿತ್ತು. ಸಭೆ ಕರೆಯುವುದಾಗಿ ಮಂತ್ರಿಗಳು ನೀಡಿದ ಆಶ್ವಾಸನೆಯನ್ನು ಈಡೇರಿಸಲು ಅವರು ವಿಫಲರಾಗಿರುವುದರಿಂದ ಈ ಚಳುವಳಿ ಕಾರ್ಯಕ್ರಮ ಅನಿವಾರ್ಯವಾಯಿತು ಎಂದು ಸಮನ್ವಯ ಸಮಿತಿ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ ಹಾಗೂ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್ ಹೇಳಿದ್ದಾರೆ.

ಪಂಚಾಯತಿ ಚುನಾವಣೆಯಲ್ಲಿ ಜನತಾದಳದ ಯಶಸ್ಸು

ಕಾರ್ಯದರ್ಶಿ ಮಂಡಳಿ ಅಭಿನಂದನೆ

ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಕರ್ನಾಟಕ ರಾಜ್ಯದಲ್ಲಿ ತಾಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಚುನಾವಣೆಯಲ್ಲಿ ಅತ್ಯಧಿಕ ಬಹುಮತವನ್ನು ಗಳಿಸಿದ ಜನತಾದಳ ಪಕ್ಷವನ್ನು ಅಭಿನಂದಿಸಿದೆ. ಇದೇ ಸಮಯದಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿ ಬಿಜೆಪಿ ವಿಧಾನಸಭಾ ಚುನಾವಣೆಗಳಲ್ಲಿ ಬಹಳ ಯಶಸ್ಸು ಪಡೆದಿದ್ದರೂ ಕರ್ನಾಟಕ ರಾಜ್ಯದ ಜನತೆ ಬಿಜೆಪಿಯನ್ನು ಈ ಚುನಾವಣೆಗಳಲ್ಲಿ 3ನೇ ಪಕ್ಷವಾಗಿ ದೂರಸರಿಸಿ ಎರಡನೇ ಪಕ್ಷವೆಂಬ ಅದರ ಹೆಗ್ಗಳಿಕೆಗೆ ತೀವ್ರ ಪೆಟ್ಟು ನೀಡಿರುವುದು ಸ್ವಾಗತಾರ್ಹ ಎಂದೂ ಕಾರ್ಯದರ್ಶಿ ಮಂಡಳಿ ಹೇಳಿದೆ.

ಈ ಚುನಾವಣೆಗಳಲ್ಲಿ ಸಿಪಿಐ(ಎಂ)ಗೆ ಮೂರು ಜಿಲ್ಲಾ ಪಂಚಾಯತ್ ಸ್ಥಾನಗಳು 10 ತಾಲೂಕು ಪಂಚಾಯತ್ ಸ್ಥಾನಗಳನ್ನು ಗಳಿಸಿದೆಯೆಂದು ಇದುವರೆಗೆ ಬಂದ ವರದಿಗಳಿಂದ ತಿಳಿದು ಬಂದಿದೆ. ಸಿಪಿಐ(ಎಂ) ಪಕ್ಷವು ಸಣ್ಣ ಪ್ರಮಾಣದಲ್ಲಿ ಇದ್ದರೂ ಸ್ಥಳೀಯ ಆಡಳಿತೆಯಲ್ಲಿ ಭಾಗವಹಿಸಲು ಸಾಧ್ಯ ಮಾಡಿಕೊಟ್ಟಿದ್ದಕ್ಕೆ ಕರ್ನಾಟಕದ ಜನತೆಗೆ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಅಭಾರ ವ್ಯಕ್ತಪಡಿಸಿದೆ.

ಜನತೆ ಜನತಾದಳಕ್ಕೆ ನೀಡಿರುವ ವಿಜಯವನ್ನು ಆ ಪಕ್ಷ ದೇಶದ ನಾಶಕ್ಕೆ ಕಾರಣವಾಗುತ್ತಿರುವ ಕಾಂಗ್ರೆ ಆರ್ಥಿಕ ನೀತಿಗಳನ್ನು ಸೋಲಿಸುವುದಕ್ಕೆ ಹಾಗೂ ಕೋಮುವಾದಿ ಶಕ್ತಿಗಳನ್ನು ಜನತೆಯಿಂದ ಪ್ರತ್ಯೇಕಗೊಳಿಸುವುದಕ್ಕೆ ಬಳಸಲು ಎಡ ಪಕ್ಷಗಳ ಜತೆ ತೀವ್ರ ಕಾರ್ಯಾಚರಣೆಗಳಲ್ಲಿ ತೊಡಗಲು ಮುಂದಾಗಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯು ಜನತಾದಳಕ್ಕೆ ಅದರ ಸರ್ಕಾರಕ್ಕೆ ಕರೆ ನೀಡಿದೆ.

'ಮಹಾಚೈತ್ರ' ವಾಪಸಾತಿಗೆ ಸಮುದಾಯದ ಖಂಡನೆ

ಹಿಂದೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದ್ದ ಮತ್ತು ಸದ್ಯ ಕುವೆಂಪು ಮತ್ತು ಗುಲ್ಬರ್ಗ ವಿಶ್ವ ವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕವಾಗಿರುವ ಎಚ್.ಎಸ್. ಶಿವಪ್ರಕಾಶ್‌ರವರ ಸುಪ್ರಸಿದ್ಧ 'ಮಹಾಚೈತ್ರ' ನಾಟಕವನ್ನು, ಸಾಹಿತ್ಯ ಹಾಗೂ ಶಿಕ್ಷಣದ ಗಂಧ ಗಾಳಿ ಅರಿಯದ ಬಸವದಳದಂತಹ ಧಾರ್ಮಿಕ ಮೂಲಭೂತವಾದಿಗಳ ಒತ್ತಡಕ್ಕೆ ಮಣಿದು, ಕರ್ನಾಟಕ ರಾಜ್ಯ ಸರಕಾರವು ಪುಸ್ತಕ ಶೈಕ್ಷಣಿಕ ವರ್ಷ ಮುಗಿಯುವುದರೊಳಗಾಗಿಯೇ ಮತ್ತು ಇತ್ತೀಚೆಗೆ ತಾನೇ ನೇಮಿಸಿದ ತಜ್ಞ ಸಮಿತಿಯ ವರದಿಯ ಪಡೆಯುವ ಮುಂಚಿತವಾಗಿಯೇ ಪಠ್ಯ ಪುಸ್ತಕ ಪಟ್ಟಿಯಿಂದ ಹಿಂತೆಗೆಯುವಂತೆ ರಾಜ್ಯಪಾಲರಿಂದ ದಿಢೀರನೆ ಆಜ್ಞೆ ಹೊರಡಿಸಲಾಗಿದೆ. ರಾಜ್ಯ ಸಮುದಾಯ ಸಾಂಸ್ಕೃತಿಕ ಸಂಘಟನೆಯು ಹುಬ್ಬಳ್ಳಿ-ಧಾರವಾಡ ಘಟಕವು ತೀವ್ರವಾಗಿ ಖಂಡಿಸಿದೆ.

ಸುಮಾರು ಒಂದು ದಶಕಗಳ ಕಾಲ ಈ ನಾಟಕವು ಕರ್ನಾಟಕ ರಾಜ್ಯದ ಒಳಗೂ ಹೊರಗೂ ಸಾವಿರಾರು ರಂಗ ಪ್ರಯೋಗಗಳನ್ನು ಕಂಡಿದ್ದು, ಅಪಾರ ಜನಪ್ರಿಯತೆ ಪಡೆದಿದೆ. ಈ ನಾಟಕ ರಂಗ ತಜ್ಞರಿಂದ, ಸಾಹಿತಿಗಳಿಂದ, ವಿಮರ್ಶಕರಿಂದ ವಿಶ್ವವಿದ್ಯಾಲಯಗಳ ಮತ್ತು ರಾಜ್ಯ ಹಾಗೂ ಕೇಂದ್ರ ಅಕಾಡೆಮಿಗಳಿಂದ ಮೆಚ್ಚುಗೆ ಹಾಗೂ ಪ್ರಶಸ್ತಿಗಳನ್ನು ಪಡೆದಿದೆ. ಬಸವಣ್ಣನವರು ಹಲವು ಶತಮಾನಗಳ ಹಿಂದೆಯೇ ಹಿಂದೂ ಧರ್ಮದಲ್ಲಿದ್ದ ಜಾತಿ ಹಾಗೂ ವರ್ಣಾಶ್ರಮ ಪದ್ಧತಿ, ಅಸಮಾನತೆ, ತಾರತಮ್ಯ ಶೋಷಣೆ ಮುಂತಾದವುಗಳ ವಿರುದ್ಧ ಶ್ರಮಜೀವಿಗಳನ್ನು ಒಗ್ಗೂಡಿಸಿ ಪ್ರಾರಂಭಿಸಿದ ಸಾಮಾಜಿಕ ಕ್ರಾಂತಿಯ ಮಹಾನ್ ಮುನ್ನಡೆಯ ಆಶಯ ಹೊತ್ತಿರುವ ಈ ನಾಟಕಕ್ಕೆ ಅರ್ಥಪೂರ್ಣವಾಗಿ 'ಮಹಾಚೈತ್ರ' -ಮಹಾನ್ ವಿಜಯ ಎಂದೇ ಹೆಸರಿಸಿರುವುದನ್ನು ಗಮನಿಸಿದರೆ ಇದರಲ್ಲಿ ಬಸವಣ್ಣನವರಿಗಾಗಲೀ ಅಥವಾ ಅವರ ತತ್ವಗಳಿಗಾಗಲೀ ನಾಟಕಕಾರರು ಯಾವುದೇ ಅವಹೇಳನ ಮಾಡಲಿಲ್ಲ ಎಂದು ಸ್ಪಷ್ಟವಾಗುತ್ತದೆ.

ಆದರೆ ಬುದ್ಧ, ಜಿನರಂತೆಯೇ ಬಸವಣ್ಣನವರಂತಹ ಜನಪರ ಸಾಮಾಜಿಕ ಕ್ರಾಂತಿಕಾರರನ್ನು ದೈವತ್ವಕ್ಕೇರಿಸಿ ಅವರ ಸುತ್ತ ಮಠ, ಮಂದಿರ, ಸಂಸ್ಥಾನ, ಪಲ್ಲಕ್ಕಿ ಕಿರೀಟ, ರಥ, ಪುರಾಣ, ಪ್ರಸಾದ, ಜಗದ್ಗುರು ಪರಂಪರೆ ಬೆಳೆಸಿಕೊಂಡು ಬಂದಂತಹ ಪಟ್ಟಭದ್ರ ಪುರೋಹಿತಶಾಹಿಗಳ ಹಿತಾಸಕ್ತಿಗಳಿಗೆ ಸಾಮಾಜಿಕ ಕ್ರಾಂತಿಕಾರರ ಸಂದೇಶ ಅಪಾಯ ತಂದೊಡ್ಡ ಬಹುದಾದುದರಿಂದ 'ಮಹಾಚೈತ್ರ'ದಂತಹ ಸಾಹಿತ್ಯ ಪ್ರಕಾರಗಳ ವಿರುದ್ಧ ಸುಮ್ಮನೆ ಗುಲ್ಲೆಬ್ಬಿಸಲಾಗುತ್ತಿದೆ. ಹಿಂದೂ ಮೂಲಭೂತವಾದಿಗಳು ಸಂಘ ಪರಿವಾರದವರು ಇತ್ತೀಚೆಗಿನ ವರ್ಷಗಳಲ್ಲಿ ಮಂದಿರ, ಮಸೀದಿ, ಈದ್ಗಾ ವಿವಾದಗಳನ್ನೆಬ್ಬಿಸಿ ಕೋಮು ಗಲಭೆಗಳನ್ನು ಹರಡಿಸಿ ಮತ ರಾಜಕೀಯ ಬೆಳೆಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಭಾರತದ ಜಾತ್ಯಾತೀತತೆಯ ಮೌಲ್ಯಗಳಿಗೆ ಇದುವರೆಗೆ ಹೆಚ್ಚಾಗಿ ಬದ್ಧರಾಗಿರುವ ಬಸವಣ್ಣನವರ ಅಸಂಖ್ಯಾತ ಅನುಯಾಯಿಗಳನ್ನು ಹಿಂದೂ ಧಾರ್ಮಿಕ ಮೂಲಭೂತವಾದಕ್ಕೆಳೆಯುವ ಕುಟಿಲ ರಾಜತಾಂತ್ರಿಕತೆಯೂ ಈ ನಾಟಕ ವಿರೋಧಿಗಳಾದ ಬಸವದಳದವರದ್ದಾಗಿದೆ ಎಂದು ಸರಕಾರಕ್ಕೆ ಸಮುದಾಯ ಎಚ್ಚರಿಸಿದೆ.

'ಮಹಾಚೈತ್ರ'ವನ್ನು ಪಠ್ಯ ಪುಸ್ತಕ ಪಟ್ಟಿಯಿಂದ ಹಿಂತೆಗೆಯುವಲ್ಲಿ ಸರಕಾರವನ್ನು ಒತ್ತಾಯಿಸಿದುದರಲ್ಲಿ ಯಶಸ್ವಿಗೊಂಡ ಬಸವದಳದವರು ಈಗ ಪುಸ್ತಕವನ್ನೇ ಕಾನೂನು ಬಾಹಿರಗೊಳಿಸಬೇಕೆಂದೂ, ನಾಟಕರಾರರಿಗೆ ಇತ್ತ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳಬೇಕೆಂದೂ, ನಾಟಕಕರಾರು ತಮ್ಮ ಕೃತಿಗಾಗಿ ಕ್ಷಮೆಯಾಚಿಸಬೇಕೆಂದು ಅವರಿಗೆ ಗೆರಾವ್ ಹಾಕಿ ಜೀವಕ್ಕೆ ಅಪಾಯ ಒಡ್ಡುವುದಾಗಿಯೂ ಬೆದರಿಕೆ ಹಾಕಲಾಗುತ್ತಿದ್ದು, ಸಾಹಿತಿಗಳ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ ಎಂದು ಸಮುದಾಯ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಪಠ್ಯ ಪುಸ್ತಕಗಳು ಧರ್ಮಗ್ರಂಥಗಳಂತೆ ಪ್ರಶ್ನಾತೀತವಾಗಿರುವುದಿಲ್ಲ; ಬದಲು ಅವುಗಳಲ್ಲಿನ ವಿಷಯಗಳನ್ನು ಅನುಭವಗಳ, ವೈಚಾರಿಕತೆಯ ಒರೆಗಲ್ಲಿಗೆ ಹಚ್ಚಿ ಅರ್ಥೈಸಬೇಕಾಗುವುದು. ಅಸ್ಪಷ್ಟತೆ ಅಥವಾ ಅಪೂರ್ಣತೆಗಳಿದ್ದರೆ ಹೆಚ್ಚಿನ ಸಂಶೋಧನೆಗಳಿಂದ ಸತ್ಯಾಂಶವನ್ ಕಂಡುಕೊಳ್ಳಬೇಕಾಗುವುದು. ಇದೇ ಶಿಕ್ಷಣದ ವೈಜ್ಞಾನಿಕ ವಿಧಾನ. 'ಮಹಾಚೈತ್ರ' ಒಂದು ನಾಟಕ, ಅದು ಐತಿಹಾಸಿಕ ಗ್ರಂಥವಲ್ಲ. ಪಠ್ಯಪಸ್ತಕಗಳ ವಿಷಯಗಳಲ್ಲಿ ರಾಜಕೀಯ ಧಾರ್ಮಿಕ ಹಸ್ತಕ್ಷೇಪವನ್ನು ಸಮುದಾಯ ತೀವ್ರವಾಗಿ ಖಂಡಿಸಿದೆ.

ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತತೆಯ ಮೌಲ್ಯಗಳ ಆಧಾರದಲ್ಲಿ ಅಪಾರ ಜನಬೆಂಬಲ ಗಳಿಸಿದ ಹೊಸತಾಗಿ ಅಧಿಕಾರಕ್ಕೆ ಬಂದ ಜನತಾ ದಳ ಸರಕಾರವು 'ಮಹಾಚೈತ್ರ' ವಾಪಸಾತಿಯಂತಹ ತನ್ನ ತಪ್ಪು ಹೆಜ್ಜೆಗಳನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದೂ, ಈ ವರ್ಷದ ಅಂತಿಮ ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಈ ನಾಟಕ ಕೃತಿಯನ್ನು ಪುನಃ ಪಠ್ಯಪುಸ್ತಕವನ್ನಾಗಿ ಮುಂದುವರಿಸಲು ವಿಶ್ವ ವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್‌ಗಳಿಗೆ ಪೂರ್ಣ ಸ್ವಾಯತ್ತತೆ ನೀಡಬೇಕೆಂದು ಸಮುದಾಯವು ರಾಜ್ಯ ಸರಕಾರವನ್ನು ಒತ್ತಾಯಿಸುತ್ತದೆ. ಈ ದಿಸೆಯಲ್ಲಿ ರಾಜ್ಯದ ಎಲ್ಲಾ ಪ್ರಗತಿಪರ ಸಂಘಟನೆಗಲು ಹಮ್ಮಿಕೊಳ್ಳಬಹುದಾದ ಹೋರಾಟಗಳಲ್ಲಿ ಸಮುದಾಯವು ಪಾಲುಗೊಂಡು ಬೆಂಬಲಿಸುವುದಾಗಿ ತಿಳಿಸಿದೆ.

ಕರ್ನಾಟಕ ಸುದ್ಧಿ ಸಮಾಚಾರ

ವಿದ್ಯುತ್ ಮಗ್ಗ ಕಾರ್ಮಿಕರ ಮೇಲೆ ಲಾಠೀ ಪ್ರಹಾರ

ಸಿಐಟಿಯು ಖಂಡನೆ

ವಿದ್ಯುತ್ ಚಾಲಿತ ಮಗ್ಗದ ಕಾರ್ಮಿಕರ ಮೇಲೆ ಮಾರ್ಚ್ 21 ರಂದು ಪೋಲೀಸರು ಜರುಗಿಸಿದ ಕ್ರಮವನ್ನು ಸಿಐಟಿಯು ರಾಜ್ಯ ಸಮಿತಿ ತೀವ್ರವಾಗಿ ಪ್ರತಿಭಟಿಸಿದೆ. ನಗರದಲ್ಲಿ ವಿದ್ಯುತ್ ಚಾಲಿತ ಮಗ್ಗಗಳಲ್ಲಿ 1 ಲಕ್ಷ 25 ಸಾವಿರ ಮಂದಿ ಕಾರ್ಮಿಕರು ದುಡಿಯುತ್ತಿದ್ದಾರೆ ಇವರ ಜೀವನ ಸ್ಥಿತಿ ಶೋಚನೀಯ. 27 ವರ್ಷಗಳ ಹಿಂದೆ ಹೊರಡಿಸಿದ ಕನಿಷ್ಟ ವೇತನ ಮಾತ್ರ ಈ ಕಾರ್ಮಿಕರಿಗೆ ಕಳೆದ ವರ್ಷದವರೆಗೂ ಜಾರಿಯಲ್ಲಿದ್ದದ್ದು. 1993ರ ಕೊನೆಯವರೆಗೆ ಜಾರಿಯಲ್ಲಿದ್ದ ಕನಿಷ್ಟ ವೇತನದ ಪ್ರಕಾರ ವಿದ್ಯುತ್ ಚಾಲಿತ ಕಾರ್ಮಿಕರ ಮಾಸಿಕ ವೇತನ ವಲಯ 1ರಲ್ಲಿ ಬೆಂಗಳೂರು ನಗರ ಸೇರಿ ರೂ. 58.50 ಪೈಸೆ ಮಾತ್ರ ಇದ್ದದ್ದು. 1993ರ ನವಂಬರ್ 22ರಿಂದ 27 ರವರೆಗೆ ಸಿಐಟಿಯು ಏರ್ಪಡಿಸಿದ್ದ ಅನಿರ್ದಿಷ್ಟ ಅವಧಿಯ ಧರಣಿ ಮುಷ್ಕರದಿಂದ ಕೈಮಗ್ಗ, ವಿದ್ಯುತ್ ಚಾಲಿತ ಮಗ್ಗಗಳಲ್ಲಿ 1.1.94ರಿಂದ ಕನಿಷ್ಟ ವೇತನ ಪುನರ್ ಪರಿಶೀಲನೆಯಾಗಿ ಜಾರಿಯಲ್ಲಿದೆ ಇದನ್ನು ಅನುಸರಿಸಿ ವಿದ್ಯುತ್ ಚಾಲಿತ ಮಗ್ಗದಲ್ಲಿ ನೇಯಲಾಗುವ ಸೀರೆಗೆ(40 ಕೌಂಟ್) ಪ್ರತಿ ಮೀಟರ್‌ಗೆ 2 ರೂ 30 ಪೈಸೆಯಿಂದ 80 ಕೌಂಟ್‌ನ ಮೇಲಿರುವ ಸೀರೆಗೆ ರೂ. 4.75 ಪೈಸೆ ಸರಾಸರಿ ಒಂದು ದಿನದ ಉತ್ಪಾದನೆಗೆ 96ರೂನಷ್ಟು ಕೂಲಿ ನೀಡಬೇಕಾಗುತ್ತದೆ. ಇದಲ್ಲದೆ ಅದೇ ಪ್ರಕಟಣೆ ಅನುಸರಿಸಿ 1.4.94ರಿಂದ ಮೇಲೆ ಅನುಸರಿಸಿದ ಮೂಲ ವೇತನ ಅಲ್ಲದೆ ದಿನಕ್ಕೆ ರೂ. 2.94 ರಂತೆ ತುಟ್ಟಿಭತ್ಯೆ ನೀಡಬೇಕು. ಮುಂದೆ 1.4.95ರಿಂದ ದಿನದ ತುಟ್ಟಿಭತ್ಯೆ ರೂ. 9.64 ಆಗಲಿದೆ. ಹೀಗೆ ಪ್ರತಿದಿನ ಒಂದರ ಕೆಲಸಕ್ಕೆ ಹೆಚ್ಚು ಕಡಿಮೆ 100ರೂ ಕನಿಷ್ಟ ಕೂಲಿ ಪ್ರಕಟಣೆ ಹೊರಡಿಸಲು ಸಿಐಟಿಯು ನಡೆಸಿದ ಹೋರಾಟದಿಂದ ಸಾಧ್ಯವಾಗಿದೆ.

ಈ ಪ್ರಕಟಣೆಯನ್ನು ಜಾರಿ ಮಾಡಲು ಸೂಕ್ತ ಸಂಘಟನೆ ಇಲ್ಲದೆ ಇರುವುದು ದುರ್ದೈವ ಎಂದಿರುವ ಸಿಐಟಿಯು ರಾಜ್ಯ ಸರಕಾರದ ಕಾರ್ಮಿಕ ಇಲಾಖೆ ತಾನೇ ಪ್ರಕಟಿಸಿದ ಕನಿಷ್ಟ ಕೂಲಿ ಜಾರಿ ಮಾಡಿಸುವ ಬದಲು ಪೋಲೀಸ್ ಇಲಾಖೆ' ಲಾಠೀ ಪ್ರಹಾರ ಮಾಡಿದೆ ಎಂದು ಸಿಐಟಿಯು ಖಂಡಿಸಿದೆ.

ವಿದ್ಯುತ್ ಚಾಲಿತ ಮಗ್ಗದ ಕಾರ್ಮಿಕರ ಹೋರಾಟವನ್ನು ಸಿಐಟಿಯು ಬೆಂಬಲಿಸುವುದಾಗಿ ಹೇಳಿಕೆ ತಿಳಿಸಿದೆ.

ಸಿಪಿಐ(ಎಂ) ಖಂಡನೆ

ಸಿಪಿಐ(ಎಂ) ರಾಜ್ಯ ಸಮಿತಿ ಕೂಡಾ ಇದು ವಿನಾಕಾರಣ ನಡೆದ ಲಾಠೀಪ್ರಹಾರ ಹಲವರನ್ನು ಗಾಯಗೊಳಿಸಿರುವುದು ಹಾಗೂ ಹಲವರ ಮೇಲೆ ಪೋಲೀಸ್ ಕೇಸ್ ದಾಖಲು ಮಾಡಿರುವುದನ್ನು ಖಂಡಿಸಿದೆ. ಕೂಡಲೇ ಸರ್ಕಾರ ಕಾರ್ಮಿಕರಿಗೆ ನ್ಯಾಯವಾಗಿ ಸಿಗಬೇಕಾದ ಕನಿಷ್ಠ ಕೂಲಿ ಮತ್ತು ಇತರ ಸೌಲಭ್ಯಗಳನ್ನು ಜಾರಿ ಗೊಳಿಸಬೇಕೆಂದು ಒತ್ತಾಯಿಸಿದೆ.

ವಿಶ್ಲೇಷಣೆ ವಿಶ್ಲೇಷಣೆ ವಿಶ್ಲೇಷಣೆ ವಿಶ್ಲೇಷಣೆ ವಿಶ್ಲೇಷಣೆ ವಿಶ್ಲೇಷಣೆ ವಿಶ್ಲೇಷಣೆ

ಪಶ್ಚಿಮ ಭಾರತದಲ್ಲಿನ ವಿಧಾನಸಭಾ ಚುನಾವಣೆಗಳ ಫಲಶ್ರುತಿ
ಎಡಶಕ್ತಿಗಳೆದುರು ಹೊಸ ಸವಾಲು

-ಸುರ್ಜಿತ್

ನವೆಂಬರ್ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ ಸೋಲಿನ ನಂತರ ದೇಶದ ಗಮನ ಪಶ್ಚಿಮ ಭಾರತದ ಅತ್ಯಂತ ಕೈಗಾರೀಕೀಕೃತ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್‌ಗಳತ್ತ ತಿರುಗಿತು. ಫೆಬ್ರವರಿ ತಿಂಗಳಲ್ಲಿ ನಡೆದ ಚುನಾವಣೆಗಳಲ್ಲಿಯೂ ಅಲ್ಲಿಯ ಜನ ಆಂಧ್ರಪ್ರದೇಶ, ಕರ್ನಾಟಕದ ಜನ ಮಾಡಿದ್ದನ್ನೇ ಮಾಡಿದ್ದಾರೆ. ಆದರೆ ಈ ಎರಡು ತೀರ್ಪುಗಳಲ್ಲಿ ಒಂದು ನಿರ್ಣಾಯಕ ವ್ಯತ್ಯಾಸ ಇದೆ. ಈ ಬಾರಿ ಒಂದು ಸಮರ್ಥ ಜಾತ್ಯಾತೀತ ಪರ್ಯಾಯವಿಲ್ಲದ್ದರಿಂದ ಗುಜರಾತಿನಲ್ಲಿ ಬಿಜೆಪಿ, ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನಾ ಕೂಟ ಜನಗಳ ಅಸಂತೃಪ್ತಿಯ ಲಾಭ ಪಡೆಯುವಂತಾಯಿತು.

ಮಹಾರಾಷ್ಟ್ರದಲ್ಲಿ

ಈ ಚುನಾವಣೆಗಳಲ್ಲೂ ನವೆಂಬರ್ ಚುನಾವಣೆಗಳಲ್ಲಿದ್ದ ಪ್ರಶ್ನೆಗಳೇ ಇದ್ದವು. ರಾವ್ ಸರ್ಕಾರದ ಉದಾರೀಕರಣದ ನೀತಿಗಳ ಹೇರಿರುವ ಹೊರೆ ಹಾಗೂ ಕೋಮುವಾದಿ ಶಕ್ತಿಗಳೊಂದಿಗೆ ಅದರ ರಾಜಿ ನಿಲುವು. ಜತೆಗೆ ಮಹಾರಾಷ್ಟ್ರದಲ್ಲಿ ಕುಪ್ರಸಿದ್ಧ ಗಳಿಸಿದ ಅಲ್ಲಿಯ ಕಾಂಗ್ರೆಸ್ ಸರಕಾರದ ಕುಕೃತ್ಯಗಳೂ ಇದ್ದವು. ರಾವ್ ಸರಕಾರದಂತೆ ಶರದ್ ಪವಾರ್ ಮಂತ್ರಿಮಂಡಲದಲ್ಲೂ ವಿವಿಧ ಹಗರಣಗಳಲ್ಲಿ ಕುತ್ತಿಗೆಯ ವರೆಗೆ ಮುಳುಗಿತ್ತು. ಎನ್ರೋನ್ ವಿದ್ಯುತ್ ಯೋಜನೆಗಳಂತಹ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಲಾಭದ ಗ್ಯಾರಂಟಿ ನೀಡುವ ಯೋಜನೆ ಬಗ್ಗೆ ಮಿತಿಮೀರುವ ಕ್ರಮಗಳನ್ನು ಅದು ಕುರಿತು, ಮುಂಬೈ ಸರಣಿ ಸ್ಫೋಟಕ ನಂತರ ಮಾಫಿಯಾ ದೊರೆ ದಾವೂದ್ ಇಬ್ರಾಹಿಂ ಜೊತೆ ಸಂಪರ್ಕ ಬಯಲಿಗೆ ಬಂತು. ಟಾಡಾವನ್ನು ಮನಬಂದಂತೆ ಒಂದು ಕೋಮಿನ ವಿರುದ್ಧವೇ ಬಳಸಲಾಯಿತು. ಮಹಾರಾಷ್ಟ್ರ ಒಂದು ರಾಜ್ಯವಾದಂದಿನಿಂದ ಕಾಂಗ್ರೆಸ್‌ಗೆ ಸಂಬಂಧಪಟ್ಟವರ ಆಳ್ವಿಕೆಯಲ್ಲೇ ಇದ್ದ ಈ ರಾಜ್ಯದಲ್ಲಿ ಕಾಂಗ್ರೆಸ ಸದಸ್ಯ ಸಂಖ್ಯೆ 150ರಿಂದ 80ಕ್ಕಿಳಿಯಿತು.

ಇಲ್ಲಿ ಎಡ ಜಾತ್ಯಾತೀತ ಪರ್ಯಾಯ ಮುಂದಿಡುವ ಒಂದು ಪ್ರಯತ್ನವೂ ನಡೆಯಿತು. ಆದರೆ ಕೆಲವು ಪಕ್ಷಗಳ ಮಹತ್ವಾಕಾಂಕ್ಷೆಗಳಿಂದಾಗಿ ಸಫಲವಾಗಲಿಲ್ಲ. ಆ ಮಹತ್ವಾಕಾಂಕ್ಷೆ ಮಣ್ಣಾಗಿದೆಯಷ್ಟೇ ಅಲ್ಲ, ಬಿಜೆಪಿ-ಶಿವಸೇನೆ ಹಾಗೂ ಕಾಂಗ್ರೆಸ್ ನಡುವಿನ ಧ್ರುವೀಕರಣದಲ್ಲಿ ಸ್ವಲ್ಪ ನೆಲೆ ಕೂಡಾ ಕಳಕೊಂಡವು. ಜನತಾದಳ ಸಿಪಿಐ(ಎಂ) ಹಾಗೂ ಎಡಪಕ್ಷಗಳ ಪ್ರಸ್ತಾವಕ್ಕೆ ಗಮನ ಕೊಟ್ಟಿದ್ದರೆ ಚಿತ್ರ ಬೇರೆಯಾಗಬಹುದಿತ್ತು.

ಗುಜರಾತಿನಲ್ಲಿ

ಇಲ್ಲಿ ಪರಿಸ್ಥಿತಿ ತುಸು ಭಿನ್ನವಾಗಿತ್ತು. ಇಲ್ಲಿ ಅಧಿಕಾರದ ಸ್ಪರ್ಧೆಯಿದ್ದದ್ದು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ. 1990ರಲ್ಲಿ ಈ ರಾಜ್ಯದ ಜನ ಜನತಾದಳ ಬಿಜೆಪಿಗೆ ಅಧಿಕಾರ ನೀಡಿದ್ದರು. ಆದರೆ ವಿ.ಪಿ. ಸಿಂಗ್ ಸರಕಾರಕ್ಕೆ ರಥಯಾತ್ರೆಯ ಸಂದರ್ಭದಲ್ಲಿ ಬಿಜೆಪಿ ಬೆಂಬಲ ಹಿಂತೆಗೆದುಕೊಂಡ ನಂತರ ಗುಜರಾತಿನಲ್ಲೂ ಈ ಎರಡು ಪಕ್ಷಗಳು ಪರಸ್ಪರ ಅಗಲಿದವು. ದಿವಂಗತ ಮುಖ್ಯಮಂತ್ರಿ ಚಿಮಣ್ ಬಾಯಿ ಪಟೇಲ್ ತನ್ನ ಗುಂಪನ್ನು ಕಾಂಗ್ರೆಸ್ ಒಳಗೊಯ್ದರು. ಹೀಗೆ ಮತ್ತೆ ಕಾಂಗ್ರೆಸ್(ಐ) ಅಧಿಕಾರ ಪಟ್ಟವೇರಿತು. ಆಗಲೇ ಗುಂಪುಗಾರಿಕೆಯಿಂದ ಕೂಡಿದ್ದ ಪಕ್ಷದಲ್ಲಿ ಇನ್ನೊಂದು ಗುಂಪು ಸೇರಿದ ಹಾಗಾಯಿತು. ಹೀಗೆ ಗುಂಪು ಜಗಳದಿಂದ ಪೀಡಿತವಾದ, ಅಪಕೀರ್ತಿ ಹಚ್ಚಿಕೊಂಡ ಬಿಜೆಪಿ ಅಪಾಯದ ಎದುರಲ್ಲೂ ಒಂದಾಗಲಿಲ್ಲ. ನವೆಂಬರ್-ಡಿಸೆಂಬರ್ ಚುನಾವಣೆಗಳಲ್ಲಿದ್ದಂತೆ ಈ ಗ ಲ ೂ ಕಾಂಗ್ರೆಸ್-ವಿರೋಧಿ ಪ್ರವೃತ್ತಿ ಇತ್ತು. ಬಿಜೆಪಿ ಅದರ ಪ್ರಯೋಜನ ಪಡೆಯಿತು.

ಒರಿಸ್ಸಾದಲ್ಲಿ

ಇಲ್ಲಿ ಆಳುವ ಪಕ್ಷವೇನೋ ಬೇರೆ- ಆದರೂ ಪ್ರಶ್ನೆ ಅವೇ ಆಗಿದ್ದವು. ಬಿಜು ಪಟ್ನಾಯಕ್ ನೇತೃತ್ವದ ಜನತಾದಳ ಅವೇ ಆರ್ಥಿಕ ನೀತಗಳನ್ನು ಅನುಸರಿಸಿತು. ಮಾತ್ರವೇ ಅಲ್ಲ ಕೆಲವೊಮ್ಮೆ ಈ ನೀತಿಗಳನ್ನು ಹೊಗಳುತ್ತಾ ಕಾಂಗ್ರೆಸ್ಸನ್ನು ಮೀರಿಸಿತು. ತಮ್ಮನ್ನು ವಂಚಿಸಲಾಗಿದೆ ಎಂಬ ಭಾವನೆಯ, ಜನರ ದ್ವೇಷ ಭಾವನೆಯ ಪರಿಣಾಮವಾಗಿ ಜನತಾದಳ ಸದಸ್ಯ ಬಲ 123 ರಿಂದ 46ಕ್ಕಿಳಿಯಿತು. ಎಡ-ಜಾತ್ಯಾತೀತ ಪರ್ಯಾಯವಿಲ್ಲದ್ದರಿಂದ ಜನ ಕಾಂಗ್ರೆಸ್‌ನ ಹಿಂದೆ ಹೋದರು.

ಕೋಮುವಾದದ ಅಪಾಯ ಹೆಚ್ಚಿದೆ

ಹಿಂದೆ ಹೇಳಿದಂತೆ ದೇಶದ ಎರಡು ಅತೀ ಕೈಗಾರೀಕೃತ ರಾಜ್ಯಗಳಲ್ಲಿ ಈಗ ಮತ್ತೊಮ್ಮೆ ಕೋಮುವಾದದ ಅಪಾಯ ಹೆಚ್ಚಿದೆ. ಬಿಜೆಪಿ ಮತ್ತು ಶಿವಸೇನೆ ಅಧಿಕಾರದ ಚುಕ್ಕಾಣಿಗಳ ದುರುಪಯೋಗ ಮಾಡಿಕೊಂಡು ಆಡಳಿತ ಯಂತ್ರದೊಳಗೆ ನುಸುಳಿ ವಾತಾವರಣದಲ್ಲಿ ವಿಷ ಹಿಂಡಿ ತಮ್ಮ ಸ್ಥಾನಮಾನವನ್ನು ಕ್ರೋಢೀಕರಿಸಿಕೊಳ್ಳಲಿವೆ. ಆಗಲೇ ಘಾಸಿಗೊಂಡ ಅಲ್ಪಸಂಖ್ಯಾತರ ಮನಸ್ಸು ಈ ಕೋಮುವಾದಿ ಕೂಟದ ಅಧಿಕಾರಕ್ಕೆ ಬರುವುದನ್ನು ಸಂದೇಹ-ಭಯಗಳಿಂದಲೇ ನೋಡುತ್ತಾರೆ. ಆದರೆ ಇದರಿಂದ ಅವರು ಮೂಲಭೂತವಾದಿ ಶಕ್ತಿಗಳಿಗೆ ಬಲಿಬೀಳುವುದರಿಂದ ಅಲ್ಪಸಂಖ್ಯಾತರ ಹಕ್ಕುಗಳ ಅವರ ಭದ್ರತೆಯ, ಸೌಖ್ಯದ ರಕ್ಷಣೆ ಸಾಧ್ಯವಾಗುವುದಿಲ್ಲ. ಅವರ ಹಿತಾಸಕ್ತಿಗಳನ್ನು ಕಾಪಾಡಲು ಸದಾ ಮುಂದೆ ಬಂದಿರುವ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಕೈ ಜೋಡಿಸಿದರೆ ಮಾತ್ರ ಅದು ಸಾಧ್ಯ.

ಇನ್ನೂ ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಬಿಜೆಪಿ ಹೊಸ ಆರ್ಥಿಕ ನೀತಿಗಳನ್ನು ಆರಂಭದಿಂದಲೇ ಬೆಂಬಲಿಸುತ್ತ ಬಂದಿದೆ ಎಂದು ಗುಜರಾತಿನ ಹೊಸ ಮುಖ್ಯಮಂತ್ರಿಗಳೇ ಹೇಳಿಕೊಂಡಿದ್ದಾರೆ. ಮಹಾರಾಷ್ಟ್ರದಲ್ಲೂ ಏನೂ ಬದಲಾವಣೆಗಳಾಗುವುದಿಲ್ಲ. "ಬಾಂಗ್ಲಾ ದೇಶಿಗಳನ್ನು ಹೊರದಬ್ಬುವ" ಹೆಸರಲ್ಲಿ ಅಲ್ಪಸಂಖ್ಯಾತ ಕೋಮಿನ ಜನಗಳ ಮೇಲೆ ಗುರಿಯಿಡುವ ಸಾಧ್ಯತೆಯಿದೆ. ಮಹಾರಾಷ್ಟ್ರದಲ್ಲಿ ಶರದ್ ಪವಾರ್ ಆಳ್ವಿಕೆಯಲ್ಲಿ ಸಾವಿರಾರು ಮುಸ್ಲಿಮರನ್ನು ಬಾಂಗ್ಲಾದೇಶಿಗಳೆಂದು ತೋರಿಸಿ ಅವರ ಮತದಾನದ ಹಕ್ಕನ್ನು ವಂಚಿಸುವ ಪ್ರಯತ್ನ ನಡೆದಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಜನತಾಧಳ

ಜನತಾದಳದಲ್ಲಿರುವ ಅಸಮಂಜಸ ಹಾಗೂ ಅಸಂಬದ್ಧತೆ ಕೂಡಾ ಚುನಾವಣೆಗಳಲ್ಲಿ ಬಯಲಿಗೆ ಬಂತು. ಜನಗಳಲ್ಲಿ ಸಾಮೂಹಿಕವಾಗಿ ಕಾಂಗ್ರೆಸ್ -ವಿರುದ್ಧ ಮನೋಭಾವನೆಯಿದ್ದರೂ ಮಹಾರಾಷ್ಟ್ರದಲ್ಲಿ ತಾನೊಂದು ಪರ್ಯಾಯ ಎಂದು ಮುಂದಿಡಲು ಅದಕ್ಕೆ ಸಾಧ್ಯವಾಗಲಿಲ್ಲ. ಹಿಂದೆ ಕೂಡಾ ಎಡಪಕ್ಷಗಳು ಮಾಡಿದಂತೆ ಆಳುವ ಪಕ್ಷದ ನೀತಿಗಳನ್ನು ಎದುರಿಸಿ ಸಾಮೂಹಿಕ ಆಂದೋಲನಗಳನ್ನು ಹರಿಯಬಿಟ್ಟು ಜತೆಗೇ ಪರ್ಯಾಯ ನೀತಿಗಳನ್ನು ಜನರ ಮುಂದಿಡುವಲ್ಲಿ ಅದು ವಿಫಲಗೊಂಡಿತ್ತು. ಒರಿಸ್ಸಾದಲ್ಲಿ ತನ್ನ ರಾಜ್ಯಘಟಕ ಕಾಂಗ್ರೆಸ್ಸಿನ ನೀತಿಗಳನ್ನೇ ಅನುಸರಿಸಲು ಬಿಟ್ಟಿತ್ತು, ಜನತಾದಳ ವಿವಿಧ ರಾಜ್ಯಗಳಲ್ಲಿ ವಿಭಿನ್ನ ನೀತಿಗಳನ್ನು ಅಂಗೀಕರಿಸಿತು ಹಾಗೂ ಕೆಲವು ಘಟಕಗಳು ತಮ್ಮ ಮಿತ್ರರ ಬಗ್ಗೆ ವರ್ತಿಸುವಾಗ ಸಂಕುಚಿತ ನಿಲುವು ತಳೆಯಿತು ಎಂದರೆ ತಪ್ಪಾಗಲಾರದು.

ನವಂಬರ್ -ಡಿಸೆಂಬರ್ ತಿಂಗಳಲ್ಲಿ ದಕ್ಷಿಣ ಭಾರತದ ಆಂಧ್ರ, ಕರ್ನಾಟಕದ ಜನ ಮಾಡಿದ್ದನ್ನೇ ಈಗ ಪಶ್ಚಿಮ ಭಾರತದ ಮಹಾರಾಷ್ಟ್ರ-ಗುಜರಾತಿನ ಜನ ಮಾಡಿದ್ದಾರೆ. ಆದರೆ ಮುಖ್ಯ ವ್ಯತ್ಯಾಸವೆಂದರೆ ಜನರ ಅಸಂತೃಪ್ತಿಯ ಲಾಭ ಕೋಮುವಾದಿಗಳಿಗೆ ದೊರೆತಿದೆ. ಇದು ರಾವ್ ಸರಕಾರದ ಆರ್ಥಿಕ ನೀತಿಗಳೊಂದಿಗೆ ದೇಶದ ಎದುರು ಒಡ್ಡಿರುವ ಹೊಸ ಅಪಾಯ ಎನ್ನುತ್ತಾರೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್. ಈ ಸವಾಲುಗಳನ್ನು ಎದುರಿಸಲು ಎಡ-ಪ್ರಜಾಪ್ರಭುತ್ವ ಶಕ್ತಿಗಳು ಮುಂದೆ ಬರದಿದ್ದರೆ ಇತಿಹಾಸದ ಚಕ್ರವನ್ನು ಹಲವು ವರ್ಷಗಳಷ್ಟು ಹಿಂದೆ ತಳ್ಳಿದಂತಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಆದ್ದರಿಂದ ಮುಂಬರುವ ದಿನಗಳು ಭಾರೀ ನಿರ್ಣಾಯಕ ಮಹತ್ವದ ದಿನಗಳು ಎಂದೂ ಅವರು ಎಚ್ಚರಿಸಿದ್ದಾರೆ.


ಬಿಹಾರದಲ್ಲಿ ಧಾಳಿ

ಬಿಹಾರದಲ್ಲಿ ಪ್ರಜಾಪ್ರಭು[ತ್ವ] ಪ್ರಕ್ರಿಯೆಯನ್ನು ಹಾಳುಗೆಡಹು[...] ಆ ಮೂಲಕ ಎಡ, ಪ್ರಜಾಪ್ರ[...] ಭುತ್ವ ಹಾಗೂ ಜಾತ್ಯಾತೀ[ತ] ಶಕ್ತಿಗಳು, ಮೇಲುಗೈ ಪಡೆಯ[...] ದಂತೆ ತಡೆಯುವ ಸತತ ಪ್ರಯತ್ನ ನಡೆದಿದ[...] ಕಾಂಗ್ರೆಸ್(ಐ), ಬಿಜೆಪಿ ವಿಭಿ[ನ್ನ] ಕಾರಣಗಳಿಂದಾಗಿ ಇದರ[...] ಒಂದಾಗಿದ್ದಾರೆ. ಅವರಿ[...] ಮುಖ್ಯ ಚುನಾವಣಾ ಆಯುಕ್ತರ ಸಮರ್ಥ[...] ಬೆಂಬಲವೂ ದೊರೆತಿದೆ. ಕಾಂಗ್ರೆಸ್ ಅಧಿಕಾರ[ದ]ಲ್ಲಿದ್ದಾಗ ನಡೆದ ಹಿಂದಿನ ವಿಧಾನ ಸ[ಭಾ] ಚುನಾವಣೆಗಳಲ್ಲಿ ಕೊಲೆಗಳ, ಮತಗಟ್ಟೆ ಅಪ[ಹ]ರಣಗಳ ಸಂಖ್ಯೆ ಈ ಬಾರಿಗಿಂತ ಹೆಚ್ಚಿದ್ದರೂ "ಮುಕ್ತ ಹಾಗೂ ನ್ಯಾಯ ಪೂರ್ವ ಚುನಾವಣೆ" ನಡೆಸುವ ಭರದಲ್ಲಿ ಮುಖ್ಯ ಚುನಾವಣಾ ಆಯುಕ್ತರು ಎಲ್ಲ ರೀತಿಯ ಬೆದರಿಕೆಗಳನ್ನು ಹಾ[ಕಿ] ಮೂರು ಬಾರಿ ಚುನಾವಣೆಗಳನ್ನು ಮುಂದೂ[ಡಿ]ದರು. ಹಲವು ಅಧಿಕಾರಿಗಳನ್ನು ವರ್ಗಾ[ವಣೆ] ಮಾಡಿದ ನಂತರ ಎಡ ಮತ್ತು ಸಿಪಿಐ[...] ಮೇಲೆ ಅಲ್ಲಿ ಬೃಹತ್ ದಮನ ಹರಿಯಬಿಡ[ಲಾ]ಗಿದೆ. ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ತರು[...] ಹುನ್ನಾರವಿದ್ದರೂ, ಎಡ ಶಕ್ತಿಗಳು ಮ[...] ಜನತಾದಳ ತಮ್ಮ ಪ್ರಾಬಲ್ಯ ಉಳಿಸಿಕೊಳ್ಳುತ್ತಾ[...] ಕಾಂಗ್ರೆಸ್, ಬಿಜೆಪಿಯ ಪಿತೂರಿಗಳನ್ನು ಸೋ[ಲಿ]ಸುತ್ತಾರೆ ಎಂಬ ಸಂಕೇತಗಳು ಇವೆ.

ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು

ಈ ಹೊತ್ತಿಗೆ ಕಾಂಗ್ರೆಸ್ 13 ರಾಜ್ಯಗಳ[ಲ್ಲಿ] ಅಧಿಕಾರ ಕಳಕೊಂಡಿದೆ. ಆದರೆ ಕೋಮುವಾ[ದಿ] ಶಕ್ತಿಗಳು ಅಧಿಕಾರಕ್ಕೆ ಬರಬೇಕೆಂಬ ಜನ[...] ಇಚ್ಛೆಯಿಲ್ಲ. ಒಂದು ವಿಭಾಗ ಕೋಮುವಾ[ದಿ] ಘೋಷಣೆಗಳಿಗೆ ತಾತ್ಕಾಲಿಕವಾಗಿ ಮ[...] ಹೋದರೂ ವಿಚ್ಛಿದ್ರಕಾರಿ ಘೋಷಣೆಗಳು ಅ[...]ರನ್ನು ಬಹಳ ದೂರ ಒಯ್ಯಲಾರವು. ಆದ[ರೆ] ಒಂದು ವಿಶ್ವಾಸಾರ್ಹ ಪರ್ಯಾಯ ಮುಂ[...] ಬರದಿದ್ದರೆ ಬಲಪಂಥೀಯ ಶಕ್ತಿಗಳು ಸನ್ನಿವೇ[ಶ...]

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್



ಚುನಾವಣಾ ಸುಧಾರಣೆಯ ಪ್ರಶ್ನೆಯನ್ನು ಮೂಲೆಗೊತ್ತಿದ
ಶೇಷನ್‌ರ ಗುರುತು ಪತ್ರದ ಅಬ್ಬರ

ಶೇಷನ್‌ರ ಸ್ವೇಚ್ಛಾಚಾರದ ವರ್ತನೆ ಹಾಗೂ ಪ್ರಚಾರ ಗಿಟ್ಟಿಸುವ ಗೀಳಿನಿಂದಾಗಿ ಚುನಾವಣಾ ಸುಧಾರಣೆಗಳ ನೈಜ ಪ್ರಶ್ನೆ ಮೂಲೆಗೊತ್ತಲ್ಪಟ್ಟಿದೆ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಈ ದಿಕ್ಕಿನಲ್ಲಿ ಸಿಪಿಐ(ಎಂ) ನಿಲುವನ್ನು ಎತ್ತಿ ಹಿಡಿದಿದೆ ಎಂದಿರುವ ಪೊಲಿಟ್ ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್ ಈ ದೀರ್ಘಕಾಲದ ಕ್ರಮವನ್ನು ಜಾಗರೂಕತೆಯಿಂದ ನಡೆಸಬೇಕಾದ ಅಗತ್ಯವನ್ನು ವಿವರಿಸಿದ್ದಾರೆ

-ಪ್ರಕಾಶ್ ಕಾರಟ್

ಗುರುತು ಪತ್ರವಿಲ್ಲದೆ ಚುನಾವಣೆಯಿಲ್ಲ ಎಂಬ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ರ ಬೆದರಿಕೆ ಕೊನೆಗೂ ಸಾಗಲಿಲ್ಲ. ಜನವರಿ 17ರಂದು ಸುಪ್ರೀಂ ಕೋರ್ಟ್ ಇದಕ್ಕೆ ಸಂಬಂಧಪಟ್ಟ ಶೇಷನ್ ರ ಆಜ್ಞೆಗಳ ಮೇಲೆಲ್ಲಾ ತಡೆಯಾಜ್ಞೆ ನೀಡಿತು. ಮತ್ತೆ-ಮತ್ತೆ ಕಾಲಮಿತಿ ಗೊತ್ತುಮಾಡುತ್ತಾ ಆ ಅವಧಿಯೊಳಗೆ ಗುರುತು ಪತ್ರ ನೀಡದಿದ್ದರೆ ಚುನಾವಣೆಯಿಲ್ಲ ಎಂದು ಹೇಳುವಾಗಲೆಲ್ಲಾ ಶೇಷನ್ ತನ್ನ ಅಧಿಕಾರ ವ್ಯಾಪ್ತಿ ಮೀರಿ ವರ್ತಿಸುತ್ತಿದ್ದರು ಎಂಬುದು ಸ್ಪಷ್ಟ.


ಈ ಇಡೀ ಪ್ರಕರಣ ಚುನಾವಣಾ ದುರಾಚರಣೆಗಳನ್ನು ನಿವಾರಿಸಲು ಎಂತಹ ಚುನಾವಣಾ ಸುಧಾರಣೆಗಳು ಬೇಕು ಎಂಬ ಬಗ್ಗೆ ಹಲವು ಪ್ರಶ್ನೆಗಳನ್ನೆತ್ತಿದೆ. ಇದರಲ್ಲಿ ಗುರುತು ಪತ್ರ ನೀಡಿಕೆಯನ್ನು ಮಾತ್ರವೇ ಏಕೈಕ ಪ್ರಶ್ನೆಯಾಗಿ ಮಾಡಿದ್ದರಿಂದ ಚುನಾವಣಾ ಸುಧಾರಣೆಯ ಮುಖ್ಯ ಅಂಶಗಳನ್ನೆಲ್ಲಾ ಹಿನ್ನೆಲೆಗೆ ತಳ್ಳಿದಂತಾಗಿದೆ. ಮುಖ್ಯ ಚುನಾವಣಾ ಆಯುಕ್ತರ ಸ್ವೇಚ್ಛಾಚಾರದ ವರ್ತನೆ, ಪ್ರಚಾರಗಿಟ್ಟಿಸುವ ತವಕದಿಂದಾಗಿ ನಿಜವಾದ ಚುನಾವಣಾ ಸುಧಾರಣೆಯ ಪ್ರಶ್ನೆಗಳು ಮೂಲೆಗೆ ತಳ್ಳಲ್ಪಟ್ಟಿವೆ.

ಇಡೀ ಚುನಾವಣಾ ಸುಧಾರಣಾ ಕ್ರಮಗಳಲ್ಲಿ ಬಹುಪಯೋಗಿ ಗುರುತುಪತ್ರ ನೀಡಿಕೆ ಒಂದು ಕ್ರಮವಷ್ಟೆ. ಇಂತಹ ಗುರುತುಪತ್ರ ನೀಡಿಕೆ ಕೆಲಸ ಇತರ ಹಲವಾರು ಕ್ರಮಗಳೊಂದಿಗೇ ನಡೆಯಬೇಕಾಗುತ್ತದೆ ಎಂದು ಸಿಪಿಐ(ಎಂ) ಆರಂಭದಿಂದಲೂ ಹೇಳಿಕೊಂಡು ಬಂದಿದೆ. ಇದರಲ್ಲಿ ಚುನಾವಣಾ ಸುಧಾರಣೆ ಕುರಿತ ದಿನೇಶ್ ಗೋಸ್ವಾಮಿ ವರದಿ ಬಹುಪಯೋಗಿ ಗುರುತುಪತ್ರ ನೀಡಬೇಕೆಂದು ಶಿಫಾರಸು ಮಾಡಿದ್ದರೂ ಶೇಷನ್ ಕೇವಲ ಮತದಾರ ಗುರುತು ಪತ್ರ ನೀಡುವ ಬಗ್ಗೆಯಷ್ಟೇ ಒತ್ತಾಯ ಹಾಕಲಾರಂಭಿಸಿದರು. ಒಬ್ಬ ಪೌರನಿಗೆ ಈ ಬಹುಪಯೋಗಿ ಗುರುತು ಪತ್ರ ಹೆಚ್ಚು ಪ್ರಯೋಜನಕಾರಿಯಾಗುತ್ತಿತ್ತು.

ಈ ಗುರುತು ಪತ್ರವನ್ನು ನೀಡುವ ಕೆಲಸವನ್ನು ಎಂತಹ ಅವಸರ ಹಾಗೂ ಯಾವ ಯೋಚನೆಯೂ ಇಲ್ಲದೆ ಮುಗಿಸುವ ತವಕದಿಂದಾಗಿ ಸಮಸ್ಯೆ ಬಗೆಹರಿಯುವ ಬದಲು ಹೊಸ ಸಮಸ್ಯೆಗಳೇ ಹುಟ್ಟಿಕೊಂಡಿವೆ. ಮುಖ್ಯ ಚುನಾವಣಾ ಆಯುಕ್ತರನ್ನು ಕಣ್ಣು ಮುಚ್ಚಿ ಆರಾಧಿಸುವವರನ್ನು ಬಿಟ್ಟು ಉಳಿದೆಲ್ಲರಿಗೂ ಗುರುತು ಪತ್ರ ನೀಡುವ ಕೆಲಸ ಎಷ್ಟು ಕ್ಲಿಷ್ಟವಾದದ್ದು, ಅದಕ್ಕೆ ಎಷ್ಟೊಂದು ಸಮಯ ಬೇಕು ಎಂದು ಸ್ಫಟಿಕದಷ್ಟು ಸ್ಪಷ್ಟ. ನಮ್ಮ ಅತ್ಯಂತ ಮೇಲು ಕೀಳುಗಳಿಂದ, ಜಾತಿ ಭೇದಗಳಿಂದ ತುಂಬಿದ ಸಮಾಜದಲ್ಲಿ ಈ ರೀತಿ ಗುರುತುಪತ್ರ ನೀಡಿಕೆಯ ಕೆಲಸವನ್ನು ಅಧಿಕಾರಶಾಹೀ ರೀತಿಯಲ್ಲಿ ಮಾಡಿ ಮುಗಿಸುವ ಕೆಲಸದಿಂದ ಅತೀ ಹೆಚ್ಚು ಕಷ್ಟ ಪಡಬೇಕಾದವರು ನಗರಗಳಲ್ಲಿನ ಮತ್ತು ಗ್ರಾಮೀಣ ಬಡವರು.

ಗುರುತು ಪತ್ರ ಮಂತ್ರದಂಡವಲ್ಲ

ಚುನಾವಣೆಗಳಲ್ಲಿ ಭ್ರಷ್ಟ ನಡವಳಿಕೆಗಳನ್ನು ನಿರ್ಮೂಲನ ಮಾಡುವ ಮಂತ್ರದಂಡ ಇದು ಎಂದು ಶೇಷನ್ ಹೇಳುವಾಗ ಶ್ರೀಮ[ಂತ] ಹಾಗೂ ಮೇಲ್ಮಧ್ಯಮ ವರ್ಗಗಳ ಜನರೇನೋ ಚಪ್ಪಾಳೆ ಕುಟ್ಟಬಹುದು. ಮನೆ, ಟೆಲಿಫೋನ್, ಕಾರು, ಶಾಶ್ವತ ಉದ್ಯೋಗ ವಿರುವವರಿಗೆ ತಾ[ವು] ಭಾರತೀಯ ಪೌರರು ಎಂದು ಹೇಳಿಕೊಳ್ಳ[...] ಆ ಮೂಲಕ ಗುರುತು ಪತ್ರ ಪಡೆಯ[ಲು] ಕಷ್ಟವೇನೂ ಇಲ್ಲ. ಆದರೆ ಇಂದು ಇಲ್ಲಿ ನಾ[ಳೆ] ಇನ್ನೊಂದೆಡೆ ಕೆಲಸ ಮಾಡಬೇಕಾದವರು, ಕಾ[ಲು]ದಾರಿಗಳಲ್ಲಿ ಮಲಗುವವರು, ಕೊಳೆಗೇರಿ ವಾ[ಸಿ]ಗಳು, ಲಾಭ ಕೊಳ್ಳೆ ಹೊಡೆಯುವ ಭೂಮಾ[ಲೀ]ಕರು ಹಾಗೂ ಕಾಂಟ್ರಾಕ್ಟರುಗಳ ಮರ್ಜಿಯ[ಲ್ಲಿ] ಬದುಕಿರುವ ಕೋಟ್ಯಾಂತರ ಜನರಿಗೆ ಮ[...] ಇಂತಹ ಒಂದು ಗುರುತುಪತ್ರ ಪಡೆಯುವ[ುದು,] ಪಡೆದರೂ ತಮ್ಮ ಬಳಿ ಉಳಿಸಿಕೊಳ್ಳುವ[ುದು] ಬಹಳ ಕಷ್ಟದ ಕೆಲಸ. ಆದ್ದರಿಂದ ಗುರುತು[ಪತ್ರ] ನೀಡುವ ಕೆಲಸ ಒಂದು ದೀರ್ಘ ಅವಧಿ[ಯ] ಕೆಲಸವಾಗಬೇಕಿತ್ತು. ಮೊದಲು ಜನಗಳ ನಡು[ವೆ] ಸಾಕಷ್ಟು ಪ್ರಚಾರ, ಹಂತ ಹಂತವಾಗಿ ಕೆಲ[ಸ,] ಪ್ರತಿ ಹಂತದಲ್ಲಿ ಸಾರ್ವಜನಿಕ ಆಕ್ಷೇಪಗಳ[ನ್ನು] ಆಹ್ವಾನಿಸಿ ಪರಾಮರ್ಶೆ, ಇವೆಲ್ಲಾ ಈ ಕೆಲ[ಸ...]






ದಿದ್ದರೆ ಬಲಪಂಥೀಯ ಶಕ್ತಿಗಳು ಸನ್ನಿ ಶದ ಲಾಭ ಪಡೆದು ದೇಶದಲ್ಲಿ ಾಪ್ರಭುತ್ವ ಆಂದೋಲನದ ಮುಂದಿನ ವಣಿಗೆಗೆ ಒಂದು ಗಂಭೀರ ಬೆದರಿಕೆ ಡ್ಡುತ್ತವೆ.

ಈ ಸೋಲುಗಳ ನಂತರವೂ ಕಾಂಗ್ರೆಸ್ ಗಲೂ ದೇಶದ ಅತಿದೊಡ್ಡ ರಾಜ ಯ ಶಕ್ತಿಯಾಗಿಯೇ ಉಳಿದಿದೆ. ಮಹಾ ಷ್ಟ್ರದಲ್ಲಿ ಬಿಜೆಪಿ-ಶಿವಸೇನೆ ಕೂಟ ಶೇ. ಮತಗಳಿಸಿದ್ದಾರೆ. ಕಾಂಗ್ರೆಸ್31 ಶೇ. ತಗಳಿಸಿದೆ. ಆದರೆ ಐ.ಎಂ.ಎಫ್.-ವಿಶ್ವ ಂಕ್ ಹೇರಿದ ನೀತಿಗಳನ್ನು ಮುಂದು ಸುತ್ತಿರುವುದರಿಂದ ಅದರ ಜನಬೆಂ ಇನ್ನಷ್ಟು ಕುಸಿಯುವುದನ್ನು ತಡೆ ಲು ಸಾಧ್ಯವಿಲ್ಲ.

ನವಂಬರ್ -ಡಿಸೆಂಬರ್ ಚುನಾವಣೆ ಕಾಂಗ್ರೆಸ್‌ನೊಳಗೆ ನೀತಿಗಳ ಪ್ರಶ್ನೆಯ ಲೆ ಒಂದು ಚರ್ಚೆ ಆರಂಭವಾಗಲು ಣವಾದವು. ಎಡಪಕ್ಷಗಳು ಈ ದಲೇ ಎತ್ತಿದ್ದ ಪ್ರಶ್ನೆಗಳನ್ನು ಎತ್ತಲಾ ತು. ಆದರೆ ಆ ಪ್ರಶ್ನೆಗಳನ್ನು ಎದುರಿ ಬದಲು ಅದನ್ನು ದಮನ ಮಾಡುವ ಯತ್ನ ನಡೆಯಿತು. ಈ ದಾರಿ ಕಾಂಗ್ರೆ ೊಳಗಿನ ಬಿಕ್ಕಟ್ಟನ್ನು ಇನ್ನಷ್ಟು ಹದಗೆಡಿ ದು ಖಂಡಿತ. ಅದು ಯಾವ ರೂಪ ಯುತ್ತದೆ ಎಂದು ಮುಂಬರುವ ದಿನ ಷ್ಟೇ ಗೊತ್ತಾಗುತ್ತದೆ. ಮುಂದಿನ ರ್ವತ್ರಿಕ ಚುನಾವಣೆಗೆ ಒಂದೇ ವರ್ಷ ಉಳಿದಿದೆ. ದೇಶ ತಕ್ಷಣ ಚುನಾವಣೆಗೆ ೋಗುವಲ್ಲಿ ಆಸಕ್ತಿಯಿಲ್ಲ. ಆದರೆ ಅಷ್ಟರಲ್ಲೇ ಗ್ರೆಸ್ಸಿನೊಳಗಿನ ಬಿಕ್ಕಟ್ಟು ಹದಗೆಟ್ಟು ಚುನಾ ಗಳನ್ನು ಮೊದಲೇ ನಡೆಸಬೇಕಾದ ಪರಿಸ್ಥಿತಿ ಬರಲೂ ಬಹುದು.

ಮುಂದಿನ ದಾರಿ

ಕಾಂಗ್ರೆಸ್ ಸರ್ಕಾರದ ಪ್ರಸ್ತುತ ನೀತಿಗಳು ಒಡ್ಡಿರುವ ಅಪಾಯದೊಂದಿಗೆ ಮೂರು ರಾಜ್ಯಗಳೂ ಕೋಮುವಾದಿ ಶಕ್ತಿಗಳು ಅಧಿಕಾರ ಗಳಿಸಿರುವ ಹೊಸ ಅಪಾಯ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳಿಗೆದುರು ಹೊಸ ಅಪಾಯ ಒಡ್ಡಿದೆ. ಆರ್ಥಿಕ ನೀತಿಗಳ ವಿರುದ್ಧ ನಮ್ಮ ಹೋರಾಟವನ್ನು ತೀವ್ರಗೊಳಿಸಿ ಅಲ್ಪಸಂಖ್ಯಾತ ಹಕ್ಕುಗಳ, ಜಾತ್ಯಾತೀತತೆಯ ರಕ್ಷಣೆಗೆ ಮುಂದೆ ಬರಲು ನಮಗೆ ಸಾಧ್ಯವಾಗದಿದ್ದರೆ ಇತಿಹಾಸದ ಚಕ್ರವನ್ನು ಬಹಳ ವರ್ಷಗಳಷ್ಟು ಹಿಂದೆ ತಳ್ಳಿದಂತಾಗುತ್ತದೆ. ಆದ್ದರಿಂದ ಈ ಅಪಾಯವನ್ನು ದೂರಮಾಡಲು ಸಕಲ ಪ್ರಯತ್ನ ನಡೆಸಬೇಕು. ಇದರಲ್ಲಿ ಎಡಪಕ್ಷಗಳು ಭಾರೀ ಜವಾಬ್ದಾರಿಯನ್ನು ಹೊರಬೇಕು. ಮುಂಬರುವ ದಿನಗಳು ದೇಶದ ಭವಿಷ್ಯತ್ತಿನ ದೃಷ್ಟಿಯಿಂದ ಬಹಳ ನಿರ್ಣಾಯಕ ಮಹತ್ವದ ದಿನಗಳು. ಈ ಸವಾಲನ್ನು ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಮೌಲ್ಯಗಳನ್ನು ರಕ್ಷಿಸುವಲ್ಲಿನ ಆಸಕ್ತಿ ಹೊಂದಿರುವವರು, ಜನರಲ್ಲಿ ರಾಷ್ಟ್ರೀಯ ಐಕ್ಯತೆ ಮತ್ತು ಆರ್ಥಿಕ ಸ್ವಾತಂತ್ರ್ಯದ ರಕ್ಷಣೆಯ ಭಾವನೆಯನ್ನು ಜಾಗೃತಗೊಳಿಸಲು ಸಮರ್ಥರಾದರು ಮಾತ್ರ ಎದುರಿಸಲು ಸಾಧ್ಯ. ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರತಿಗಾಮಿ ನೀತಿಗಳನ್ನು ಎದುರಿಸುವ ಏಕೈಕ ದಾರಿಯಿದು.



"ಮಾನವೀಯ ಮುಖ"ದ ಹಿಂದೆ ಕರಾಳ ಮನಸ್ಸು

ಈ ಸಾರಿಯ ಬಜೆಟ್ಟನ್ನು ಮಾನವೀಯ ಮುಖದ ಬಜೆಟ್ಟು ಎಂದು ಹಲವು ಬೂರ್ಜ್ವಾ ಅರ್ಥಶಾಸ್ತ್ರಜ್ಞರು ಹೊಗಳುತ್ತಿದ್ದಾರೆ. ಈ 'ಮಾನವೀಯ' ಮುಖ ಎಂಬ ನುಡಿಗಟ್ಟಿನ ಬಳಕೆ ಉದಾರೀಕರಣವಾದಿಗಳು ಕೆಲವು ತಿಂಗಳುಗಳಿಂದಲೇ ಮಾಡುತ್ತ ಬಂದಿದ್ದಾರೆ. ಮಾನವೀಯ ಮುಖದ ಉದಾರೀಕರಣ ಎಂದು ಉದಾರೀಕರಣವನ್ನೇ ಔನತ್ಯಕ್ಕೆ ಏರಿಸುವ ಹೊಗಳುವ ಪರಿಪಾಠವನ್ನು ಇವರು ಬೆಳೆಸಿಕೊಂಡು ಬಂದಿದ್ದಾರೆ.

ಈಗ ಬಜೆಟ್ಟಿಗೆ ಇಂತಹ ಮುಖ ಹೇಗೆ ಬಂತು? ಅದು ಬಂದದ್ದು ಹೇಗೆ. ಈ ಸಾರಿಯ ಬಜೆಟ್ಟಿನಲ್ಲಿ ಬಡತನ ನಿರ್ಮೂಲನೆಗಾಗಿ ಕೆಲವು ಯೋಜನೆಗಳ ಪ್ರಸ್ತಾಪ ಇದೆ. ಖಾದಿ ಮತ್ತು ಗ್ರಾಮೋದ್ಯೋಗ ವಲಯಕ್ಕೆ ದೊಡ್ಡ ಪ್ರಮಾಣದ ನೆರವು ಗ್ರಾಮೀಣ ಅಭಿವೃದ್ಧಿಗೆ ತೆಗೆದಿರಿಸಿದ ಹಣಕಾಸು ರಸಗೊಬ್ಬರಕ್ಕೆ ಸಹಾಯಧನ ಇತ್ಯಾದಿ.

ಇದಕ್ಕಾಗಿಯೇ ಇದನ್ನು ಮಾನವೀಯ ಮುಖದ ಬಜೆಟ್ಟು ಎಂದು ಹೊಗಳುತ್ತಿರುವುದು. ಆದರೆ ನಿಜಕ್ಕೂ ಈ ದೇಶದ ಬಡಜನತೆಗೆ ಇಂತಹ ಲಾಭಗಳನ್ನು ನೀಡುವ ಬಜೆಟ್ಟೆ ಇದು? ಉದಾರೀಕರಣದ ಕರಾಳ ದಿನಗಳು ಮುಗಿದು ಒಳ್ಳೆಯ ದಿನಗಳು ಬಂದವೇ? ಉದಾರೀಕರಣವಾದಿಗಳೇ ಹೇಳುವಂತೆ ಇವು ಆರಂಭಿಕ ದಿನಗಳ ಸಮಸ್ಯೆಗಳಾಗಿದ್ದು ಈಗ ಒಳ್ಳೆಯ ದಿನಗಳು ಬಂದುಬಿಟ್ಟವೆ?

ಖಂಡಿತವಾಗಿಯೂ ಇಲ್ಲ. ಅಂತಹ ಭ್ರಮೆ ನಮಗಾರಿಗೂ ಬೇಡ. ನಿಜವೆಂದರೆ ಈ ಬಜೆಟ್ಟು ಹಿಂದೆಂದಿಗಿಂತಲೂ ಹೆಚ್ಚು ಮೋಸ ಮಾಡುವ ಬಜೆಟ್ಟು. 1996ರಲ್ಲಿ ಲೋಕಸಭಾ ಚುನಾವಣೆಗಳು ನಡೆಯಬೇಕು. ಈಗ ನಡೆದಿರುವ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಸೋಲುತ್ತಲೇ ಇದೆ. ಇದು ಕಾಂಗ್ರೆಸ್ಸಿಗರಿಗೆ ಚುರುಕು ಮುಟ್ಟಿಸಿದೆ. ಆದ್ದರಿಂದ ಈ ಬಜೆಟ್ಟಿನಲ್ಲಿ ಹೆಚ್ಚಿನ ಹೊರೆ ಹೊರಿಸದೇ ಜನರ ಒಲವು ಗೆಲ್ಲುವ ಉಪಾಯ ಇದು.

ಆದರೆ ಬೆಲೆ ಹತೋಟಿ ಮಾಡಲು ಯಾವುದೇ ನಿರ್ದಿಷ್ಟ ಕ್ರಮಗಳು ಬಜೆಟ್ಟಿನಲ್ಲಿ ಇಲ್ಲ. ಹಣಕಾಸು ಕೊರತೆ ದೊಡ್ಡ ಪ್ರಮಾಣದಲ್ಲಿ ಮುಂದುವರಿದೇ ಇದೆ.

ಇದೆಲ್ಲದೇ ಬಡವರಿಗಾಗಿ ಯೋಜನೆಗಳು, ಹಣಕಾಸು ನೆರವು ಇತ್ಯಾದಿಗಳೆಲ್ಲ ವಾಸ್ತವವಾಗಿ ಸರ್ಕಾರ ಹಣ ಹೂಡುವ ಕಾರ್ಯಕ್ರಮವಲ್ಲ, ಬದಲಿಗೆ ಸರ್ಕಾರದ ಪರವಾಗಿ ಇನ್ಯಾರೋ ಹಣ ಹೂಡುವ ಕ್ರಮಗಳು.

ಹಣ ಹೂಡಿಕೆಗಳಲ್ಲಿ ಹೆಚ್ಚಳವಿದ್ದರೆ ಅದು ಹಣದುಬ್ಬರದ ಪ್ರಮಾಣದ ಆಸುಪಾಸಿನಲ್ಲೇ ಇರುವುದರಿಂದ ನಿಜವಾದ ಹೆಚ್ಚಳ ಇರುವುದೇ ಇಲ್ಲ.

ವಿದೇಶಗಳಿಂದ ತಂದ ಸಾಲದ ಬಡ್ಡಿ ಮತ್ತು ಅಸಲು ಮರುಪಾವತಿಗಾಗಿ ಬಹುತೇಕ ಪ್ರಮಾಣದ ಹಣ ಹೋಗುತ್ತದೆ.

ಮಾನವೀಯ ಮುಖದ ಹಿಂದೆ ಇವೆಲ್ಲ ಕರಾಳತೆಗಳಿವೆ!

ಬೆಲೆ ಇಳಿತ ಖಚಿತ: ಯಾವದರದ್ದು?

ಹಣದುಬ್ಬರ ಈಗಾಗಲೇ ಶೇ. 105 ಕ್ಕೆ ಇಳಿದಿದೆ. ಅದು ಇನ್ನೂ ಇಳಿಯುತ್ತದೆ ಎಂದು ಸರ್ಕಾರ ಡಂಗುರ ಸಾರಿದೆ. ಮಾನವೀಯ ಮುಖದ ಬಜೆಟ್ ಹಣದುಬ್ಬರವನ್ನು ಎಷ್ಟರ ಮಟ್ಟಿಗೆ ಇಳಿಸುತ್ತದೆ? ಯಾವಾಗ?

ಈ ವರ್ಷದ ಮಧ್ಯ ಭಾಗದಲ್ಲಿ ಹಣದುಬ್ಬರದ ಪ್ರಮಾಣ ಶೇ. 7 ಅಥವಾ 8ಕ್ಕೆ ಇಳಿಯಬಹುದೆಂಬುದು ಸರ್ಕಾರದ ಅಂದಾಜು. ಆಮದು ಸುಂಕ ಮತ್ತು ಅಬಕಾರಿ ಸುಂಕಗಳನ್ನು ಕಡಿಮೆ ಮಾಡಿರುವುದರಿಂದ ಇದು ಆಗುತ್ತದೆ ಎಂಬುದು ಸರ್ಕಾರದ ಅಂಬೋಣ.

ಆದರೆ ನಿಜ ಏನು? ನಿಜದಲ್ಲಿ ರುವ ಬೆಲೆಗಳು ಅದರಲ್ಲೂ ಅವಶ್ಯ ವಸ್ತುಗಳು ಅದರಲ್ಲಿ ಮುಖ್ಯವಾಗಿ ಆಹಾರ ಧಾನ್ಯಗಳ ಬೆಲೆಗಳು ಇಳಿಯಬೇಕಾಗಿತ್ತು, ಯಾಕೆಂದರೆ ಕಳೆದ ಐದು ಸಾಲುಗಳಲ್ಲಿ ಉತ್ತಮ ಬೆಳೆಗಳು ಬಂದಿವೆ. ಆದರೆ ಈ ಬೆಲೆಗಳು ಇಳಿದಿಲ್ಲ, ಇಳಿವ ಲಕ್ಷಣಗಳೂ ಇಲ್ಲ.

ಹೀಗಿರುವಾಗ ಅಷ್ಟು ಮುಖ್ಯವಲ್ಲದ ಕೆಲವು ಬಳಕೆ ವಸ್ತುಗಳ ಬೆಲೆ ಅಲ್ಪಸ್ವಲ್ಪ ಇಳಿಯಬಹುದು ಅಷ್ಟೆ.

ಇದಲ್ಲದೆ ಸರ್ಕಾರದ ಒಂದು ಎಚ್ಚರ ಕೂಡಾ ಇದೆ - ಮುಂದಿನ ಮುಂಗಾರು ಮಳೆ ಚೆನ್ನಾಗಿ ಆಗಿ ಒಳ್ಳೆಯ ಬೆಳೆ ಬಂದರೆ ಮಾತ್ರ ಇದು ಸಾಧ್ಯವಾದೀತು ಎಂದು.

ಈ ವಾದಗಳನ್ನು ಕೇಳಿದರೆ ಇಲ್ಲಿ ಕಾಕಣ್ಣ ಗುಬ್ಬಣ್ಣ ಕಥೆಯನ್ನು ಸರ್ಕಾರ ಹೇಳುತ್ತಿರುವಂತೆ ಭಾಸವಾಗುವುದಿಲ್ಲವೆ?

ಬೆಲೆಗಳ ಇಳಿತ ಖಚಿತ ಎಂದರೆ ಯಾವುದರ ಬೆಲೆ ಎಂದು ಕೇಳಬೇಕಾಗುತ್ತದೆ. ಜನರ ಶ್ರಮದ ಬೆಲೆ ಇದ್ದೀತೆ? ಅದು ಈಗಾಗಲೇ ಆಗಿದೆ. ಇನ್ನೂ ಹೆಚ್ಚಿಗೆ ಇಳಿತ ಆದೀತೆ?

ಬೆಜೆಟ್ಟು ಬಡವರದ್ದಲ್ಲ -ಬಹುರಾಷ್ಟ್ರೀಯ ಬಡವರದ್ದು

ಬಹುತೇಕ ಪತ್ರಿಕೆಗಳಲ್ಲಿ ಮನಮೋಹನ ಸಿಂಗ್‌ರ ಈ ಸಾರಿಯ ಬಜೆಟ್ಟು ಬಡವರಹಿತಕ್ಕಾಗಿ ಬಂದಿರುವ ಬಜೆಟ್ಟು ಎಂಬ ಹೊಗಳಿಕೆ ದೊಡ್ಡ ಪ್ರಮಾಣದಲ್ಲಿ ಇದೆ.

ಆದರೆ ವಾಸ್ತವವಾಗಿ ಇದು ಬಹುರಾಷ್ಟ್ರೀಯ ಕಂಪೆನಿಗಳಿಗಾಗಿ ಮಾಡಿದ ಬಜೆಟ್. ಆಮದು ಸುಂಕಗಳನ್ನು ಬಹುದೊಡ್ಡ ಪ್ರಮಾಣದಲ್ಲಿ ಕಡಿತ ಮಾಡಿದ ಬಜೆಟ್ ಇದು. ಈ ಬಹುರಾಷ್ಟ್ರೀಯ ಕಂಪೆನಿಗಳು ಹೊರದೇಶಗಳಿಂದ ನಮ್ಮ ದೇಶಕ್ಕೆ ಸರಕುಗಳನ್ನು ಸುಲಭವಾಗಿ ರಫ್ತು ಮಾಡಬಹುದು. ಇದರಿಂದ ಅವರಿಗೆ ಅಪಾರ ಗಾತ್ರ ದ ಮಾರುಕಟ್ಟೆ ದೊರೆಯುತ್ತದೆ. ಈ ಮಾರುಕಟ್ಟೆಯಿಂದ ಅಪಾರ ಲಾಭವೂ ಅವರಿಗೆ.

ಹೀಗಿರುವಾಗ ಇದು ಬಡವರ ಬಜೆಟ್ ಎಂದರೆ ದೊಡ್ಡ ಪ್ರಮಾಣದ ಮೋಸವಾಗುತ್ತದೆ ಅಲ್ಲವೆ?



ದೇಶೀ ಉತ್ಪಾದಕರ ಮೇಲೆ ಗದಾ ಪ್ರಹಾರ

ಬಹುತೇಕ ಸರಕುಗಳ ಮೇಲೆ ಆಮದು ಸುಂಕ ಶೇ. 50 ರಿಂದ ಶೇ. 60ರ ಪ್ರಮಾಣದಲ್ಲಿ ಇದ್ದದ್ದನ್ನು ಈ ಶೇ. 35ಕ್ಕೆ ಇಳಿಸಲಾಗಿದೆ. ವಿದೇಶದಿಂದ ಹೆಚ್ಚೆಚ್ಚು ಸರಕುಗಳು ನಮ್ಮ ದೇಶಕ್ಕೆ ಬರುತ್ತದೆ.

ಇದರಿಂದ ದೇಶೀ ಉತ್ಪಾದಕರಿಗೆ ದೊಡ್ಡ ಹೊಡೆತ ಬೀಳುತ್ತದೆ. ಸತು, ಸೀಸ ಮತ್ತು ತಾಮ್ರ ಉತ್ಪಾದಕರು ಇಂತಹ ಹೊಡೆತ ಅನುಭವಿಸುತ್ತಾರೆ. ಯಾಕೆಂದರೆ ವಿದೇಶಗಳಿಂದ ಕಡಿಮೆ ದರದಲ್ಲಿ ಈ ಸರಕುಗಳು (ಲೋಹಗಳು) ಬರತೊಡಗಿದ್ದರೆ ದೇಶೀ ಸರಕುಗಳಿಗೆ ಮಾರುಕಟ್ಟೆ ಇರುವುದಿಲ್ಲ, ಆದ್ದರಿಂದ ದೇಶೀ ಉದ್ದಿಮೆ ತತ್ತರಿಸಿ ಹೋಗುತ್ತದೆ. ನಿಧಾನವಾಗಿ ಈ ಕ್ಷೇತ್ರಗಳಲ್ಲಿ ನಮ್ಮ ಸ್ವಾವಲಂಬನೆಯೂ ನಾಶವಾಗಿ ಹೋಗುತ್ತದೆ.

ಸತು ಮತ್ತು ಸೀಸಗಳ ಬೆಲೆಗಳನ್ನು ಟನ್ ಒಂದಕ್ಕೆ ರೂ. 4500 ಮತ್ತು ರೂ. 3000 (ಅನುಕ್ರಮವಾಗಿ) ಕಡಿಮೆ ಮಾಡಬೇಕಾಗುತ್ತದೆ. ದೇಶೀ ಕಂಪನಿಗಳು 75 ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಕಳೆದು ಕೊಳ್ಳುತ್ತವೆ. (ಬರುವ ಒಂದು ವರ್ಷದಲ್ಲಿ)

ಹೇಗಿದೆ ದೇಶೀ ಉದ್ದಿಮೆಗಳನ್ನು ಸಾಯಿಸುವ ರೀತಿ?

ಕಂಪನಿಗಳಿಗೆ ಖುಷಿ ಇಲ್ಲ

ಬಜೆಟ್ ಕಂಪನಿಗಳಿಗೆ ಖುಷಿ ತಂದಿಲ್ಲ. ಕಾರಣ ಬಹಳ ಸರಳವಾದದ್ದು ಅವರಿಗೆ ಅಪರಿಮಿತ ರಿಯಾಯಿತಿಗಳು ಬೇಕಾಗಿದ್ದವು. ತೆರಿಗೆ ಕಡಿತ, ಇತ್ಯಾದಿ. ಆದರೆ ಅದು ಆಗಿಲ್ಲ, ಆದ್ದರಿಂದಲೇ ಅವರ ಮುನಿಸು.

ಹಿಂದಿನ ಬಜೆಟ್ ಗಳಲ್ಲಿ ದೊಡ್ಡ ಪ್ರಮಾಣದ ರಿಯಾಯಿತಿಗಳನ್ನು ಪಡೆದ ಈ ಬಂಡವಾಳಿಗ ಮಹಾಶಯರಿಗೆ ಇನ್ನೂ ಹೆಚ್ಚೆಚ್ಚು ರಿಯಾಯಿತಿಗಳು ಬೇಕು. ಬಡಜನಸಾಮಾನ್ಯನ ಮೇಲೆ ಹೊರೆ ಹೊರಿಸ ಬೇಕಾಗಿ ಬಂದರೂ ಅವರಿಗೆ ಬೇಸರವಿಲ್ಲ, ನಮಗೆ ಹೆಚ್ಚೆಚ್ಚು ರಿಯಾಯಿತಿ ಬೇಕು. ನಿಜಕ್ಕೂ ಹೊಟ್ಟೆ ತುಂಬಿರುವವರು ಯಾರು?

ವಾಗಬೇಕಿತ್ತು. ಹೀಗಿರುವಾಗ ಫೆಬ್ರವರಿ ರ್ಚ್ ತಿಂಗಳಲ್ಲಿ ಚುನಾವಣೆ ನಡೆಯಬೇಕಾ ಜನವರಿ 16ರೊಳಗೆ ಕೋಟ್ಯಾಂತರ ಗೆ ಗುರುತುಪತ್ರ ನೀಡಬೇಕೆಂಬ ಶೇಷನ್‌ರ ಹಾಸ್ಯಾಸ್ಪದವಷ್ಟೇ. ಬೇರೆ ರಾಜ್ಯಗಳಲ್ಲೂ ಕೆಲಸಕ್ಕೆ ಕನಿಷ್ಠ ಒಂದು ವರ್ಷ ಬೇಕು, ಸತತ ಉಸ್ತುವಾರಿ ಹಾಗೂ ವಿಮರ್ಶೆ ದಿಗೆ.

ಲ್ಲೂ ಶೇಷನ್ ಖಳನಾಯಕ

ುರುತು ಪತ್ರ ನೀಡುವ ಸಮಸ್ಯೆ ಭಾರ ಸಮಾಜದ ಕ್ಲಿಷ್ಟ ಸಾಮಾಜಿಕ, ಆರ್ಥಿಕ [illegible]ಯೊಂದಿಗೂ ಹೆಣೆದುಕೊಂಡಿದೆ. ಇದ [illegible]ಗಾಗುವವರು ಬಡವರು ಮಾತ್ರ [illegible] ಅಲ್ಪಸಂಖ್ಯಾತರು ಮತ್ತು ಇತರ [illegible] ಅಲ್ಪಸಂಖ್ಯಾತರಿಗೂ ವಿಶೇಷ ಬೇಕಾಗಿದೆ. ಮುಂಬೈಯಲ್ಲಿ ನಡೆದಿರುವ ಒಂದು ಆಘಾತವಷ್ಟೇ ಅಲ್ಲ, ಇದ ಸರಿಯಾದ ಉದಾಹರಣೆ. 1 ಲಕ್ಷ 67 ಸಾವಿರ ಮಂದಿಗೆ "ನಿಮ್ಮ ಗುರುತನ್ನು ಸಾಬೀತು ಮಾಡಿ ಇಲ್ಲವಾದರೆ ಗುರುತು ಪತ್ರ ಇಲ್ಲ, ಮತದಾರ ಪಟ್ಟಿಯಲ್ಲೂ ನಿಮ್ಮ ಹೆಸರು ಉಳಿಯುವುದಿಲ್ಲ" ಎಂಬ ನೋಟೀಸು ಜ್ಯಾರಿ ಮಾಡಲಾಯಿತು. ಈ ಪ್ರಕ್ರಿಯೆಯಲ್ಲಿ 42 ಸಾವಿರ ಮತದಾರರ ಹೆಸರುಗಳನ್ನು ಅವರು "ವಿದೇಶೀ ನಾಗರಿಕರು" ಎಂದು ಮತದಾರ ಪಟ್ಟಿಯಿಂದ ತೆಗೆದು ಹಾಕಲಾಯಿತು!

ಸುಪ್ರಿಂ ಕೋರ್ಟ್ ಫೆಬ್ರವರಿ 6 ರಂದು ಇನ್ನೊಂದು ತೀರ್ಪು ನೀಡಿ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಮತದಾರ ಹೆಸರುಗಳನ್ನು ಕಿತ್ತು ಹಾಕಿದ್ದನ್ನು ತಪ್ಪು ಎಂದು ಸಾರಿತು. ಪೌರರನ್ನು ಗುರುತಿಸುವ ಸಮಸ್ಯೆ ಕುರಿತಂತೆ ಕೆಲವು ನಿರ್ದೇಶನಗಳನ್ನು ಸುಪ್ರಿಂ ಕೋರ್ಟ್ ನೀಡಿತು. ಇಲ್ಲಿಯೂ ಮುಖ್ಯ ಚುನಾವಣಾ ಆಯುಕ್ತರು ಮುಖ್ಯ ಖಳನಾಯಕ!

ಸೆಪ್ಟೆಂಬರ್ 9, 1994 ರಲ್ಲಿ ಚುನಾವಣಾ ಆಯೋಗ ರೇಷನ್ ಕಾರ್ಡ್, ಶಾಲಾ ದಾಖಲೆ, ಹಿಂದಿನ ಚುನಾವಣೆಗಳ ಮತದಾರ ಪಟ್ಟಿ ಇತ್ಯಾದಿ ದಸ್ತಾವೇಜುಗಳನ್ನು ಗುರುತಿಗೆ ಸಾಧನವಾಗಿ ಸ್ವೀಕರಿಸಬಾರದು ಎಂದು ನಿರ್ದೇಶನ ನೀಡಿತ್ತು. ಸುಪ್ರೀಂ ಕೋರ್ಟ್ ಈ ನಿರ್ದೇಶನವನ್ನು ಹೊಡೆದು ಹಾಕಿದ್ದು ಸರಿಯಾದ ಕ್ರಮ. ಪೌರತ್ವದ ಪ್ರಶ್ನೆ 'ಪೌರತ್ವ ಕಾನೂನು' ಎಂಬ ಒಂದು ಪ್ರತ್ಯೇಕ ಕಾನೂನಿನಡಿ ಬರುತ್ತಿದ್ದರೂ ಚುನಾವಣಾ ಆಯೋಗ ಚುನಾವಣಾ ಕಾನೂನುಗಳ ಅಡಿಯಲ್ಲಿ ಅದನ್ನು ಸ್ಥಾಪಿಸುವ ಪ್ರಯತ್ನ ಮಾಡುತ್ತಿದೆ. ಶೇಷನ್ ರವರು ಮುಸ್ಲಿಮರಿಗೆ ಶಿಕ್ಷೆ ನೀಡಿ ಅವರ ಪೌರತ್ವವನ್ನು ವಂಚಿಸುವ ನಾಚಿಕೆಗೇಡಿ ಪ್ರಕರಣದ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ, ಆಡಳಿತ ವ್ಯವಸ್ಥೆಯಲ್ಲಿ ವರ್ಗ ಭಾವನೆ ಇರುವಾಗ, ಕೋಮುವಾದಿ ಹಾಗೂ ಇತರ ಪ್ರಭಾವಗಳಿಗೆ ಅದು ಒಳಗಾಗಿರುವಾಗ ಇಂತಹ ವಾಸ್ತವಿಕ ಪರಿಸ್ಥಿತಿಯನ್ನು ನಿರ್ಲಕ್ಷಿಸುವ ಪ್ರಯತ್ನ ಮಾಡಿದರೆ ಅದರ ಫಲ ಇದೇ ರೀತಿಯಿರುತ್ತದೆ.

ಮಣಿಪುರದ ಉದಾಹರಣೆ

ಗುರುತು ಪತ್ರಕ್ಕೂ ಎಂತಹ ಮಿತಿಯೆಂಬುದನ್ನು ಮಣಿಪುರದ ಇನ್ನೊಂದು ಉದಾಹರಣೆಯೂ ತೀಕ್ಷ್ಣ ರೀತಿಯಲ್ಲಿ ನೆನಪಿಸುತ್ತದೆ. ಅಲ್ಲಿ ಉಗ್ರಗಾಮಿ ಗುಂಪುಗಳು ಒಂದು ಸುವ್ಯವಸ್ಥಿತ ರೀತಿಯಲ್ಲಿ ನಿಸ್ಸಹಾಯಕ ಪೌರರಿಂದ ಅವರ ಗುರುತು ಪತ್ರಗಳನ್ನು ಅಪಹರಿಸಿದವು. ಇಲ್ಲಿ ಕೇವಲ ಗುರುತು ಪತ್ರ ನೀಡುವುದರಿಂದಷ್ಟೇ ಮತಗಟ್ಟೆ ಅಪಹರಣ, ಬೆದರಿಕೆ, ಹಿಂಸಾಚಾರ ಮತ್ತಿತರ ದುರಾಚರಣೆಗಳನ್ನು ತಡೆಯಲು ಸಾಧ್ಯವಿಲ್ಲವೆಂಬುದು ಸ್ಪಷ್ಟವಾಗಿದೆ.

ಮಹಾರಾಷ್ಟ್ರ ಮತ್ತು ಗುಜರಾತ್ ದಲ್ಲಿ ಬಹಳಷ್ಟು ಮತದಾರರಿಗೆ ಶೇಷನ್‌ರ ಕಾಲಮಿತಿ ಮುಗಿದ ಮೇಲೂ ಗುರುತು ಪತ್ರ ಸಿಗಲೇ ಇಲ್ಲ ಎಂಬ ಸರಳ ಸಂಗತಿಯಂತೂ ಶೇಷನ್ ರ ಈ ಅಬ್ಬರದ ಕ್ರಮಕ್ಕೆ ನೀಡಿರುವ ಕೊನೆಯೇಟು.

ಈ ರೀತಿ ಸುಪ್ರೀಂ ಕೋರ್ಟಿನ ಮಧ್ಯಂತರ ಆಜ್ಞೆ ಈ ಇಡೀ ಕಸರತ್ತು ಎಷ್ಟೊಂದು ಕಾನೂನು ಬಾಹಿರ ಹಾಗೂ ಯೋಚನಾ ರಹಿತ ಎನ್ನುವುದನ್ನು ದೃಢಪಡಿಸಿದೆಯಷ್ಟೆ.

ಪಾಠ ಕಲಿಯಬೇಕು

ಈ ಪ್ರಕರಣ, ಅದರಲ್ಲಿ ಸಾಂವಿಧಾನಿಕ ತಡೆಯ ಬೆದರಿಕೆ ಎಲ್ಲಾ ರಾಜಕೀಯ ಪಕ್ಷಗಳಿಗೆ, ಸರಕಾರಕ್ಕೆ ಪಾಠ ಕಲಿಸಬೇಕು. ನರಸಿಂಹರಾವ್ ಸರಕಾರ ಶೇಷನ್‌ರವರು ಗುರುತು ಪತ್ರ ನೀಡಿಕೆಗೆ ಸಂಬಂಧಿಸಿದಂತೆ ಮನಬಂದಂತೆ ಕಾಲಮಿತಿ ಹಾಕುವುದನ್ನು ತಡೆಯಲು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಜನತಾ ಪ್ರಾತಿನಿಧ್ಯ ಶಾಸನಕ್ಕೆ ತಿದ್ದುಪಡಿ ತರಲು ನಿರಾಕರಿಸಿತು. ಆ ತಿದ್ದುಪಡಿ ತಂದಿದ್ದರೆ ನ್ಯಾಯಲಯಗಳ, ರಾಜ್ಯ ಸರಕಾರಗಳ ಈ ಎಲ್ಲಾ ಸಮಯ ಹಾಗೂ ಹಣವನ್ನು ಉಳಿಸಬಹುದಿತ್ತು. ರಾವ್ ಸರಕಾರ ಮುಖ್ಯ ಚುನಾವಣಾ ಆಯುಕ್ತರು ಹಾಗೂ ಬಿಹಾರದ ಲಲ್ಲೂ ಪ್ರಸಾದ್ ಯಾದವ್ ಸರಕಾರದ ನಡುವೆ ತಿಕ್ಕಾಟದಿಂದ ಚುನಾವಣೆಗಳು ಮುಂದೂಡಲ್ಪಟ್ಟು ರಾಷ್ಟ್ರಪತಿ ಆಳ್ವಿಕೆ ಹೇರಬಹುದು ಎಂಬ ನಿರೀಕ್ಷೆಯಿಂದ ರಾಜಕೀಯ ಆಟ ಆಡಿತು. ಅದು ಸಾಗಲಿಲ್ಲ.

ಈಗ ಸರಕಾರ ಮಾಡಬಹುದಾದ ಕನಿಷ್ಠ ಕೆಲಸ ಎಂದರೆ ದಿನೇಶ್ ಗೋಸ್ವಾಮಿ ಸಮಿತಿ ಮುಂದಿಟ್ಟ ಸರ್ವಸಮ್ಮತ ಪ್ರಸ್ತಾವನೆಗಳನ್ನು ಜ್ಯಾರಿಗೆ ತರುವುದು. ಇದರಲ್ಲಿ ಇನ್ನಷ್ಟು ವಿಳಂಬ ಸಲ್ಲ. ಈಗ ತಕ್ಷಣ ಆಗಬೇಕಾದ ಒಂದು ಸುಧಾರಣೆಯೆಂದರೆ ಒಂದು ಬಹುಸದಸ್ಯ ಚುನಾವಣಾ ಆಯೋಗ ರಚಿಸುವುದು. ಸುಪ್ರೀಂ ಕೋರ್ಟ್ ಈಗಾಗಲೇ ಶೇಷನ್‌ರು ಇನ್ನಿಬ್ಬರು ಚುನಾವಣಾ ಆಯುಕ್ತರನ್ನು ನೇಮಿಸಿರುವುದನ್ನು ಪ್ರಶ್ನಿಸಿ ಹಾಕಿದ ತಕಾರರನ್ನು ಪರಿಶೀಲಿಸುತ್ತಾ ಪ್ರಾಥಮಿಕ ಶಿಫಾರಸುಗಳನ್ನು ನೀಡಿ ಈ ದಿಕ್ಕಿನಲ್ಲಿ ಒಂದು ಮಹತ್ವದ ಹೆಜ್ಜೆಯಿಟ್ಟಿದೆ. ಸುಪ್ರೀಂ ಕೋರ್ಟ್ ಈ ಸಂದರ್ಭದಲ್ಲಿ ತಿಳಿಸಿದ ಅಭಿಪ್ರಾಯಗಳು ಒಂದು ಬಹು ಸದಸ್ಯ ಚುನಾವಣಾ ಆಯೋಗ ಒಬ್ಬ ವ್ಯಕ್ತಿಯ ಸ್ವೇಚ್ಛಾಚಾರವನ್ನು ನಿವಾರಿಸಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯ, ಅಲ್ಲದೆ ಇಂತಹ ಸ್ವೇಚ್ಛಾಚಾರಕ್ಕೆ ಅವಕಾಶ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅನುಗುಣವಾದದ್ದಲ್ಲ ಎಂಬ ಸಿಪಿಐ(ಎಂ) ನಿಲುವನ್ನು ಎತ್ತಿ ಹಿಡಿದಿವೆ.

ದೇಶದೊಳಗೆ



ಕೇರಳ: ಕರುಣಾಕರನ್‌ರನ್ನು ಕೊನೆಗೂ ಕಳಿಸಿದರು

ಒಂದು ತಿಂಗಳ ಹಿಂದೆಯಷ್ಟೆ ಕರುಣಾಕರನ್‌ರ ನಾಯಕತ್ವದಲ್ಲಿ ಅವಿಶ್ವಾಸ ತೋರುತ್ತಾ ಗುಡುಗುತ್ತಿದ್ದ ಭಿನ್ನಮತೀಯ ಕಾಂಗ್ರೆಸ್ಸಿಗರು, ಯು.ಡಿ.ಎಫ್.ನ ಇತರ ಘಟಕಗಳ ಮುಖಂಡರು ಪ್ರಧಾನಿಗಳ 'ಕೇಳಿಕೆ'ಗೆ ಓಗೊಟ್ಟು ಫೆಬ್ರವರಿ 14 ರಂದು ಕೇರಳ ವಿಧಾನಸಭೆಯಲ್ಲಿ ಎಲ್.ಡಿ.ಎಫ್. ಮಂಡಿಸಿದ ಅವಿಶ್ವಾಸ ಠರಾವಿನ ವಿರುದ್ಧ ಮತನೀಡಿದ್ದರು. ತಮಾಷೆಯೆಂದರೆ ಎಲ್.ಡಿ.ಎಫ್.ನ ಠರಾವಿನಲ್ಲಿದ್ದುದು ಯು.ಡಿ.ಎಫ್.ನ ಘಟಕಗಳು ಮಾಡುತ್ತಿದ್ದ ಆಪಾದನೆಗಳು.

ಅಂದು ಅವಿಶ್ವಾಸ ಠರಾವು ಪಾಸಾಗಲಿಲ್ಲ, ಆದರೆ ಅವಿಶ್ವಾಸ ಮುಂದುವರೆಯಿತು. ಒಂದೇ ತಿಂಗಳೊಳಗೆ ಅದು ಮತ್ತೆ ಸ್ಫೋಟಗೊಂಡಿತು. ಮಾರ್ಚ್ 16ರ ಸಂಜೆ 7 ಗಂಟೆಯೊಳಗೆ ಕರುಣಾಕರನ್ ರಾಜೀನಾಮೆ ನೀಡದಿದ್ದರೆ ತಾವೆಲ್ಲಾ ರಾಜೀನಾಮೆ ನೀಡುವುದಾಗಿ ಯು.ಡಿ.ಎಫ್. ಇತರ ಘಟಕಗಳ ಮಂತ್ರಿಗಳು ಬೆದರಿಕೆ ಹಾಕಿದರು. ಕಾಂಗ್ರೆಸ್(ಐ)ನ ಮುಖಂಡ ಯಾರಾಗಬೇಕೆಂದು ಯು.ಡಿ.ಎಫ್.ನ ಬೇರೆ ಪಕ್ಷಗಳು ತಾಕೀತು ಮಾಡುವಂತಿಲ್ಲ ಎಂದು ತಿಂಗಳ ಹಿಂದೆ ಬೆದರಿಸಿದ್ದ ಕರುಣಾಕರನ್ ರಾಜೀನಾಮೆ ಕೊಟ್ಟರು ಎಂಬ ಸುದ್ದಿ ಅದೇ ದಿನ ರಾತ್ರಿ 9.30 ಕ್ಕೆ ಬಂತು.

ಅಂತೂ ಕಮ್ಯುನಿಸ್ಟ್-ವಿರೋಧವೊಂದೇ ಏಕ ಮಾತ್ರ ಸೂತ್ರದಲ್ಲಿ ಬಂಧಿತರಾದ ಯು.ಡಿ.ಎಫ್. ಯಾವ ಮಟ್ಟಕ್ಕಿಳಿದಿದೆಯೆಂದು ಮತ್ತೊಮ್ಮೆ ಜಗಜ್ಜಾಹೀರಾಯಿತು.

ಎ.ಕೆ. ಆಂಟನಿಯವರನ್ನು ಮುಖ್ಯಮಂತ್ರಿಗಳಾಗಿ ಕಾಂಗ್ರೆಸ್(ಐ) ಮಾದರಿಯ 'ಸರ್ವಸಮ್ಮತಿ'ಯಿಂದ ಆರಿಸಲಾಗಿದೆಯೆಂದು ಘೋಷಿಸಲಾಗಿದೆ. ಅವರು ಅಧಿಕಾರವನ್ನು ಸ್ವೀಕರಿಸಿದರು. ಆದರೆ ಕಾಂಗ್ರೆಸ ಶಾಸಕಾಂಗ ಪಕ್ಷದ ಮುಖಂಡ ತಾನೇ ಎಂದು ಕರುಣಾಕರನ್ ಹೇಳುತ್ತಿದ್ದಾರೆ. ಆಂಟನಿಯವರಿಗೆ ಆ ಸ್ಥಾನ ಬೇಕೆಂದರೆ ಅದನ್ನು ಬಿಡಲು ಸಿದ್ಧ ಎಂದೂ ಹೇಳಿದ್ದಾರೆ. ಹೊಸ ಮುಖ್ಯಮಂತ್ರಿಗಳಿಗೆ ಬೆಂಬಲ ನೀಡುತ್ತೀರಾ ಎಂದು ಕೇಳಿದಾಗ "ಅವರು (ಅಂದರೆ ಆಗಿನ ಭಿನ್ನಮತೀಯರು) ನೀಡಿದಂತೆ ನೀಡುತ್ತೇನೆ" ಎಂದರಂತೆ. ಅಂದರೆ 'ಅವಿಶ್ವಾಸ'ವನ್ನು ಮುಂದುವರೆಯುತ್ತದೆ ಎಂದರ್ಥ.

ಮಹಾರಾಷ್ಟ್ರ: ಸಂಕುಚಿತ ರಾಜಕಾರಣದ ಮೊದಲ ರುಚಿ

ಬಿಜೆಪಿ-ಶಿವಸೇನಾ ಕೂಟದ ಮಹಾರಾಷ್ಟ್ರದ ಹೊಸ ಸರಕಾರ ದೇಶದ ಐಕ್ಯತೆ-ಸಮಗ್ರತೆಗೆ ಎಂತಹ ಅಪಾಯವೊಡ್ಡಿದೆ ಎಂಬುದು ನಿರೀಕ್ಷೆಗಿಂತ ಮೊದಲೇ ಜನಗಳಿಗೆ ಅರಿವಾಗಲಾರಂಭಿಸಿದೆ. ಮಹಾರಾಷ್ಟ್ರ ಬಿಟ್ಟು ಬೇರೆ ಕಡೆಯ ಜನ ಮುಂಬೈಗೆ ಬರುವುದನ್ನು ತಡೆಯಲು ಪರ್ಮಿಟ್ ವ್ಯವಸ್ಥೆ ತರುವ ವಿಚಾರ ಆ ಸರಕಾರದ ಪರಿಶೀಲನೆಯಲ್ಲಿದೆ ಎಂಬ ಸುದ್ದಿಗೆ ದೇಶಾದ್ಯಂತ ಭಾರೀ ವಿರೋಧ ವ್ಯಕ್ತಗೊಂಡಿದೆ. ಇದು ಸಂಸತ್ತಿನಲ್ಲೂ ಪ್ರತಿಧ್ವನಿಗೊಂಡಿದೆ. ಈ ಪ್ರತಿಕ್ರಿಯೆಗೆ ಹೆದರಿ ಶಿವಸೇನೆಯವರು ಕೂಡಾ ಇದು ಒಂದು ದಾರಿಯಷ್ಟೇ, ತಾವದನ್ನು ಅಂಗೀಕರಿಸಿಲ್ಲ ಎಂದರು. 'ರಾಷ್ಟ್ರಪ್ರೇಮ' ತಮ್ಮದೇ ಗುತ್ತಿಗೆಯೆನ್ನುವ ಬಿಜೆಪಿಯವರಂತೂ ಸಂಪೂರ್ಣ ಪೆಚ್ಚಾದರು. "ರಾಷ್ಟ್ರೀಯ ಪಕ್ಷ"ವೆಂದು ತಮ್ಮ ಪಕ್ಷದ ಸ್ಥಾನಮಾನಕ್ಕೆ ಬಂದಿರುವ ಸವಾಲನ್ನು ಕಂಡು ಕಕ್ಕಾಬಿಕ್ಕಿಯಾದರು. ಸಂಕುಚಿತ ರಾಜಕೀಯ ಬಿಜೆಪಿ ಅಧಿಕಾರಕ್ಕೆ ಬಂದರೆ ಏನೇನು ಎದುರಿಸಬೇಕಾದೀತು ಎಂಬುದು ಒಂದು ರುಚಿ ಅವರಿಗೆ ದೊರೆತಂತಾಗಿರಬೇಕು.

ಈ ನಡುವೆ ಮಂತ್ರಿ-ಮಂಡಳ ರಚನೆಯಲ್ಲಿ ಬಿಜೆಪಿ-ಶಿವಸೇನೆ ನಡುವೆ ಜಗ್ಗಾಟದ ಸುದ್ದಿಯೂ ಬರುತ್ತಿದೆ. ಗೃಹಖಾತೆ, ರೆವಿನ್ಯೂ ಮತ್ತು ಸಾರ್ವತ್ರಿಕ ಆಡಳಿತ ತಮ್ಮ ಪಾಲಿಗೆ ಬರಬೇಕೆಂದು ಬಿಜೆಪಿ ಪಟ್ಟು ಹಿಡಿದರೆ ರೆವಿನ್ಯೂ ತನಗೇ ಬೇಕೆಂದು ಮುಖ್ಯಮಂತ್ರಿ ಮನೋಹರ್ ಜೋಷಿಯ ಅಳಿಯ ಸುಧೀರ್ ಜೋಷಿ ಹಠ ಹಿಡಿದಿದ್ದಾರಂತೆ. ತಾನು "ರಿಮೋಟ್ ಕಂಟ್ರೋಲ್" ಎಂದು ಹೇಳಿಕೊಂಡ ಬಾಳಠಾಕ್ರೆಗೆ ಈ ಕಿತ್ತಾಟ ತಲೆ ನೋವು ತಂದಿದೆಯಂತೆ.

ಗುಜರಾತ್: ಇಲ್ಲೂ ಒಂದು ರಿಮೋಟ್ ಕಂಟ್ರೋಲ್ -ಸೂಪರ್ ಮುಖ್ಯಮಂತ್ರಿ

ಮಹಾರಾಷ್ಟ್ರದಲ್ಲಿ ಶಿವಸೇನೆಯಂತಹ ಪಕ್ಷವಿರುವಾಗ ಬಾಳಠಾಕ್ರೆಯಂತಹ 'ರಿಮೋಟ್ ಕಂಟ್ರೋಲ್' ಇರುವುದು ಅಸಹಜವೇನಲ್ಲ. ಆದರೆ ಗುಜರಾತ್ ನ ಬಿಜೆಪಿಯಲ್ಲೂ ಇಂತಹ ರಿಮೋಟ್ ಇದೆಯಂತೆ. ಬಿಜೆಪಿ ಚುನಾವಣೆ ಗೆಲ್ಲುತ್ತದೆಂದು ಸ್ಪಷ್ಟವಾಗಲಾರಂಭಿಸಿದಾಗಲೇ ಮುಖ್ಯಮಂತ್ರಿ ಪದವಿಗಾಗಿ ಜಗ್ಗಾಟ ನಡೆಯುತ್ತದೆಂದು ಪತ್ರಕರ್ತರು ನಿರೀಕ್ಷಿಸಿದ್ದರಂತೆ. ಏಕೆಂದರೆ ಗುಜರಾತ್‌ನ ಬಿಜೆಪಿ ಇದರಲ್ಲಿ ಕಾಂಗ್ರೆಸ್ಸಿಗಿಂತ ಬಹಳ ಹಿಂದೇನೂ ಇರಲಿಲ್ಲ. ಆದರೆ ಅಂತಹುದೇನೂ ಕಂಡು ಬರಲಿಲ್ಲ, ಕೇಶೂಭಾಯಿ ಪಟೇಲ್ ಮುಖ್ಯಮಂತ್ರಿಗಳಾದರು. ಆದರೆ ನಂತರ ಜಗ್ಗಾಟ ಇನ್ನೊಂದು ರೂಪದಲ್ಲಿ ಕಂಡು ಬಂತು. ಬಿಜೆಪಿಯ ಗುಜರಾತ್ ರಾಜ್ಯ ಪ್ರಧಾನ ಕಾರ್ಯದರ್ಶಿ ನರೇಂದ್ರ ಮೋದಿಯವರನ್ನು 'ವಸ್ತುತಃ ಮುಖ್ಯಮಂತ್ರಿ' ಎನ್ನುವುದಕ್ಕಿಂತ ಸೂಪರ್ ಮುಖ್ಯಮಂತ್ರಿ ಎನ್ನುವುದೇ ಸರಿಯಾದೀತು ಎನ್ನುತ್ತಾರೆ 'ಹಿಂದೂ' ಪತ್ರಿಕೆಯ ವರದಿಗಾರರು.

ಮೋದಿಯವರ ಆಣತಿಯ ಮೇರೆಗೆ ಮುಖ್ಯಮಂತ್ರಿಗಳ ಪ್ರತಿಜ್ಞಾ ಸ್ವೀಕಾರ ಸಮಾರಂಭ ಒಂದು ಬಿಜೆಪಿಯ ಸಾರ್ವಜನಿಕ ಸಭೆಯಾಗಿ ಏರ್ಪಟ್ಟಿತಂತೆ. ಹೊಸ ಮುಖ್ಯಮಂತ್ರಿಗಳು ಸರ್ಕಾರದ ಅಧಿಕಾರಿಗಳೊಂದಿಗೆ ನಡೆಸಿದ ಮೊದಲ ಸಭೆಯಲ್ಲಿ "ಬೇಡದ ಅತಿಥಿ"ಯಾಗಿ ಮೋದಿ ಹಾಜರ್. ಹಿರಿಯ ಪೋಲೀಸ್ ಅಧಿಕಾರಿಗಳು ಕಾನೂನು ವ್ಯವಸ್ಥೆ ಬಗ್ಗೆ ತಿಳಿಸಲು ಬಂದಾಗ ಅವರಿಗೆ ಸರ್ಕಾರದಲ್ಲಿ ಏನೂ ಆಗಿಲ್ಲದ ಮೋದಿಯವರ ಬಳಿಗೆ ಹೋಗಲು ಹೇಳಿದ್ದನ್ನು ಕೇಳಿ ತಬ್ಬಿಬ್ಬಾದರು. ಇಷ್ಟೇ ಅಲ್ಲ -ಮುಖ್ಯಮಂತ್ರಿಗಳ ಅಳಿಯ ಡಾ. ಮಯೂರ್ ದೇಸಾಯಿ ವಿಧಾನಸಭಾ ಸೆಕ್ರೆಟೇರಿಯೆಟ್ ನೌಕರರ ಸಭೆ ಕರೆದು ನೀವೆಲ್ಲಾ ಬಿಜೆಪಿಗೆ ವಿಧೇಯರಾಗಿರಬೇಕು" ಎಂದರಂತೆ -ಕಾಂಗ್ರೆಸ್ ಪರಂಪರೆ ಕಾಂಗ್ರೆಸ್ಸಿಗರದ್ದೇ ಸೊತ್ತಲ್ಲ!

ಮಹಾರಾಷ್ಟ್ರ

	1995ರ ವಿಧಾನಸಭಾ ಚುನಾವಣೆ	1991ರ ಲೋಕಸಭಾ ಚುನಾವಣೆ	1990ರ ವಿಧಾನಸಭಾ ಚುನಾವಣೆ
ಶಿವಸೇನೆ	74	54	52
ಬಿಜೆಪಿ	65		42
ಕಾಂಗ್ರೆಸ್(ಐ)	80	212	141
ಜನತಾದಳ	11		24
ಇತರರು	58	20	20
ಒಟ್ಟು	288		

ಗುಜರಾತ್

	1995ರ ವಿಧಾನಸಭಾ ಚುನಾವಣೆ	1991ರ ಲೋಕಸಭಾ ಚುನಾವಣೆ	1990ರ ವಿಧಾನಸಭಾ ಚುನಾವಣೆ
ಬಿಜೆಪಿ	121	119	67
ಕಾಂಗ್ರೆಸ್	46	45	33
ಜನತಾದಳ	-	0	70
ಇತರರು	15	18*	2
ಒಟ್ಟು	182		

* ಜನತಾದಳ(ಜ) -ಕಾಂಗ್ರೆಸ್‌ನೊಂದಿಗೆ ನಂತರ ವಿಲೀನವಾಯಿತು.

ಒರಿಸ್ಸಾ

	1995ರ ವಿಧಾನಸಭಾ ಚುನಾವಣೆ	1991ರ ಲೋಕಸಭಾ ಚುನಾವಣೆ	1990ರ ವಿಧಾನಸಭಾ ಚುನಾವಣೆ
ಕಾಂಗ್ರೆಸ್(ಐ)	80	78	10
ಜನತಾದಳ	46	52	123
ಬಿಜೆಪಿ	9	5	2
ಎಡಪಕ್ಷಗಳು	1	9	6
ಇತರರು	11	3	6
ಒಟ್ಟು	147		

ನೆಹರೂ ರೋಜ್ಗಾರ್ ಯೋಜನೆಯಲ್ಲಿ ಅವ್ಯವಹಾರ

ಕೇಂದ್ರ ಸರ್ಕಾರದ ನೆಹರೂ ರೋಜ್ಗಾರ್ ಯೋಜನೆಯನ್ನು ಮಧ್ಯಪ್ರದೇಶದಲ್ಲಿ ಅನುಷ್ಠಾನಗೊಳಿಸುವಲ್ಲಿ ಭಾರಿ ಅವ್ಯವಹಾರಗಳು ನಡೆದಿವೆ.

ದೇಶದ ಅತ್ಯುನ್ನತ ಆಡಿಟರ್ ಆದ ಮಹಾಲೆಕ್ಕ ಪರಿಶೋಧಕ (ಸಿಎಜಿ) 1993 ಮಾರ್ಚ್ 31ರವರೆಗಿನ ತಮ್ಮ ವರದಿಯಲ್ಲಿ ಈ ಅಂಶವನ್ನು ಬಯಲಿಗೆಳೆದಿದ್ದಾರೆ.

ಹೆಸರು ಬದಲಾವಣೆಗೆ ಆದ್ಯತೆ!

ಮಹಾರಾಷ್ಟ್ರದಲ್ಲಿ ಶಿವಸೇನೆ-ಬಿಜೆಪಿ ಮೈತ್ರಿಕೂಟ ಸರಕಾರ ಅಧಿಕಾರಕ್ಕೆ ಬಂದಿದೆ. ಹೊಸ ಸಚಿವ ಸಂಪುಟದ ಮೊದಲ ಸಭೆ ಮಾರ್ಚ್ 20 ರಂದು ನಡೆಯಿತು. ಸಭೆ ಹಲವಾರು ತೀರ್ಮಾನಗಳನ್ನು ತೆಗೆದುಕೊಂಡಿದೆ.

ಮಹಾರಾಷ್ಟ್ರ ಜನತೆಯ ಕಲ್ಯಾಣವನ್ನು ಸಾಧಿಸುವ ದಿಸೆಯಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದೆ ಎಂದು ನೀತಿನಾದರೂ ಭಾವಿಸಿದರೆ ಅದು ತಪ್ಪು. ರಾಜ್ಯದ ಕೆಲವು ಊರುಗಳ ಹೆಸರನ್ನು ಬದಲಾಯಿಸುವ 'ಮಹತ್ವ'ದ ಗೊತ್ತುವಳಿಯನ್ನು ಸಭೆ ಅಂಗೀಕರಿಸಿತು.

ರಾಜ್ಯ ರಾಜಧಾನಿ ಹೆಸರನ್ನು ಬಾಂಬೆ (Bombay)ಯಿಂದ ಮುಂಬಯಿ (Mumbai) ಎಂದು ಮಾಡಲಾಗುವುದು. ಇಂಗ್ಲೀಷ್‌ನಲ್ಲಿ ಆ ರೀತಿ ಬರೆಯುವುದು ಮಾತ್ರವಲ್ಲ, ಉಚ್ಚಾರಣೆಯನ್ನು ಸರಿಯಾಗಿ (ಅಂದರೆ ಮುಂಬಯಿ ಎಂದು) ಮಾಡಬೇಕೆಂದೂ ಸರಕಾರ ಫರ್ಮಾನು ಹೊರಡಿಸಲಿದೆ.

ಔರಂಗಾಬಾದ್ ಹೆಸರನ್ನು ಸಂಬಾಜಿ ನಗರ ಹಾಗೂ ಉಸ್ಮಾನಾ ಬಾದ್ ಹೆಸರನ್ನು ಧಾರಶಿವ ಎಂದು ಬದಲಿಸುವುದು ಉದ್ದೇಶವಾಗಿದೆ.

ಊರಿನ ಹೆಸರುಗಳನ್ನು ಬದಲಾಯಿಸುವುದು ಮತ್ತು ಉಚ್ಚಾರಣೆಗಳನ್ನು ಸರಿಪಡಿಸುವುದು ಜಗತ್ತಿನಾದ್ಯಂತ ನಡೆಯುವ ಒಂದು ಸಾಮಾನ್ಯ ಪ್ರಕ್ರಿಯೆ. ಆದರೆ ಅದರಲ್ಲಿ ಒಂದು ತರ್ಕವಿರುತ್ತದೆ. ತರ್ಕ ಇರಲೇ ಬೇಕು. ಉದಾಹರಣೆಗೆ ಅಸ್ಸಾಂ ರಾಜಧಾನಿ ಹೆಸರನ್ನು ಗೌಹಾಟಿ ಎಂದು ಕರೆಯಲಾಗುತ್ತಿತ್ತು, ಅದು ಈಗ 'ಗುವಾಹಟಿ'. ಚೀನಾ ರಾಜಧಾನಿಯನ್ನು ಪೀಕಿಂಗ್ ಎಂದು ಕರೆಯಲಾಗುತ್ತಿತ್ತು. ಅದರ ಸರಿ ಉಚ್ಚಾರ 'ಬೀಜಿಂಗ್' ಎಂದು ಅಲ್ಲಿನ ಸರಕಾರ ಸ್ಪಷ್ಟಪಡಿಸಿದ್ದರಿಂದ ಈಗ ಅದೇ ಬಳಕೆಗೆ ಬಂದಿದೆ.

ಆದರೆ ಮಹಾರಾಷ್ಟ್ರದ ಹೊಸ ಸರಕಾರ ಕ್ರಮದಲ್ಲಿ ಏನಾದರೂ ತರ್ಕವಿದೆಯೇ? ಇಲ್ಲ, ಉದ್ದೇಶವಿದೆಯೇ? ಹೌದು ಅದು ದುರುದ್ದೇಶ. ರಾಜಧಾನಿ ಹೆಸರು ಉಚ್ಚಾರಣೆಗೆ ಸಂಬಂಧಪಟ್ಟಿದ್ದರೆ ಉಳಿದ ಎರಡಕ್ಕೆ (ಉಸ್ಮಾನಾ ಬಾದ್ ಮತ್ತು ಔರಂಗಾಬಾದ್) ಸಂಬಂಧಿಸಿ ಕೋಮುವಾದಿ ದೃಷ್ಟಿಯನ್ನು ಹೊಂದಿರುವುದು ಸ್ಪಷ್ಟವಾಗಿದೆ. ಮಾಡಲು ಎಷ್ಟೋ ಕೆಲಸಗಳಿರುವಾಗ ಈ ರೀತಿಯ ಅನಾವಶ್ಯಕ ಹಾಗೂ ಪ್ರಚೋದನಕಾರಿ ಕ್ರಮಗಳಿಗೆ ಅದು ಕೈ ಹಾಕುವುದು ಮೂರ್ಖತನವಾಗುತ್ತದೆ. ಶಿವಸೇನೆ-ಬಿಜೆಪಿ ಸರಕಾರಕ್ಕೆ ಜನರ ಜೀವನ ಸುಧಾರಿಸಬೇಕಿಲ್ಲ, ಜನರು ಪರಸ್ಪರ ಕಚ್ಚಾಟ ನಡೆಸುವುದರಲ್ಲಿ ಅದಕ್ಕೆ ಆಸಕ್ತಿಯಿರುವಂತೆ ಕಾಣುತ್ತದೆ.

ಸರಕಾರವೇ ಕೋಮುವಾದಿ ಭಾವನೆಗಳನ್ನು ಕೆರಳಿಸಲು ಮುಂದಾದರೆ ಆಗುವ ಅನಾಹುತ ಕಲ್ಪನೆಗೂ ನಿಲುಕದ್ದು. ಮಹಾರಾಷ್ಟ್ರ ರಾಜ್ಯ ಸರಕಾರದ ಪ್ರತಿಯೊಂದು ಹೆಜ್ಜೆಯನ್ನೂ ಎಚ್ಚರಿಕೆಯಿಂದ ಗಮನಿಸಿ ಶಾಂತಿ-ಕೋಮು ಸಾಮರಸ್ಯ ಕದಡುವ ಅದರ ಯತ್ನವನ್ನು ವಿಫಲಗೊಳಿಸುವುದು ರಾಜ್ಯದ ಜನತೆಯ ಹೊಣೆಯಾಗಿದೆ.

ಆಟೋರಿಕ್ಷಾ ಚಾಲಕರ ಸಂಘದ ಮಹಾಸಭೆ

ಮಂಗಳೂರು: ಮಾರ್ಚ್ 4ರಂದು ಶನಿವಾರ ಸಂಘದ ಕಚೇರಿಯಲ್ಲಿ ಆಟೋರಿಕ್ಷಾ ಚಾಲಕರ ಸಂಘದ ವಾರ್ಷಿಕ ಮಹಾ ಸಭೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಆರಂಭದಲ್ಲಿ ಮೃತ ರಿಕ್ಷಾ ಚಾಲಕರಾದ ಶ್ರೀಯುತ ಮಹಮ್ಮದ್ ಮತ್ತು ಜಯಕುಮಾರ್ ರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಂಘದ ಕಾರ್ಯದರ್ಶಿ ಸುಧನ್ ಕುಮಾರು ಕಳೆದೊಂದು ವರ್ಷದ ಚಟುವಟಿಕೆಗಳ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ಕೋಶಾಧಿಕಾರಿ ಕೇಶವ ಅಮೀನರವರು ಲೆಕ್ಕಪತ್ರದ ವರದಿಯನ್ನು ಮಂಡಿಸಿದರು. ಮಹಾಸಭೆಗೆ ಶುಭಕೋರಿ ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ವಿಷ್ಣುಮೂರ್ತಿ ಸಿಐಟಿಯು ಪರವಾಗಿ ಕಮಲಾಕ್ಷ ಬಂಗೇರ, ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮತ್ತು ಡಿವೈಎಫ್ಐ ಮುಖಂಡ ಕೃಷ್ಣಪ್ಪ ಕೊಂಚಾಡಿ ಮೊದಲಾದವರು ಮಹಾಸಭೆಗೆ ಶುಭಕೋರಿ ಮಾತನಾಡಿದರು.

ಇದೇ ವೇಳೆ ಪಡುಬಿದ್ರೆ ಘಟಕವು ನಮ್ಮ ಜಿಲ್ಲಾ ಸಂಘಟನೆಯ ಜೊತೆ ಅಧಿಕೃತವಾಗಿ ಸೇರ್ಪಡೆಗೊಂಡುದನ್ನು ಪ್ರಕಟಿಸಲಾಯಿತು. ಹಿರಿಯ ರಿಕ್ಷಾಚಾಲಕ ಮೊಂತು ಲೋಬೋ ಮತ್ತು ಮುಲ್ಕಿ ರಿಕ್ಷಾ ಚಾಲಕರ ಮುಖಂಡ ಸದಾಶಿವ ಸಾಲಿಯಾನ್ ಮಹಾಸಭೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರಾಗಿ ಪಿ.ರಾಮಚಂದ್ರರಾವ್ ಮಾತನಾಡುತ್ತಾ ರಿಕ್ಷಾ ಚಾಲಕರು ಮೀಟರ್ ಅಳವಡಿಸಲು ಸಿದ್ಧ ಆದರೆ ಇಂದಿನ ವಿಪರೀತ ಬೆಲೆಯೇರಿಕೆ ಪರಿಸ್ಥಿತಿಯಲ್ಲಿ ರಿಕ್ಷಾ ನಡೆಸಲು ಇಂದನ ಬಿಡಿಭಾಗಗಳನ್ನು ಸಬ್ಸಿಡಿ ದರದಲ್ಲಿ ಪೂರೈಸುವಂತೆ ಸರಕಾರವನ್ನು ಒತ್ತಾಯಿಸಲು ಸಂಘಟಿತರಾಗಿ ಹೋರಾಡಲು ಕರೆ ನೀಡಿದರು. ಆರಂಭದಲ್ಲಿ ವಸಂತ ಶೆಟ್ಟಿಯವರು ಸ್ವಾಗತಿಸಿ, ಕೊನೆಯಲ್ಲಿ ಜಗದೀಶ್ ಸುವರ್ಣ ವಂದಿಸಿದರು. ಈ ಕೆಳಗಿನವರನ್ನು ಪದಾಧಿಕಾರಿಗಳನ್ನಾಗಿ ಆರಿಸಲಾಯಿತು. ಅಧ್ಯಕ್ಷರಾಗಿ ಪಿ.ರಾಮಚಂದ್ರರಾವ್, ಉಪಾಧ್ಯಕ್ಷರಾಗಿ ಬಿ.ನಾರಾಯಣ, ಜಯಂತ ಕಾಮತ್, ಪ್ರಧಾನ ಕಾರ್ಯದರ್ಶಿಯಾಗಿ ಸುಧನ ಕುಮಾರ್ ಉರ್ವ, ಜತೆ ಕಾರ್ಯದರ್ಶಿ ಸಿರಿಲ್ ಡಿಸೋಜ, ಸತೀಶ್ ಕುಮಾರ್, ಕೋಶಾಧಿಕಾರಿ ಕೇಶವ ಅಮೀನ್ ಮತ್ತು 20 ಮಂದಿಯ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಡಿವೈಎಫ್ಐ ಫನ್ ಫೇರ್ ಕಾರ್ಯಕ್ರಮ

ಚಿನ್ನಕೋಟೆ(ಕೆ.ಜಿ.ಎಫ್): ಮಾರ್ಚ್ 5ನೇ ತಾರೀಕಿನಂದು ಫನ್ ಫೇರ್ ಕಾರ್ಯಕ್ರಮವನ್ನು ವಿಜಯನಗರದಬಳಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮ ಬೆಮೆಲ್ ಬಡಾವಣೆಯ ಸುತ್ತಮುತ್ತಲಿನ ಪ್ರದೇಶಗಳ ಸುಮಾರು 3000ಜನ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಜೆಎಂಎಸ್ ಜಂಟಿಯಾಗಿ ಪಾಲ್ಗೊಂಡಿತ್ತು. ಅದೇ ದಿನ ಸಾಯಂಕಾಲ ನಡೆದ ಸಾಂಸ್ಕೃತಿಕ ಕಾರ್ಯಕ್ರಮವು ಘಟಕದ ಅಧ್ಯಕ್ಷರಾದ ರಘುಪತಿಯವರ ಅದ್ಯಕ್ಷತೆಯಲ್ಲಿ ಜರುಗಿತು. ಮುಖ್ಯ ಅತಿಥಿಗಳಾಗಿ ಸ್ಥಳೀಯ ಪೋಲೀಸ್ ಠಾಣೆಯ ಸಬ್-ಇನ್ಸ್ ಪೆಕ್ಟರ್ ಶ್ರೀ ಕೃಷ್ಣಪ್ಪ ಮತ್ತು ಧರ್ಮಾಧಿಕಾರಿ ಕುಪ್ಪುಸ್ವಾಮಿಯವರು ಉಪಸ್ಥಿತರಿದ್ದರು. ಉಪಾಧ್ಯಕ್ಷರಾದ ತಿರುಪತಿಯವರು ಮೊದಲು ಸ್ವಾಗತಿಸಿದರು. ಕಾರ್ಯದರ್ಶಿ ರವೀಂದ್ರರವರು ಸಂಘಟನೆಯ ಚಟುವಟಿಕೆಯ ಬಗ್ಗೆ ಹೇಳಿ, ಅದೇ ದಿನ ಬೆಳಗ್ಗೆ ನಡೆಸಿದ ಸ್ಲೋ ಸೈಕಲ್ ರೇಸ್ ನಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕೊನೆಯಲ್ಲಿ ಜೆಎಂಎಸ್ ನ ಸಂಚಾಲಕಿ ಪ್ಲೋರಾ ಅಚ್ಯುತ್ ಅವರು ವಂದಿಸಿದರು.

ಉಳ್ಳಾಲ ವಲಯ ಸಮ್ಮೇಳನ

ಸಿಪಿಐ(ಎಂ)ನ ಉಳ್ಳಾಲ ವಲಯ ಸಮ್ಮೇಳನವು ಪೆರ್ಮನ್ನೂರು ಗ್ರಾಮದ ಕಲ್ಲಾಪು ಎಂಬಲ್ಲಿ ರಾಮಚಂದ್ರ ಉಚ್ಚಿಲ್ ಅವರ ಅಧ್ಯಕ್ಷತೆಯಲ್ಲಿ ತಾ. 14.2.95ರಂದು ನಡೆಯಿತು.

ಸಿಪಿಐ(ಎಂ) ಪಕ್ಷದ ವಲಯ ಸಮಿತಿ ಸದಸ್ಯ ಕಾಂ. ರಾಜೀವ್ ಮೆಂಡನ್ ರವರು ಧ್ವಜಾರೋಹಣ ಮಾಡಿದರು. ದ.ಕ.ಜಿಲ್ಲಾ ಸಿಪಿಐ(ಎಂ) ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ.ಡೆವಿಡ್ ಕರ್ಕಡರು ಸಮ್ಮೇಳನವನ್ನು ಉದ್ಘಾಟಿಸಿತದರು. ವಲಯ ಸಮಿತಿಯ ಕಾರ್ಯದರ್ಶಿ ಕಾಂ ಯು.ಜನಾರ್ಧನ ನಾಯಕ್ ವರದಿಯನ್ನು ಮಂಡಿಸಿದರು.

ವರದಿಯ ಮೇಲೆ ದೀರ್ಘ ಚರ್ಚೆ ನಡೆದು ವರದಿ ಅಂಗೀಕಾರದ ನಂತರ ಪಾರ್ಟಿಯ ಜಿಲ್ಲಾ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ. ಬಿ.ಮಾಧವರವರು ಮಾತನಾಡಿ ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಪಕ್ಷದ ಸಂಘಟನೆಯನ್ನು ಬಲಪಡಿಸಲು ಪಾರ್ಟಿ ಸದಸ್ಯರ ಜವಾಬ್ದಾರಿಯ ಬಗ್ಗೆ ವಿವರಿಸಿದರು. ಬಳಿಕ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ರವರು ಮಾತನಾಡಿ ನಮ್ಮ ಪಕ್ಷವು ಜನರ ಸಮಸ್ಯೆಗಳನ್ನು ಗುರುತಿಸಿ ಅದನ್ನು ಪರಿಹರಿಸಲು ಪ್ರಯತ್ನಿಸಲು ನಾವು ಮುಂದಾಗಬೇಕು ಎಂದರು.

ಸಮ್ಮೇಳನದಲ್ಲಿ ಉಳ್ಳಾಲ ವಲಯಕ್ಕೆ 17 ಜನರ ಸಮಿತಿಯೊಂದನ್ನು ರಚಿಸಲಾಯಿತು. ಸಮ್ಮೇಳನದಲ್ಲಿ ಉಳ್ಳಾಲ ವಲಯ ಪಕ್ಷದ ಕಾರ್ಯದರ್ಶಿಯಾಗಿ ಕಾಂ. ರಾಮಚಂದ್ರ ಉಚ್ಚಿಲ್ ರವರನ್ನು ಸಮ್ಮೇಳನ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಪ್ರಾರಂಭದಲ್ಲಿ ಪೌಲ್ ಡಿಸೋಜರು ಸ್ವಾಗತಿಸಿ, ಕೊನೆಯಲ್ಲಿ ಯು.ಜನಾರ್ಧನ ನಾಯಕ್ ವಂದಿಸಿದರು.

ಪೋಲೀಸ್ ದೌರ್ಜನ್ಯಕ್ಕೆ ಖಂಡನೆ

ಹರೇಕಳ: ಇತ್ತೀಚೆಗೆ ವಗ್ಗದಲ್ಲಿ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾವೂರು ಹರೇಕಳದ ಐದು ಮಂದಿ ನಿರಪರಾಧಿಗಳನ್ನು ಬಂಧಿಸಿ ಕೆಲದಿನ ಕಾಲ ಪೋಲೀಸ್ ಠಾಣೆಯಲ್ಲಿ ಕೂಡಿಹಾಕಿ ಚಿತ್ರಹಿಂಸೆ ಮಾಡಿದ್ದನ್ನು ಖಂಡಿಸುವ ಸಭೆಯ ಅಧ್ಯಕ್ಷತೆಯನ್ನು ಹರೇಕಳ ಗ್ರಾಮ ಪಂಚಾಯತ್ ಸದಸ್ಯ ಕೆ.ಬಿ.ಹಾಮೀನ್ ವಹಿಸಿದ್ದರು.

ನಾಲ್ಕೈದು ದಿನ ನಿರಪರಾಧಿಗಳನ್ನು ಬಿ.ಸಿ.ರೋಡ್ ಠಾಣೆಯಲ್ಲಿ ಕೂಡಿ ಹಾಕಿ, ಚಿತ್ರ ಹಿಂಸೆ ನೀಡಿ ಈಗ ನಾಲ್ಕು ಮಂದಿಯನ್ನು ಬಿಡುಗಡೆಗೊಳಿಸಿ ತನ್ನ ಜವಾಬ್ದಾರಿಯನ್ನು ಮರೆಮಾಚಲು ಪೋಲೀಸರು ನಿರಪರಾಧಿಯಾದ ಅಜೀಜ್ ಯಾನ್ ಹಾಜಬ್ಬರವರ ಮೇಲೆ ವಿನಾಕಾರಣ ಕ್ರಮಕೈಗೊಂಡಿರುವುದನ್ನು ಹರೇಕಳ ಸಿಪಿಐ(ಎಂ) ಶಾಖೆಯು ತೀವ್ರವಾಗಿ ಖಂಡಿಸಿದೆ. ಬಿ.ಸಿ.ರೋಡ್ ಠಾಣಾ ಪೋಲೀಸ್ ಅಧಿಕಾರಯವರ ಮೇಲೆ ಶೀಘ್ರವೇ ಕ್ರಮಕೈಗೊಳ್ಳಬೇಕೆಂದು ರಾಜ್ಯದ ಮುಖ್ಯಮಂತ್ರಿ ಗೃಹಮಂತ್ರಿಯನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಂಡಿದೆ. ಸಿಪಿಐ(ಎಂ)(ಪಕ್ಷದ ಮುಂದಾಳು ಕಾಂ.ರಾಮಚಂದ್ರ ಉಚ್ಚಿಲ್, ಹರೇಕಳ ಗ್ರಾಮ ಪಂಚಾಯತ್ ಉಪಾದ್ಯಕ್ಷ ನೇಮುಮುಖಾರಿ, ಪಾವೂರು ಗ್ರಾಮ ಪಂಚಾಯತ್ ಅಧ್ಯಕ್ಷ ಬಿ.ಬಾಬು ಹಾಗೂ ಅನ್ಸಾರುಲ್ ಇಸ್ಲಾಂದಫ್ ಕಮಿಟಿಯ ಅಧ್ಯಕ್ಷ ಕೆ.ಪಿ.ಇಬ್ರಾಹಿಂ ವೇದಿಕೆಯಲ್ಲಿ ಹಾಜರಿದ್ದರು. ಡಿವೈಎಫ್ಐ ಹಾಗೂ ಶಾಖಾ ಕಾರ್ಯದರ್ಶಿ ಹುಸೈನ್ ಪಾವೂರು ಮುಂದಿನ ಹಂತದ ಚಳುವಳಿಯ ಬಗ್ಗೆ ರೂಪುರೇಶೆಗಳನ್ನು ವಿವರಿಸಿದರು. ಕೊನೆಯಲ್ಲಿ ಮಹಮ್ಮದ್ ಅಶ್ರಫ್ ಧನ್ಯವಾದ ಅರ್ಪಿಸಿದರು.

ಅಫಘಾನಿಸ್ತಾನದಲ್ಲಿ ಮುಗಿಯದ ಯಾದವಿ ಕಲಹ

ರಾಜಧಾನಿ ಕಾಬೂಲ್ ಸುತ್ತಮುತ್ತ ರಾಜಧಾನಿಯೊಳಗೆ ಬಲವಾದ ನೆಲೆ ಹೊಂದಿದ್ದ ಮೂಲಭೂತವಾದಿ ಗೆರಿಲ್ಲಾ ಪಡೆಗಳನ್ನು ಅಫಘಾನಿಸ್ತಾನದ ಸರಕಾರಿ ಪಡೆಗಳು ಹಲವು ತಿಂಗಳುಗಳ ನಂತರ ಮೊದಲ ಬಾರಿಗೆ ಹಿಮ್ಮೆಟ್ಟಿಸಿ ರಾಜಧಾನಿ ಮೇಲೆ ಪೂರ್ತಿ ಹತೋಟಿಯನ್ನು ಸಾಧಿಸಿವೆ. ಅಫಘಾನಿಸ್ತಾನದಲ್ಲಿ ಪ್ರಗತಿಪರ ನಜೀಬುಲ್ಲಾ ಸರಕಾರವನ್ನು ಉರುಳಿಸಿದ ನಂತರ, ಅಮೇರಿಕನ್ ಬೆಂಬಲಿತ ಹಲವು ಇಸ್ಲಾಮಿಕ್ ಗುಂಪುಗಳ ಸಮ್ಮಿಶ್ರ ಸರಕಾರ ರಚನೆಯಾಯಿತು. ಆದರೆ ಕೆಲವೇ ತಿಂಗಳುಗಳಲ್ಲಿ ಈ ಗುಂಪುಗಳು ತಮ್ಮೊಳಗಿನ ಸಶಸ್ತ್ರ ಹೋರಾಟದಲ್ಲಿ ಕಾಬೂಲನ್ನು ಮಸಣವಾಗಿಸಿದವು. ಸರಕಾರದಲ್ಲಿ ಪ್ರಧಾನಿಯಾಗಿ ಭಾಗವಹಿಸಿದ್ದ ಗುಲ್‌ಬುದ್ದೀನ್ ಹೆಕ್ಮತ್ತಿಯಾರ್‌ರ ಮೂಲಭೂತವಾದಿ ಗುಂಪು ಅಧ್ಯಕ್ಷ ರಬ್ಬಾನಿಯವರ ಸರಕಾರದ ವಿರುದ್ಧ ಟ್ಯಾಂಕ್ ಕಾಳಗದಲ್ಲಿ ತೊಡಗಿತು.

ಈ ನಡುವೆ 'ತಾಲಿಬಾನ್' ಎಂಬ ಇಸ್ಲಾಮಿಕ್ ಗುಂಪು ಆಶ್ಚರ್ಯಕಾರಿ ರೀತಿಯಲ್ಲಿ ಅಫಘಾನಿಸ್ತಾನದ ಗ್ರಾಮೀಣ ಪ್ರದೇಶಗಳಿಂದ ಗೆಲ್ಲುತ್ತಾ ಕಾಬೂಲ್‌ನತ್ತ ಸಾಗಿದರು. ಈ 'ತಾಲಿಬನ್' ಗುಂಪು ಕಾಬೂಲ್‌ನ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿದ್ದ ಹಿಜ್‌ಬ್-ಎ-ವಹಾದತ್ ಗೆರಿಲ್ಲಾಗಳನ್ನು ಅವರ ನೆಲೆಗಳಿಂದ ಓಡಿಸಿದರು. ಈ ಕಾರ್ಯಾಚರಣೆ ಸರಕಾರಿ ಸೈನ್ಯ ಹಾಗೂ 'ತಾಲಿಬನ್' ಜಂಟಿಯಾಗಿ ನಡೆಸಿದವು. ಆದರೆ ಈ ಕಾರ್ಯಾಚರಣೆಯ ನಂತರ ಸರಕಾರಿ ಸೈನ್ಯ 'ತಾಲಿಬಾನ್' ಗೆರಿಲ್ಲಾಗಳನ್ನೇ ಕಾಬೂಲಿನಿಂದ ಆಚೆಗೆ ಉಚ್ಚಾಟಿಸಿದೆ.

ಈ ಮೂಲಭೂತವಾದಿ ಇಸ್ಲಾಮಿಕ್ ಗೆರಿಲ್ಲಾಗಳ ಅಂತಃಕಲಹ ಅಫಘಾನಿಸ್ತಾನವನ್ನು ಮುಗಿಯದ ಯಾದವೀಕಲಹದ ರಣಾಂಗಣವಾಗಿಸಿದೆ. ಯಾರಿಗೂ ನಾವು ಏತಕ್ಕಾಗಿ ಹೋರಾಡುತ್ತಿದ್ದೇವೆ ಎಂದು ಗೊತ್ತಿದ್ದಂತಿಲ್ಲ. ಈ ವಿವಿಧ ಗುಂಪುಗಳಿಗೆ ಸಾಮ್ರಾಜ್ಯಶಾಹಿ ಕುಮ್ಮಕ್ಕಿನಿಂದ ಸೌದಿ ಅರೇಬಿಯಾದಂತಹ ದೇಶಗಳಿಂದ ಅಪಾರ ಹಣ ಹರಿದು ಬರುತ್ತಿದೆ. ಸೋವಿಯತ್ ಹಾಗೂ ಅಫಘಾನಿಸ್ತಾನದ ಪ್ರಗತಿಪರ ಸರಕಾರದ ಸೈನ್ಯದ ವಿರುದ್ಧ ವರ್ಷಕ್ಕೆ ಒಂದು ಶತಕೋಟಿ ಡಾಲರಿನಷ್ಟು ಹಣ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಈ ಗೆರಿಲ್ಲಾಗಳಿಗೆ ಕೊಟ್ಟಿತ್ತು. ಈ ಶಸ್ತ್ರಾಸ್ತ್ರಗಳು ಭಾರಿ ಅಗ್ಗದ ದರದಲ್ಲಿ ದೊರಕುತ್ತಿವೆ. ಆದ್ದರಿಂದ ಗೆರಿಲ್ಲಾ ಗುಂಪುಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಜನಾಂಗ, ಹಾಗೂ ಇಸ್ಲಾಮಿನ ವಿವಿಧ ಪಂಥಗಳ ಹೆಸರಿನಲ್ಲಿ ಪರಸ್ಪರ ದ್ವೇಷ, ಹಿಂಸಾಚಾರ ಹಬ್ಬುತ್ತಿರುವ ಈ ಗುಂಪುಗಳಿಂದ ಅಫಘಾನಿಸ್ತಾನಕ್ಕೆ ಬಿಡುಗಡೆ ಸಾಧ್ಯವೇ ಎಂದು ಜನ ಹಲುಬುವಂತೆ ಆಗಿದೆ. ಈ ಹಿಂಸಾಚಾರದ ಮುಖ್ಯ ಕಾರಣರಾದ ಅಮೇರಿಕನ್ನರು, ಶಾಂತಿ ಸ್ಥಾಪನೆಯ ಯಾವುದೇ ಪ್ರಯತ್ನ ಮಾಡದೆ ತಣ್ಣಗಿದ್ದಾರೆ. ಪಾಕಿಸ್ತಾನ, ಇರಾನ್, ಸೌದಿ ಅರೇಬಿಯಾ ಮುಂತಾದ ದೇಶಗಲು ತಮ್ಮದೇ ಬೇಳೆ ಬೇಯಿಸಿಕೊಳ್ಳುತ್ತಿವೆ. ಅಫಘಾನಿಸ್ತಾನ ಜಗತ್ತಿನಾದ್ಯಂತ ಮೂಲಭೂತವಾದಿ ಇಸ್ಲಾಮಿಕ್ ಗುಂಪುಗಳಿಗೆ ತರಬೇತಿ ಕೇಂದ್ರವಾಗಿದೆ.

ಇತ್ತೀಚೆಗೆ ಅಮೇರಿಕನ್ ರಾಯಭಾರ ಕಛೇರಿಯ ಕಾರ್ಯಕರ್ತರ ಕೊಲೆ ಸಂಬಂಧದಲ್ಲಿ ಪ್ರಧಾನಿ ಬೆನಜಿರ್ ಅವರೇ ಇದಕ್ಕೆ ಅಮೇರಿಕವೇ ಮೂಲ ಕಾರಣ ಎಂದು ಹೇಳಿದ್ದಾರೆ. ಇಸ್ಲಾಮಿಕ್ ಗುಂಪುಗಳಿಗೆ ಮುಕ್ತವಾಗಿ ಶಸ್ತ್ರಾಸ್ತ್ರ ಕೊಟ್ಟು ಪ್ರಚೋದಿಸಿದ್ದು ಅಮೇರಿಕವೇ. ಈಗ ಅದರ ದುಷ್ಫಲಗಳನ್ನ ಆಯಾ ದೇಶಗಳಿಗೆ ಬಿಟ್ಟು ತಾನು ಕೈ ತೊಳೆದುಕೊಂಡಿದೆ. ಕೆಲವೊಮ್ಮೆ ಆ ದುಷ್ಫಲಗಳನ್ನು ಅಮೇರಿಕನರೇ ಉಣ್ಣಬೇಕಾಗುತ್ತದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಸದ್ಯಕ್ಕಂತೂ ಧರ್ಮದ, ಜನಾಂಗದ ಹೆಸರಿನಲ್ಲಿ ಜನರ ಐಕ್ಯತೆ ಮುರಿದು ಅವರ ಗಮನ ಬೇರೆಡೆಗೆ ಸೆಳೆಯುವ ಪ್ರಯತ್ನದಲ್ಲಿ ಯಶಸ್ವಿಯಾಗಿದೆ. ಆದರೆ ಇದು ಸಾಮ್ರಾಜ್ಯಶಾಹಿ-ವಿರೋಧಿ ಅಲೆಯನ್ನು ತಡೆಯಲು ಸಾಧ್ಯವಾಗಿಲ್ಲ, ಅಮೇರಿಕದ ಕುಯುಕ್ತಿಯ ಪಾತ್ರ ಹೆಚ್ಚು ಹೆಚ್ಚು ಜನವಿಭಾಗಗಳಿಗೆ ಅರ್ಥವಾಗುತ್ತಿದೆ.

ಲೋಕಸಂಚಾರ

-ಶರತ್‌ಚಂದ್ರ

ಇರಾಕ್ ದಿಗ್ಬಂಧನ ಮುಂದುವರೆಸಲು ಭದ್ರತಾ ಸಮಿತಿ ನಿರ್ಣಯ

ಇರಾಕ್ ದಿಗ್ಬಂಧನವನ್ನು ಮುಂದುವರೆಸಲು ನಿರ್ಧರಿಸುವ ಮೂಲಕ ಭದ್ರತಾ ಸಮಿತಿ ಅಮೇರಿಕದ ಸೊತ್ತು ಎಂದು ಪುನಃ ಸಿದ್ಧಪಡಿಸಿದೆ. 60 ದಿನಗಳಿಗೊಮ್ಮೆ ಪುನರ್ವಿಮರ್ಶೆ ಮಾಡಿದ ಭದ್ರತಾ ಸಮಿತಿ ದಿಗ್ಬಂಧನ ಮುಂದುವರೆಸಲು ನಿರ್ಧರಿಸಿದೆ. ಇದನ್ನು ಪ್ರತಿಭಟಿಸಿ ಇರಾಕಿ ಮಕ್ಕಳನ್ನು ಉಳಿಸಲು ದಿಗ್ಬಂಧನ ತೆಗೆಯಬೇಕೆಂದು ಒತ್ತಾಯಿಸಿ ಹಲವಾರು ಪ್ರತಿಭಟನಾಕಾರರು ಪ್ರದರ್ಶನ ನಡೆಸಿದರು.

ಆದರೆ ಮುಂದಿನ ವಿಮರ್ಶೆಯ ಹೊತ್ತಿಗೆ ದಿಗ್ಬಂಧನ ಮುಂದುವರೆಸುವ ಬಗ್ಗೆ ಐದು ಶಾಶ್ವತ ಸದಸ್ಯರ ನಡುವೆ ಭಿನ್ನಾಭಿಪ್ರಾಯ, ತಲೆದೋರಬಹುದು ಎನ್ನಲಾಗಿದೆ. ಫ್ರಾನ್ಸ್, ಚೀನಾ ಹಾಗೂ ರಷ್ಯಾ ಭದ್ರತಾ ಸಮಿತಿಗೆ ಹಿಂದೆ ನಿರ್ಧರಿಸಿದಂತೆ ಎಲ್ಲಾ ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳ ಸಾಧ್ಯತೆಯನ್ನು ನಾಶ ಮಾಡಿದರೆ ತೈಲ ದಿಗ್ಬಂಧನ ತೆಗೆಯುವುದನ್ನು ಜಾರಿ ಮಾಡಬೇಕು ಎಂದು ಒತ್ತಾಯಿಸುತ್ತಿವೆ. ಆದರೆ ಬ್ರಿಟನ್, ಮತ್ತು ಅಮೇರಿಕ ಭದ್ರತಾ ಸಮಿತಿಯ ಇತರ ಎಲ್ಲಾ ನಿರ್ಣಯಗಳನ್ನು ಜಾರಿ ಮಾಡಿದರೆ ಮಾತ್ರ ದಿಗ್ಬಂಧನ ತೆಗೆಯಬೇಕೆಂದು ಅಭಿಪ್ರಾಯಪಟ್ಟಿವೆ. ಇದರಲ್ಲಿ ಕುವೈಟ್ ಹಾಗೂ ಇರಾಕ್ ಗಡಿ ಇತ್ಯಾದಿ ಬಗೆಗಿನ ನಿರ್ಣಯಗಳನ್ನು ಇರಾಕ್ ಜಾರಿ ಮಾಡಲು ಒಪ್ಪಿಲ್ಲ, ಆದರೆ ಭದ್ರತಾ ಸಮಿತಿ ನೇಮಿಸಿದ ಪ್ರತಿನಿಧಿ ಶಸ್ತ್ರಾಸ್ತ್ರಗಳ ಬಗೆಗಿನ ನಿರ್ಣಯವನ್ನು ಜಾರಿ ಮಾಡಿದೆ ಎಂದು ವರದಿ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಅಮೇರಿಕದಲ್ಲಿ 60 ಲಕ್ಷ ಬಡ ಮಕ್ಕಳು

1980ರಿಂದ 1992ರವರೆಗೆ ಅಮೇರಿಕದಲ್ಲಿ ಬಡ ಮಕ್ಕಳ ಸಂಖ್ಯೆ 10 ಲಕ್ಷದಷ್ಟು ಏರಿ 60 ಲಕ್ಷ ಆಗಿದೆ. ಆರು ವರ್ಷದ ಕೆಳಗಿನ ಮಕ್ಕಳಲ್ಲಿ ಶೇಕಡಾ 26 ಬಡತನದ ರೇಖೆಯ ಕೆಳಗೆ ಜೀವಿಸುತ್ತಿರುವ ಕುಟುಂಬಗಳಿಗೆ ಸೇರಿದವರು. ಬೇರೆ ಯಾವುದೇ ವಯೋಮಾನಕ್ಕೆ ಹೋಲಿಸಿದರೆ ಮಕ್ಕಳಲ್ಲಿ ಬಡತನದ ಪ್ರಮಾಣ ಅತೀ ಹೆಚ್ಚು ಎಂದು ಅಧ್ಯಯನವೊಂದು ಹೊರಗೆಡವಿದೆ. ಇದರಲ್ಲಿ 30 ಲಕ್ಷದಷ್ಟು ಮಕ್ಕಳು ಸರಕಾರವೇ ಒಪ್ಪಿಕೊಂಡಿರುವ ಬಡತನದ ರೇಖೆಯ ವಾರ್ಷಿಕ ಆದಾಯದ ಅರ್ಧಕ್ಕಿಂತಲೂ ಕಡಿಮೆ ಆದಾಯ ಇರುವ ಕಡು ಬಡವರ ಕುಟುಂಬಗಳಿಗೆ ಸೇರಿದವರು.

ಬಡ ಮಕ್ಕಳ ಸಂಖ್ಯೆಯಲ್ಲಿ ಏರಿಕೆ ಹಾಗೂ ಮಕ್ಕಳಲ್ಲಿ ಇತರ ಎಲ್ಲಾ ವಯೋಮಿತಿಗಳಿಂದ ಹೆಚ್ಚಿನ ಬಡತನ ದೇಶದ ಭವಿಷ್ಯಕ್ಕೆ ಆತಂಕಕಾರಿ ಎಂದು ಅಧ್ಯಯನ ಹೇಳಿದೆ.

ಐರ್ಲೆಂಡ್ ಶಾಂತಿಯತ್ತ ಇನ್ನೊಂದು ಹೆಜ್ಜೆ

ಐರ್ಲೆಂಡ್‌ನಲ್ಲಿ ಐಆರ್‌ಎ(ಐರಿಶ್ ರಿಪಬ್ಲಿಕನ್‌ಆರ್ಮಿ-ಉತ್ತರ ಐರ್ಲೆಂಟನ್ನು ಬ್ರಿಟಿಷ್ ವಸಾಹತುಶಾಹಿಯಿಂದ ವಿಮುಕ್ತಗೊಳಿಸಲು ಹೋರಾಡುತ್ತಿದ್ದ ಪ್ರಬಲ ಗೆರಿಲ್ಲಾ ಸಂಘಟನೆ) ಘೋಷಿಸಿದ್ದ ಕದನ ವಿರಾಮ ಆರು ತಿಂಗಳುಗಳಷ್ಟು ದೀರ್ಘ ಕಾಲ ಮುಂದುವರೆಯುತ್ತಿದೆ. ಬ್ರಿಟಿಷ್, ಐರಿಷ್ ಸರಕಾರ ಹಾಗೂ ಐಆರ್‌ಎಯ ರಾಜಕೀಯ ವಿಭಾಗ ಸಿನ್‌ಫಿನ್ ತಯಾರಿಸಿದ ಶಾಂತಿ ಮಾತುಕತೆಗಳಿಗೆ ಆಧಾರಭೂತವಾಗಿರುವ 'ಫ್ರೇಂ ವರ್ಕ್ ಡಾಕ್ಯುಮೆಂಟ್'ನ ಪ್ರಕಟಣೆಯಾಗಿದೆ. ಇದರಿಂದ ಐರ್ಲೆಂಡ್ ಶಾಂತಿಯತ್ತ ಇನ್ನೊಂದು ಹೆಜ್ಜೆ ಮುಂದಿಟ್ಟಿದೆ.

ಈ ಕರಡಿನ ಪ್ರಕಾರ ಉತ್ತರ ಐರ್ಲೆಂಡ್ ಪ್ರತ್ಯೇಕ ಅಸೆಂಬ್ಲಿಯ ಆಳ್ವಿಕೆಯಲ್ಲಿ ಬರುತ್ತದೆ. ಬ್ರಿಟಿಷ್ ಸರಕಾರ ಹೆಚ್ಚಿನ ಅಧಿಕಾರಗಳನ್ನು ಈ ಅಸೆಂಬ್ಲಿಗೆ ಬಿಟ್ಟುಕೊಡುತ್ತದೆ. ಹಂತ ಹಂತವಾಗಿ ಉತ್ತರ ಐರ್ಲೆಂಡ್ ಹಾಗೂ ಐರ್ಲೆಂಡ್ ನ ನಡುವೆ ಇರುವ ಸಾಮಾಜಿಕ ಆರ್ಥಿಕ ಕಾನೂನು ವ್ಯತ್ಯಾಸಗಳನ್ನು ಕಡಿಮೆ ಮಾಡಲಾಗುತ್ತದೆ. 70 ವರ್ಷಗಳ ಹಿಂದೆ ಐರ್ಲೆಂಡನ್ನು ಇಬ್ಭಾಗ ಮಾಡಿದ ಬ್ರಿಟಿಷ್ ವಸಾಹತುಶಾಹಿ, ಮೊದಲ ಬಾರಿಗೆ ಐಕ್ಯ ಐರ್ಲೆಂಡ್‌ನ ಸಂದರ್ಭದಲ್ಲಿ ಮಾತ್ರ ಐರಿಶ್ ಸಮಸ್ಯೆ ಬಗೆಹರಿಸಲು ಸಾಧ್ಯ ಎಂದು ಒಪ್ಪಿಕೊಂಡಂತಾಗಿದೆ.

ನೇಪಾಳದಲ್ಲಿ ಭೂ ಸುಧಾರಣಾ ಕಮೀಶನ್ ರಚನೆ

ಚುನಾವಣಾ ಆಶ್ವಾಸನೆಯಂತೆ ನೇಪಾಳದ ಕಮ್ಯುನಿಸ್ಟ್ ಸರಕಾರ ಭೂ ಸುಧಾರಣೆ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಶಿಫಾರಸು ಮಾಡಲು 15 ಸದಸ್ಯರ ಭೂಸುಧಾರಣಾ ಕಮೀಶನ್ ನೇಮಿಸಿದೆ. ಈಗ ದೇಶದಲ್ಲಿ ಜಾರಿಯಲ್ಲಿರುವ ಅವೈಜ್ಞಾನಿಕ ಭೂ ಒಡೆತನದ ಪದ್ಧತಿ ನಿವಾರಿಸಿ ಇಬ್ಬಗೆಯ ಭೂಒಡೆತನ ನಿವಾರಿಸಿ ಸಾಮಾಜಿಕ ನ್ಯಾಯ ಸ್ಥಾಪಿಸಲು ಭೂಮಿಯ ಮಹತ್ತರ ಪ್ರಯೋಜನ ಪಡೆಯಲು, ಕೃಷಿ ಕ್ಷೇತ್ರದಲ್ಲಿ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸುವ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಸಲುವಾಗಿ ಈ ಕಮೀಶನ್ ಅಧ್ಯಯನದ ನಂತರ ಶಿಫಾರಸುಗಳನ್ನು ಮಾಡಲಿದೆ. ಈ ಕಮೀಶನ್ ಮೂರು ತಿಂಗಳೊಳಗೆ ವರದಿ ಸಲ್ಲಿಸಲಿದೆ.

ಕೊಳಚೆಗೇರಿ ಬಡಜನರನ್ನು ವಕ್ಕಲೆಬ್ಬಿಸಿರುವ ಇನ್ನೊಂದು ಅಮಾನುಷ ಘಟನೆ

ದಾವಣಗೆರೆ: ಹೊಲೆಹೊನ್ನೂರು ತೋಟವೆಂಬುದು ದಾವಣಗೆರೆ ನಗರದ ಮಧ್ಯೆ ಪೂನಾ-ಬೆಂಗಳೂರು ರಸ್ತೆಯಲ್ಲಿ ಸುಮಾರು ಆರೂವರೆ ಎಕರೆ ವಿಸ್ತೀರ್ಣದ ಒಂದು ಕೊಳಚೆಗೇರಿಯಾಗಿತ್ತು. ಅಲ್ಲಿ ಸುಮಾರು ಒಂದು ಸಾವಿರ ಬಡ ಕುಟುಂಬಗಳಿದ್ದವು. ಚಿತ್ರದುರ್ಗದ ಪ್ರತಿಷ್ಠಿತ ಶ್ರೀ ಮುರುಘರಾಜೇಂದ್ರ ಮಠದ ಆಡಳಿತ ವರ್ಗ ಸರ್ವೋಚ್ಚ ನ್ಯಾಯಾಲಯದಿಂದ ಸ್ಥಳ ತೆರವು ಮಾಡಲು ಆರ್ಡರ್ ಪಡೆದಿದ್ದೇವೆ ಎಂದು ಹೇಳಿಕೊಂಡು ಮಾರ್ಚ್ 4ರಂದು ವಕ್ಕಲೆಬ್ಬಿಸಿದುದನ್ನು ಸಿಪಿಐ(ಎಂ) ದಾವಣಗೆರೆ ಘಟಕವು ತೀವ್ರವಾಗಿ ಪ್ರತಿಭಟಿಸಿದೆ. ತೊಂದರೆಗೊಳಗಾದ ಕುಟುಂಬಗಳಿಗೆ ತುರ್ತು ಪರಿಹಾರ ದೊರೆಯಬೇಕು ಎಂದು ಆಗ್ರಹಪಡಿಸಿದೆ.

ಯಾವ ಮನ್ಸೂಚನೆ ಇಲ್ಲದೆ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಸ್ಪಷ್ಟವಾಗಿ ವಿವರಿಸದೆ ಸ್ಥಳೀಯ ನ್ಯಾಯಾಲಯಗಳಿಗೆ ರಜೆ ಇರುವ ಸಂದರ್ಭ ನೋಡಿ ಬೃಹತ್ ಪೋಲೀಸ್ ಬಿಗಿ ಬಂದೋಬಸ್ತ್ ನಲ್ಲಿ ಶ್ರೀ ಮುರುಘರಾಜೇಂದ್ರ ಮಠದ ಆಡಳಿತಾಧಿಕಾರಿ ಮತ್ತು ಅವರ ಅಸಂಖ್ಯ ಸ್ವಯಂ ಸೇವಕರು ಹೊಲೆಹೊನ್ನೂರು ತೋಟದ ಸಹಸ್ರಾರು ಬಡ ನಿವಾಸಿಗಳನ್ನು ಅವರ ಆಕ್ರಂದನ-ಪ್ರತಿಭಟನೆಯ ವಿರುದ್ಧ ವಕ್ಕಲೆಬ್ಬಿಸಿದುದು ನಗರದಲ್ಲಿ ಅಷ್ಟೇಕೆ ಈ ರಾಜ್ಯದಲ್ಲೇ ದಿಗ್ಭ್ರಮೆಗೊಳಿಸಿದ ಅತ್ಯಂತ ಕಳವಳಕಾರಿ ಅಮಾನವೀಯ ಘಟನೆ ಎಂದು ಪತ್ರಿಕಾ ಹೇಳಿಕೆಯೊಂದರಲ್ಲಿ ಸಿಪಿಐ(ಎಂ) ಘಟಕ ಖೇದ ವ್ಯಕ್ತಪಡಿಸಿದೆ.

ಬೀದಿಗೆಸೆಯಲ್ಪಟ್ಟ ಪ್ರತಿ ನಿವಾಸಿಗೂ ನಿವೇಶನ ನೀಡಲಾಗುವುದೆಂದು ಹೇಳಲಾದ ಯರಗುಂಟೆ ಬಳಿಯ ಹದಿನೈದು ಎಕರೆ ಜಮೀನು ವಿವಾದಿತ ಸ್ಥಳವೆಂದು ಈಗ ಅಪಸ್ವರ ಎದ್ದಿದೆ. ಕನಿಷ್ಟ ಸೌಲಭ್ಯಗಳೂ ಇಲ್ಲದ ದೂರದ ಸ್ಥಳಕ್ಕೆ ತಳ್ಳಲ್ಪಟ್ಟ ನಿವಾಸಿಗಳಲ್ಲಿ ಭರವಸೆ ಮೂಡಿಸುವ ಕಾರ್ಯ ಈಗ ತುರ್ತಾಗಿ ನಡೆಸಬೇಕಾಗಿದೆ ಎಂದ ಪತ್ರಿಕಾ ಹೇಳಿಕೆ ಈ ಸಂದರ್ಭದಲ್ಲಿ ಈ ಕೆಳಗಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

1) ಸ್ಥಳ ತೆರವು ಮಾಡಬೇಕೆಂದು ಹೇಳಲಾದ ಸರ್ವೋಚ್ಚ ನ್ಯಾಯಾಲಯದ ಆದೇಶದ ವಿವರಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಬೇಕು.

2) ವಸತಿಹೀನರನ್ನು ಪ್ರಾಮಾಣಿಕರಾಗಿ ಗುರುತಿಸಿ ಹೊಸ ನಿವೇಶನದ ಅಧಿಕೃತ ಹಕ್ಕುಪತ್ರಗಳನ್ನು ಗಂಡ-ಹೆಂಡತಿ ಇಬ್ಬರ ಹೆಸರಿನಲ್ಲಿ ಜಂಟಿಯಾಗಿ ನೀಡಬೇಕು. ವಸತಿ ನಿರ್ಮಿಸಲು ಹೆಚ್ಚಿನ ಆರ್ಥಿಕ ನೆರವು ಒದಗಿಸಬೇಕು.

3) ಪ್ರಾಥಮಿಕ ಸೌಲಭ್ಯಗಳಾದ ನೀರು, ಒಳಚರಂಡಿ, ವಿದ್ಯುಚ್ಛಕ್ತಿ ಒದಗಿಸಬೇಕು. ಇಲ್ಲದಿದ್ದಲ್ಲಿ ಮತ್ತೊಂದು ಕೊಳಚೆಗೇರಿ ನಿರ್ಮಿಸಿದ ಅಪಖ್ಯಾತಿ ಮಠದ ಮಡಿಲಿಗೆ ಬೀಳುತ್ತದೆ.

4) ನೂರಾರು ಎಳೆಯ ಮಕ್ಕಳಿಗೆ ಶಾಲೆಗಳು ಎಲ್ಲಿ? ಊರಿನೊಳಗೆ ಕೂಲಿ-ನಾಲಿ ಮಾಡುತ್ತಿದ್ದ ಕುಟುಂಬಗಳು ಈಗ ದೂರದ ಊರಿಗೆ ಬರಬೇಕು. ಇನ್ನು ಮೇಲೆ ಅವರು ಅತಂತ್ರರು.

5) ಈ ತೋಟದಲ್ಲಿದ್ದ ಸಣ್ಣ-ಪುಟ್ಟ ಅಂಗಡಿಕಾರರು, ಹೋಟೆಲುಕಾರರು, ಗ್ಯಾರೇಜು ನಡೆಸುತ್ತಿದ್ದವರ ಪಾಡೇನು? ಅವರಿಗೂ ಸೂಕ್ತ ನಿವೇಶನ ಪರಿಹಾರ ಧನ ನೀಡಿ ಮಠವು ಮಾನವೀಯತೆಯನ್ನು ಎತ್ತಿ ಹಿಡಯಬೇಕು.

ತೆರವಾದ ಸುಮಾರು ಆರೂವರೆ ಎಕರೆ ಜಮೀನು ಸಾರ್ವಜನಿಕ ಉಪಯೋಗಕ್ಕೆ ಮೀಸಲಾಗಿಡಲಾಗುವುದೆಂದು ಹೇಳಲಾಗುತ್ತಿದೆ. ಆದರೆ ಇದು ಸಾಧ್ಯವೇ? ಎಂದು ಸಿಪಿಐ(ಎಂ) ಘಟಕ ಪ್ರಶ್ನಿಸಿದೆ.

ವಿದ್ಯೆಯನ್ನು ಇಂದು ಸೂಪರ್ ಲಾಭದ ಮಾರಾಟದ ಸರಕನ್ನಾಗಿ ಮಾಡಿಕೊಂಡಿರುವ ಸಂಸ್ಥೆಗಳಿವೆ. ಮಠಗಳಿವೆ. ಜನಸಾಮಾನ್ಯರಿಗೆ ಉಚಿತ ಶಿಕ್ಷಣ ವ್ಯವಸ್ಥೆ ದೊರಕಬಹುದೇ?

ಈಗ ನಗರದ ಮಧ್ಯೆ ಇರುವ ಶಿವಯೋಗಿ ಮಂದಿರದ ಆವರಣದಲ್ಲಿ ವ್ಯಾಪಾರ ಮಳಿಗೆಗಳು ತಲೆ ಎತ್ತಿರುವುದನ್ನು ಗಮನಿಸಿದರೆ ಹೊಸ ನಿವೇಶನದಲ್ಲಲಿ ಏನು ನಿರ್ಮಾಣಗೊಳ್ಳಬಹುದೆಂದು ಊಹಿಸುವುದು ಸುಲಭ.

ಆದ್ದರಿಂದ ಈ ಭಾಗದ ಶಾಸಕರು, ಸರಕಾರಿ ಯಂತ್ರ, ದಾವಣಗೆರೆ ಪ್ರಾಧಿಕಾರ, ನಗರಸಭೆ, ಪ್ರಗತಿಪರ ಚಿಂತಕರು ಮತ್ತು ವಿಶೇಷವಾಗಿ ಬೃಹನ್ಮಠ ಪ್ರಾಮಾಣಿಕ ಕಾಳಜಿ ತೋರಿಸಿ ಹೊಲೆಹೊನ್ನೂರು ತೋಟದಿಂದ ವಕ್ಕಲೆಬ್ಬಿಸಲ್ಪಟ್ಟ ಕುಟುಂಬಗಳ ಆಶೋತ್ತರಗಳನ್ನು ಈಡೇರಿಸಬೇಕೆಂದು ಸಿಪಿಐ(ಎಂ) ಸ್ಥಳೀಯ ಘಟಕ ಆಗ್ರಹಪಡಿಸುವುದಲ್ಲದೆ ತೆರವಾದ ಜಾಗವನ್ನು ವಂಚನೆಗೆ ಅವಕಾಶ ವಾಗದಂತೆ ಸಾರ್ವಜನಿಕರು ವಿಶೇಷವಾಗಿ ಬಡಜನರ ಕಲ್ಯಾಣಕ್ಕಾಗಿಯೇ ಮೀಸಲಿಡಬೇಕೆಂದು ಒತ್ತಾಯಿಸಿದೆ.

ಬೀಡಿ ಕಾರ್ಮಿಕರ ಮಹಾಸಭೆ

ಮೂಡಬಿದ್ರೆ: ನಗರದ ಪ್ರದೇಶದ ಬಿಡಿ ಕೆಲಸಗಾರರ ಸಂಘದ 6ನೇ ವಾರ್ಷಿಕ ಮಹಾಸಭೆಯು ತಾ.17.3.95ರಂದು ನಗರದ ಸಮಾಜ ಮಂದಿರದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಯು.ಬಿ. ಲೋಕಯ್ಯನವರು ವಹಿಸಿದ್ದರು. ಸಭೆಯನ್ನು ಸ್ವಾಗತಿಸಿ ಕು.ರಮಣಿಯವರು ಮಾತನಾಡಿದರು. ಕಾರ್ಮಿಕ ವರ್ಗದ ಏಳಿಗೆಗಾಗಿ ದುಡಿದು ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಮುಖಂಡರಿಗೂ ಕಾರ್ಯಕರ್ತರಿಗೂ ಸಭೆಯು ಸಂತಾಪವನ್ನು ಸೂಚಿಸಿತು. ವಾರ್ಷಿಕ ವರದಿಯನ್ನು ಸಂಘದ ಕಾರ್ಯದರ್ಶಿಯವರಾದ ಕು.ರಮಣಿಯವರು ಮಂಡಿಸಿದರು. ವರದಿ ಮತ್ತು ಲೆಕ್ಕ ಪತ್ರವನ್ನು ಸಭೆಯು ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಿತು. ಈ ಸಭೆಯು 18 ಜನ ರಿರುವ ಕಾರ್ಯಕಾರಿ ಸಮಿತಿಯನ್ನು ಯು.ಬಿ. ಲೋಕಯ್ಯನವರುನ್ನು ಅಧ್ಯಕ್ಷರನ್ನಾಗಿ, ಶಿವಣ್ಣ ಶೆಟ್ಟಿಯವರನ್ನು ಉಪಾಧ್ಯಕ್ಷರನ್ನಾಗಿಯೂ, ಕು.ರಮಣಿಯವರನ್ನು ಕಾರ್ಯದರ್ಶಿಯವರನ್ನಾಗಿಯೂ, ದೇವಕಿಯವರನ್ನು ಜೊತೆ ಕಾರ್ಯದರ್ಶಿಯವರನ್ನಾಗಿಯೂ, ಪ್ರದೀಪ್‌ಕುಮಾರ್‌ರವನ್ನು ಕೋಶಾಧಿಕಾರಿಯಾಗಿನ್ನಾಗಿಯೂ ಆರಿಸಿತು.

ಮುಖ್ಯ ಅತಿಥಿಯಾಗಿ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಕಾರ್ಯದರ್ಶಿಯವರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಆಗಮಿಸಿದ್ದರು.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ರೈಲ್ವೆ ಬಜೆಟ್: ಉದಾರೀಕರಣ ನೀತಿಗೆ ತಲೆಬಾಗಿ ಸಾಮಾನ್ಯ ಪ್ರಯಾಣಿಕರತ್ತ ತಿರಸ್ಕಾರ

ಸಂಸತ್ತಿಗೆ ಮಾರ್ಚ್ 14ರಂದು ಸಲ್ಲಿಸಿದ ರೈಲ್ವೆಬಜೆಟ್ ಪ್ರಸ್ತಾಪಗಳು ಹಣದುಬ್ಬರ ಹೆಚ್ಚಲು ಕಾರಣವಾಗಲಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅದೇ ದಿನ ನೀಡಿರುವ ಪತ್ರಿಕಾ ಹೇಳಿಕೆಯೊಂದರಲ್ಲಿ ಖಂಡಿಸಿದೆ. ಎಲ್ಲಾ ಸರಕುಗಳ ಸಾಗಾಣಿಕೆಯ ದರಗಳ ಶೇ. 7 ಹೆಚ್ಚಳ ಇದಕ್ಕೆ ಮೂಲಕಾರಣವಾಗುತ್ತದೆ. ಅಲ್ಲದೆ ನಗರಗಳಲ್ಲಿ ಉಪನಗರ ರೈಲು ವ್ಯವಸ್ಥೆಯನ್ನು ಅವಲಂಬಿಸಿರುವ ಪ್ರಯಾಣಿಕರಿಗೆ ತಿಂಗಳ ಟಿಕೆಟ್ ದರ ಹೆಚ್ಚಿಸಿರುವುದು ಒಂದು ಪ್ರತಿಗಾಮಿ ಕ್ರಮ ರೈಲ್ವೆ ಬಜೆಟ್ ಜನಗಳ ಸಾಮಾಜಿಕ ಅಗತ್ಯಗಳತ್ತ ಗಮನ ನೀಡದೆ ರೈಲ್ವೆಯನ್ನು ವ್ಯಾಪಾರೀಕರಿಸುವುದರಮೇಲೆ ಹೆಚ್ಚು ಒತ್ತು ನೀಡಿದೆ. ಜನಸಾಮಾನ್ಯರು ಬಳಸುವಸಾಮಾನ್ಯ ಪ್ಯಾಸೆಂಜರ್ ರೈಲುಗಳನ್ನು ಕಡಿತ ಮಾಡಿ ಶತಾಬ್ದಿ ಎಕ್ಸ್‌ಪ್ರೆಸ್‌ಗಳಂತಹ ಹೆಚ್ಚು ದರಗಳ ಸೇವೆಗಳನ್ನು ಆರಂಭಿಸಲಾಗುತ್ತಿದೆ ಎಂಬುದರತ್ತ ಪಿ.ಬಿ. ಹೇಳಿಕೆ ಗಮನ ಸೆಳೆದಿದೆ.

ರೈಲ್ವೆಗೆ ನೀಡಿರುವ ಯೋಜನಾ ಬಾಬ್ತು ಕಳೆದ ವರ್ಷಕ್ಕಿಂತ 1245 ಕೋಟಿ ರೂ. ಹೆಚ್ಚಿದೆ. ಆದರೆ ಇದು ಎರಡಂಕಿ ಹಣದುಬ್ಬರದ ಹಿನ್ನೆಲೆಯಲ್ಲಿ ಏನೂ ಅಲ್ಲ. ರೈಲುಗಳ ಸಂಖ್ಯೆ ಹಾಗೂ ಇತರ ಸೇವೆಗಳಲ್ಲಿ ಹೆಚ್ಚಳ ಮಾಡಿರುವುದು ವರ್ಷದ ಸಾರ್ವತ್ರಿಕ ಚುನಾವಣೆಗಳ ಮೇಲೆ ಕಣ್ಣಿಟ್ಟು. ಮೂಲಭೂತ ಸೌಕರ್ಯಗಳಿಗೆ ಉಸ್ತುವಾರಿಗೆ ಹೆಚ್ಚಿನ ಖರ್ಚು ಮಾಡದೆ ರೈಲುಗಳ ಸೇವಾ ಮಟ್ಟ ಹೆಚ್ಚಲು ಸಾಧ್ಯವಿಲ್ಲ. ಇದರ ದುಷ್ಪರಿಣಾಮ ಎದುರಿಸಬೇಕಾದವರು ಸಾಮಾನ್ಯ ಪ್ರಯಾಣಿಕರು. ಇತ್ತೀಚೆಗೆ ಅಪಘಾತಗಳು ಹೆಚ್ಚಲು ಇದೇ ಕಾರಣ -ಉಸ್ತುವಾರಿಯಲ್ಲಿ ಸುಧಾರಣೆಯಿಲ್ಲದೆಂಬುದು ಹಾಗೂ ಸುರಕ್ಷಾ ನಿಯಮಗಳನ್ನು ಪಾಲಿಸದಿರುವುದು.

ಇದೇ ರೈಲ್ವೇ ಧೋರಣೆಯೇ ಉದಾರೀಕರಣ ನೀತಿಗೆ ತಲೆಬಾಗಿದೆ, ಇದರಿಂದ ರೈಲ್ವೆಯ ವಿವಿಧ ವಲಯಗಳ ಖಾಸಗೀಕರಣದ ಮೇಲೆ ಒತ್ತು ನೀಡಿದೆ ಎಂದು ಪಿ.ಬಿ. ಟೀಕಿಸಿದೆ.

ಸಾಗಾಣಿಕೆ ದರಗಳಲ್ಲಿ ಹಾಗೂ ಉಪನಗರ ಸೇವೆಗಳಲ್ಲಿ ಎರಡನೇ ದರ್ಜೆ ದರಗಳಲ್ಲಿ ಹೆಚ್ಚಳವನ್ನು ಹಿಂತೆಗೆದುಕೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ರೈಲ್ವೆಯ ಬಗ್ಗೆ ಸರಕಾರ ಧೋರಣೆ ಬದಲಾಗಬೇಕು, ಮೂಲಭೂತ ಪರಿಕರಗಳನ್ನು ಸುಧಾರಿಸಲು, ರೈಲ್ವೆ ಸೇವೆಗಳು ವಿಸ್ತರಿಸಲು ಸಾಕಷ್ಟು ಹಣ ತೊಡಗಿಸಿ ದೇಶಾದ್ಯಂತ ಎಲ್ಲಾ ಜನಗಳ ಅಗತ್ಯಗಳನ್ನು ಪೂರೈಸಲು ಮುಂದಾಗಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಜನ-ವಿರೋಧಿ ಬಜೆಟ್ಟನ್ನು ವಿರೋಧಿಸಿ-ಸಿಐಟಿಯು ಕರೆ

ಸಿಐಟಿಯು ಕೇಂದ್ರ ಕಾರ್ಯದರ್ಶಿ ಮಂಡಳಿ ಕೂಡ ಒಂದು ಪ್ರತ್ಯೇಕ ಹೇಳಿಕೆ ನೀಡಿ ಬಜೆಟ್‌ನಲ್ಲಿ ದರ ಹೆಚ್ಚಳವನ್ನು ಖಂಡಿಸಿದೆ. ಹಲವು ಹೊಸ ರೈಲುಗಳ ಪ್ರಕಟಣೆ ಮಧ್ಯಾವಧಿ ಚುನಾವಣೆ ಎದುರಿಸಬೇಕಾಗಬಹುದೆಂದು ಅನುಮಾನದಿಂದ ಬಂದಿರುವಂತೆ ಕಾಣುತ್ತದೆ ಎಂದಿರುವ ಸಿಐಟಿಯು ರೈಲ್ವೇ ಡಬ್ಬಿಗಳ, ರೈಲು ಹಳಿಗಳ ಸುಧಾರಣೆಗೆ, ಹೆಚ್ಚಳಕ್ಕೆ ಗಮನವನ್ನೇ ನೀಡಲಾಗಿಲ್ಲ ಎಂದು ಟೀಕಿಸಿದೆ. ಹಳಿಗಳು, ಡಬ್ಬಿಗಳಲ್ಲಿ ಹೆಚ್ಚಳವಾಗದೆ ಕೇವಲ ರೈಲುಗಳನ್ನು ಹೆಚ್ಚಿಸಿದರೆ ಹಳಿಗಳ ಮೇಲೆ ವಿಪರೀತ ಸಂಚಾರ ಒತ್ತಡ ಹೆಚ್ಚಿ ಆಗಾಗ ಸಂಚಾರ ಅಸ್ತವ್ಯಸ್ತಗೊಳ್ಳುವ ಅಪಾಯವಿದೆ ಎಂದು ಅದು ಎಚ್ಚರಿಸಿದೆ.

ತಜ್ಞರು, ಸಂಸದೀಯ ಸ್ಥಾಯಿ ಸಮಿತಿ ಇತ್ಯಾದಿ ಎಲ್ಲರೂ ವಿರೋಧಿಸಿದರೂ ಈಗಲೂ ಗೇಜ್ ಪರಿವರ್ತನೆಗೇ ಭಾರೀ ಹಣ, ಖರ್ಚು ಮಾಡಲಾಗುತ್ತದೆಯೇ ಹೊರತು ಹಳಿಗಳ ವಿಸ್ತರಣೆ ಇತ್ಯಾದಿ ಮಹತ್ವದ ವಲಯಗಳನ್ನು ನಿರ್ಲಕ್ಷಿಸಲಾಗುತ್ತಿದೆ ಇದು ರೈಲ್ವೇ ಸಾಗಾಣಿಕೆಯ ಬಿಕ್ಕಟ್ಟನ್ನು ಆಳಗೊಳಿಸುತ್ತದೆ ಎಂದೂ ಸಿಐಟಿಯು ಎಚ್ಚರಿಸಿದೆ.

ಕಾರ್ಮಿಕರನ್ನು ಆಡಳಿತದಲ್ಲಿ ಒಳಗೊಳ್ಳುವ ಮಾತು ಬಜೆಟ್‌ನಲ್ಲಿ ಬಂದಿದೆ. ಆದರೆ ಇದರಲ್ಲಿ ಏನೂ ಸತ್ಯವಿಲ್ಲದ್ದು. ರೈಲ್ವೆ ಸಿಬ್ಬಂದಿ ಸಂಖ್ಯೆಯ ಕಡಿತದಲ್ಲಿ ಖಾಸಗೀಕರಣದಲ್ಲಿ ಯೂನಿಯನ್‌ಗಳನ್ನು ಶಾಮೀಲು ಮಾಡಲಷ್ಟೆ ಮಾಡಿದಾಗ ಪ್ರದರ್ಶನ ಇದು ಸಿಐಟಿಯು ಅಭಿಪ್ರಾಯಪಟ್ಟಿದೆ.

ವಾಸ್ತವವಾಗಿ ಈ ರೈಲ್ವೆ ಬಜೆಟ್ ಒಂದೆಡೆ ಚುನಾವಣಾ ಪೂರ್ವ ಕಸರತ್ತುಗಳನ್ನು ಹಾಗೂ ಇನ್ನೊಂದೆಡೆ ಜನಗಳ ಅಗತ್ಯಗಳು, ನಿರೀಕ್ಷೆಗಳ ಗಮನವನ್ನೇ ನೀಡದೆ ರೈಲ್ವೆಯನ್ನು ವಾಣಿಜ್ಯ ಆಧಾರದ ಮೇಲೆ ನಡೆಸಬೇಕೆನ್ನುವ ಐ.ಎಂ.ಎಫ್.-ವಿಶ್ವ ಬ್ಯಾಂಕ್ ನೀತಿಯನ್ನು ಪರಸ್ಪರ ಬೆಸೆಯುವ ಪ್ರಯತ್ನ ಮಾಡಿದೆ. ಆದ್ದರಿಂದ ಎಲ್ಲರು ಜನ-ವಿರೋಧಿ ರೈಲ್ವೇ ಬಜೆಟ್‌ನ್ನು ವಿರೋಧಿಸಬೇಕು ಎಂದು ಅದು ಕರೆ ನೀಡಿದೆ.

ಸಿಪಿಐ(ಎಂ) ತ್ರಿಪುರಾ-ಪ.ಬಂಗಾಳ ಘಟಕಗಳ ಮೇಲಿನ ಆಪಾದನೆ ಅರ್ಥಹೀನ -ಪೊಲಿಟ್ ಬ್ಯೂರೋ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ನೃಪೇನ್ ಚಕ್ರವರ್ತಿ ಒಂದು ಸಂದರ್ಶನದಲ್ಲಿ ತ್ರಿಪುರಾ ಮತ್ತು ಪಶ್ಚಿಮ ಬಂಗಾಳ ರಾಜ್ಯ ಸರಕಾರಗಳ ವಿರುದ್ಧ ಹಾಗೂ ಅಲ್ಲಿ ಪಕ್ಷದ ಘಟಕಗಳ ವಿರುದ್ಧ ಅರ್ಥವಿಲ್ಲದ ಆಪಾದನೆ ಮಾಡಿದ್ದಾರೆ ಎಂದು ಬಂಗಾಳಿ ಭಾಷಾ ಪತ್ರಿಕಾರಂಗದ ಒಂದು ವಿಭಾಗದಲ್ಲಿ ವರದಿಯಾಗಿದೆ.

ಪತ್ರಿಕೆಗಳಲ್ಲಿ ಪ್ರಕಟವಾದ ಸಂದರ್ಶನದಲ್ಲಿ ಅಂಶಗಳು ಸುಳ್ಳು ಆರೋಗಳು ಬುಡವಿಲ್ಲದವು ಎಂದು ಪರಿಗಣಿಸುವುದಾಗಿ ಈ ಕುರಿತಾದ ಪೊಲಿಟ್ ಬ್ಯೂರೋ ಹೇಳಿಕೆ ತಿಳಿಸಿದೆ. ಇವು ತ್ರಿಪುರಾ, ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್(ಐ) ವರ್ಷಾನುಗಟ್ಟಲೆಯಿಂದ ಸೃಷ್ಟಿಸಿರುವ ಆಪಾದನೆಗಳಂತೆಯೇ ಇವೆ. ಅವರ ಈ ಆಪಾದನೆಗಳಿದ್ದಾಗ್ಯೂ ಈ ಎರಡು ರಾಜ್ಯಗಳ ಜನತೆ ಮತ್ತೆ ಮತ್ತೆ ಸಿಪಿಐ(ಎಂ)ನಲ್ಲಿ ತಮ್ಮ ವಿಶ್ವಾಸವನ್ನು ಪ್ರಕಟಗೊಳಿಸಿದ್ದಾರೆ. ತ್ರಿಪುರಾದಲ್ಲಂತೂ ಕಾಂಗ್ರೆಸ್(ಐ) ಕಳೆದ ವಿಧಾನಸಭಾ ಚುನಾವಣೆಗಳ ನಂತರ ಎಲ್ಲಾ ರೀತಿಯ ಕುತಂತ್ರಗಳನ್ನು ನಡೆಸಿ ಗಲಭೆ ಎಬ್ಬಿಸಲು ಪ್ರಯತ್ನಿಸಿದರೂ ಇತ್ತೀಚೆಗೆ ನಡೆದ ಪಂಚಾಯತು ಚುನಾವಣೆಗಳಲ್ಲಿ ಸಿಪಿಐ(ಎಂ)ಗೆ ಜನರ ನಡುವೆ ಇರುವ ಬೆಂಬಲ ವ್ಯಕ್ತವಾಗಿದೆ.

ಈ ಸಂದರ್ಶನದಲ್ಲಿರುವ ಆಪಾದನೆಗಳನ್ನು ಖಂಡಿಸುತ್ತಾ ಅವನ್ನು ಬಲವಾಗಿ ನಿರಾಕರಿಸುವುದಾಗಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ನಿರಾಶಾಯದಾಯಕ ಬಜೆಟ್

ಪುಟ 1 ರಿಂದ

ಅಂದಾಜು ಮಾಡಿರುವ ಹಣಕಾಸು ಮಂತ್ರಿಗಳು ಬಡಜನಗಳಿಗೆ ಯಾವುದೇ ನಿರ್ದಿಷ್ಟ ಪ್ರಸ್ತಾಪ ಇಟ್ಟಿಲ್ಲ, -ಮುಖ್ಯವಾಗಿ ಗ್ರಾಮೀಣ ಬಡತನದಿಂದ ಸ್ವಲ್ಪವಾದರೂ ಪರಿಹಾರ ನೀಡುವ ಪ್ರಯತ್ನಗಳೂ ಕಾಣುತ್ತಿಲ್ಲ, ಭೂಸುಧಾರಣೆ, ಹಾಗೂ ಕೃಷಿ ಕೂಲಿಕಾರರ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಕನಿಷ್ಠ ಕೂಲಿಯ ಬಗ್ಗೆ ಗಮನ ಹರಿಸದೆ ಯಾವ ರೀತಿಯಲ್ಲೂ ಬಡತನ ನಿವಾರಣೆಯ ಪ್ರಯತ್ನ ಸಾಧ್ಯವಿಲ್ಲ ಎಂಬುದನ್ನು ಜನತಾದಳದ ಮುಖಂಡರು ಇನ್ನೂ ಗಮನಿಸಿದಂತಿಲ್ಲ.

ಕಾಂಗ್ರೆಸ್(ಐ) ನೀತಿಗಳನ್ನೇ ಮುಂದುವರೆಸಿ ವಿದ್ಯುಚ್ಛಕ್ತಿ, ಪ್ರವಾಸೋದ್ಯಮ, ಹೆದ್ದಾರಿಗಳು, ವಸತಿ ಮುಂತಾದ ಕ್ಷೇತ್ರಗಳಲ್ಲಿ ಖಾಸಗಿ ಬಂಡವಾಳವನ್ನು ಆಹ್ವಾನಿಸುವ ಈ ರೀತಿ ಒಪ್ಪಂದಗಳಾದಾಗ ಅವುಗಳಲ್ಲಿ ಇರುವ ಶರತ್ತುಗಳನ್ನು ಸಾರ್ವಜನಿಕವಾಗಿ ತಿಳಿಸದೇ ಇರುವ ಪ್ರವೃತ್ತಿಯನ್ನು ಜನತಾದಳ ಸರ್ಕಾರವೂ ಮುಂದುವರಿಸಲು ಕಟಿಬದ್ಧವಾದಂತಿರುವುದು ಬಜೆಟ್‌ನ ಇನ್ನೊಂದು ಕಳವಳಕಾರಿ ಅಂಶ.

ಬೆಂಗಳೂರಿನಲ್ಲಿ "ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ನಿಧಿ"ಯನ್ನು ಸ್ಥಾಪಿಸಲೆಂದು ಬೆಂಗಳೂರು ನಗರದಲ್ಲಿ ಮಾತ್ರ ಸಂಗ್ರಹಿಸಿದ ಹಲವಾರು ತೆರಿಗೆಗಳ ಮೇಲೆ ಸೆಸ್ ವಿಧಿಸಿ 1995-96ರಲ್ಲಿ 55 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಪ್ರಸ್ತಾಪ ಒಂದು ಅಪಾಯಕಾರೀ ಹೆಜ್ಜೆ ಎಂದೇ ಹೇಳಬೇಕಾಗುತ್ತದೆ.

ಒಟ್ಟಿನಲ್ಲಿ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯ "ಕೆಲವು ಕಳವಳಕಾರಿ ಲಕ್ಷಣಗಳನ್ನು ಆರಂಭದಲ್ಲೇ ಹೇಳಿರುವಂತೆ ನಾವು ಗಮನಕ್ಕೆ ತಗೊಳ್ಳಬೇಕಿದೆ" ಎಂದು ಜನತಾದಳ ಹಣಕಾಸು ಸಚಿವರಿಗೂ ಅನಿಸಿದರೂ ಈ ನೀತಿಯ ಚೌಕಟ್ಟನ್ನು ಬಿಟ್ಟು ಪರ್ಯಾಯ ನೀತಿಗಳ ಬಗ್ಗೆ ಯೋಚಿಸುವ ಲಕ್ಷಣಗಳೇನೂ ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಜನತಾದಳದ ಮೇಲೆ ವಿಶ್ವಾಸವಿಟ್ಟು ಅದನ್ನು ಅಧಿಕಾರಕ್ಕೆ ತಂದಿರುವ ದುಡಿಯುವ ಜನರಲ್ಲಿ ನಿರಾಸೆಯುಂಟು ಮಾಡಿದೆ.

ಸಿಪಿಐ(ಎಂ) ರಾಜ್ಯ ಸಮಿತಿಯ ಕರೆ

ಪುಟ 1 ರಿಂದ

ರಾಜ್ಯದ ರಾಜಕೀಯದಲ್ಲಿ ಭಾಷಾಂಧ ಶಕ್ತಿಗಳ ಪಾತ್ರವನ್ನು ಪೋಷಿಸುತ್ತದೆ. ಜೊತೆಗೆ ಮಹಾರಾಷ್ಟ್ರದಲ್ಲಿ ಮುಂದೆ ಹಬ್ಬುವ ಕೋಮು ಶಕ್ತಿಗಳ ಬೆಳವಣಿಗೆ ಈಗಾಗಲೇ ಉತ್ತರ ಕರ್ನಾಟಕದ ಅನೇಕ ಭಾಗಗಳಲ್ಲಿ ಹೆಚ್ಚಿರುವ ಬಿಜೆಪಿಯ ಶಕ್ತಿಯ ಮತ್ತಷ್ಟು ಹೆಚ್ಚಳಕ್ಕೆ ಕಾರಣವಾಗುತ್ತದೆ. ಈಗಾಗಲೇ ಬಿಜೆಪಿ ರಾಮನ ಪ್ರಶ್ನೆಯ, ಕಾಶಿಯ ಶಿವಾಲಯ ಪ್ರಶ್ನೆಯನ್ನು ಕೈಗೆತ್ತಿಕೊಂಡಿರುವುದು ಹಾಗೂ "ಮಹಾಚೈತ್ರ"ದ ವಿವಾದದಲ್ಲಿ ತಲೆತೂರಿಸಿರುವುದು ಈಗಾಗಲೇ ಉತ್ತರ ಕರ್ನಾಟಕದ ವೀರಶೈವರನ್ನು ಉದ್ರೇಕಿಸಲು ಬಿಜೆಪಿ ಮಾಡುತ್ತಿರುವ ಪ್ರಯತ್ನವನ್ನು ಮತ್ತಷ್ಟು ಉದ್ರೇಕಕ್ಕೆ ಕೊಂಡೊಯ್ಯುವ ಅಪಾಯವಿದೆ.

"ಅದೇ ಸಮಯದಲ್ಲಿ ಒರಿಸ್ಸಾದಲ್ಲಿ ಕಾಂಗ್ರೆಸ ಹೊಸ ಆರ್ಥಿಕ ನೀತಿಗಳನ್ನು ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಪ್ರತಿಪಾದನೆ ಮಾಡುತ್ತಿದ್ದ ಜನತಾದಳದ ಬಿಜುಪಟ್ನಾಯಕ್‌ರ ಸರಕಾರ ಸೋಲಿನಿಂದ ಜನತಾದಳದ ಸರಕಾರ ಪಾಠ ಕಲಿಯಬೇಕಾಗಿದೆ" ಎಂದು ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

"ಜನತಾದಳ ತಾನು 89ರ ವಿಧಾನಸಭಾ ಚುನಾವಣೆಗಳಲ್ಲಿ ಸೋತ ನಂತರ ಜನರ ಸಂಕಷ್ಟಗಳ ಸಮಯದಲ್ಲಿ ಅವರೊಡನೆ ಬೆರೆಯದಿದ್ದರೂ, ವಿಧಾನಸಭೆಯ ಒಳಗೂ ಹೊರಗೂ ವಿರೋಧ ಪಕ್ಷದ ಸ್ಥಾನವನ್ನು ಹೊಣೆಗಾರಿಕೆಯಿಂದ ನಿರ್ವಹಿಸದಿದ್ದರೂ, ಕಾಂಗ್ರೆ ಪಕ್ಷವನ್ನು ಹೊರದೂಡಬೇಕೆಂಬ ಜನತೆಯ ದೃಢ ಇಚ್ಛೆಯ ಪ್ರತೀಕವಾಗಿ ಶೇ. 33 ಮತಗಳೊಡನೆ ಕೆಲವೇ ಸೀಟುಗಳ ಬಹುಮತದೊಡನೆ ಅಧಿಕಾರಕ್ಕೆ ಬಂದಿದೆ. ತನ್ನಲ್ಲಿನ ಒಡಕನ್ನು ನಿವಾರಿಸಿಕೊಂಡು ಒಂದು ಒಗ್ಗಟ್ಟಿನ ಮುಖವನ್ನು ಜನರ ಮುಂದಿಟ್ಟಿದ್ದು ಹಾಗೂ ತಮ್ಮ ಪಕ್ಷದ ಕಾರ್ಯಕರ್ತರನ್ನು ಕೆಲಸಕ್ಕಿಳಿಸಿದ್ದು ನಮ್ಮ ರಾಜ್ಯದಲ್ಲಿ ಬಿಜೆಪಿಯ ಬೆಳವಣಿಗೆಯನ್ನು ಹಿಮ್ಮೆಟ್ಟಿಸಲು ಕಾಣಿಕೆ ನೀಡಿದೆ. ಎಡಪಕ್ಷಗಳೊಡನೆ ಮೈತ್ರಿಯನ್ನು ಬೆಸೆಯದಿದ್ದುದು ಈ ಪ್ರಕ್ರಿಯೆಯನ್ನು ಮತ್ತಷ್ಟು ಮುಂದೊಯ್ಯುವುದರಲ್ಲಿ ಅಡ್ಡಿಯಾದರೂ ಹೀಗೊಂದು ಶಕ್ತ ಜಾತ್ಯಾತೀತ ಪಕ್ಷವೊಂದು ರಾಜ್ಯದಲ್ಲಿದೆಯೆಂಬುದೇ ಇಲ್ಲಿ ಕೋಮು ಶಕ್ತಿಗಳ ಬೆಳವಣಿಗೆ ಒಂದು ದೊಡ್ಡ ಅಡ್ಡಿಯಾಗಿದೆ.

"ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಅದರ ಗಮನಾರ್ಹ ವಿಜಯ ದಳದ ಆಧಾರ ಮತ್ತಷ್ಟು ದೃಢಗೊಳ್ಳಲು ಸಹಾಯ ಮಾಡುತ್ತದೆ. ಮತ್ತು ರಾಜ್ಯದಲ್ಲಿ ಎರಡನೇ ಪಕ್ಷವೆಂದು ಪರಿಗಣಿತವಾಗಿ ಮೊದಲನೇ ಸ್ಥಾನ ಗಳಿಸಲು ತೀವ್ರ ಚಟುವಟಿಕೆ ಆರಂಭಿಸಿರುವ ಬಿಜೆಪಿಗೆ ಅದು ರಾಜ್ಯದಲ್ಲಿ ಮೂರನೇಯ ಸ್ಥಾನದ್ದು ಮಾತ್ರ ಎಂಬ ಸತ್ಯ ದರ್ಶನವನ್ನು ಜನತೆ ಮಾಡಿಸಿದ್ದಾರೆ. ಆದರೆ ಅದೇ ಸಮಯದಲ್ಲಿ ಒರಿಸ್ಸಾದಲ್ಲಿನ ವಿಜಯದಿಂದ ಮೊದಲೇ ಸ್ವಲ್ಪ ಗರಿಗಟ್ಟಿಕೊಂಡಿದ್ದ ಕಾಂಗ್ರೆಗೆ ಸಿಕ್ಕಿರುವ ಸ್ಥಾನಗಳು ಅವರ ನೆಲೆಯ ಕುಸಿತವನ್ನು ತಡೆಗಟ್ಟಲು ಸಹಾಯ ಮಾಡುತ್ತವೆ ಹಾಗೂ ಕಳೆದುಕೊಂಡ ನೆಲೆಯನ್ನು ಗಳಿಸಲು ಜನತಾದಳದ ಮೇಲೆ ಪ್ರಹಾರ ಮಾಡಲು ಹೆಚ್ಚು ಅವಕಾಶವನ್ನು ಅದು ಕಲ್ಪಿಸಿದೆ. ಬಿಜೆಪಿಗೆ ಕೂಡಾ ಗ್ರಾಮೀಣ ಪ್ರದೇಶದ ಮೇಲೆ ಹೆಚ್ಚಿನ ಹಿಡಿತವನ್ನು ತಂದುಕೊಟ್ಟಿದೆ. ಮತ್ತಷ್ಟು ಅದನ್ನು ವಿಸ್ತರಿಸಿಕೊಳ್ಳಲು ಹೋರಾಡುವಂತೆ ಅಸ್ತ್ರವ ಕೊಟ್ಟಿದೆ" ಎಂದು ವಿಶ್ಲೇಷಣೆ ಮಾಡುತ್ತಾ ಈ ಹಿನ್ನೆಲೆಯಲ್ಲಿ ಈ ಮೂರು ತಿಂಗಳಲ್ಲಿ ಜನತಾದಳ ಸರಕಾರದ ಧೋರಣೆಗಳನ್ನು ರಾಜ್ಯ ಸಮಿತಿ ಪರಿಶೀಲಿಸಿತು.

"ಜನತಾದಳ ಸರಕಾರ ತನ್ನ ಪ್ರಣಾಳಿಕೆಯನ್ನು ಜಾರಿ ಮಾಡುವನೆಂದು ಘೋಷಿಸುತ್ತಾ ಈಗ ಸದ್ಯಕ್ಕೆ ಸುಸ್ತಿ ಬಡ್ಡಿ ಮನ್ನಾ ಘೋಷಿಸಿ ನಬಾರ್ಡ್‌ನಿಂದ ಪ್ರತಿಕಾರ ಕ್ರಮವನ್ನೆದುರಿಸುತ್ತಿದೆ. ಅಕ್ಕಿಯ ಬೆಲೆಯನ್ನು ಎಪ್ರಿಲ್ 1 ರಿಂದ ಹಸಿರು ಕಾರ್ಡ್‌ದಾರರಿಗೆ ರೂ. 3.20ಕ್ಕೆ ಇಳಿಸುವುದಾಗಿ ಘೋಷಿಸಿದೆ. ರಾಜ್ಯದ ಯೋಜನಾ ಮಂಡಳಿಯನ್ನು ಕ್ರಿಯಾಶೀಲಗೊಳಿಸಿದೆ. ವ್ಯಾಪಕ ವಸತಿ ನೀತಿಯೊಂದನ್ನು ಅಂಗೀಕರಿಸುವುದಾಗಿ ಘೋಷಿಸಿದೆ. ನೀರಾವರಿಗಾಗಿ ನೀರಾವರಿ ಬಾಂಡ್ ಮೂಲಕ, ಬೆಟರ್‌ಮೆಂಟ್ ಲೆವಿ ಮೂಲಕ ಹಣ ಪಡೆದು ಯೋಜನೆ ಮಾಡಿಯೇ ತೀರುತ್ತೇವೆಂದು ಘೋಷಿಸುತ್ತಿದೆ.

"ಕಾಂಗ್ರೆ ರಾಜ್ಯ ಸರಕಾರ ಹೊಸ ಆರ್ಥಿಕ ನೀತಿಯ ಜಾರಿಯಲ್ಲಿ ರೂಪಿಸಿದ್ದ ವಿದೇಶೀ ಬಂಡವಾಳದ ಯೋಜನೆಗಳನ್ನೆಲ್ಲ ಹಾಗೇ ಮತ್ತು ಅತ್ಯಂತ ತ್ವರಿತವಾಗಿ ಅಂಗೀಕರಿಸಿ ತೀರ್ಮಾನಗಳನ್ನು ಕೈಗೊಂಡಿದೆ. ಮುಖ್ಯವಾಗಿ ಸಿಂಗಾಪುರದ ಸಹಯೋಗದಲ್ಲಿ Information Technolgy Park, ಹಾಗೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ. 600 ಕೋಟಿ ರೂ. ವೆಚ್ಚದಲ್ಲಿ ಸರಿಸುಮಾರು ಕಿ.ಮೀ.ಗೆ 4 ಕೋಟಿ ರೂ ವೆಚ್ಚದಲ್ಲಿ ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇ, ಹಾಗೆಯೇ ಹುಬ್ಬಳ್ಳಿ ಧಾರವಾಡ ರಸ್ತೆ, ಮಂಗಳೂರಿನ ಕೊಜೆಂಟ್ರಿಕ್ಸ್ ವಿದ್ಯುತ್ ಸ್ಥಾವರ, ರಾಯಚೂರು ಬಳ್ಳಾರಿಗಳಲ್ಲಿ ದೊಡ್ಡ ಖಾಸಗಿ ಉಕ್ಕು ಕಾರ್ಖಾನೆಗಳು ಹಾಗೆಯೇ ರಾಜ್ಯದ ಸರಕಾರಿ ಕಾರ್ಖಾನೆಗಳನ್ನು ವಿದೇಶೀಯರಿಗೆ ಮಾರುವುದಕ್ಕೆ ಆತುರ ಇತ್ಯಾದಿ. ಇವುಗಳ ಜೊತೆಗೆ ಅಮೇರಿಕ, ಬ್ರಿಟನ್, ಸಿಂಗಪೂರದ ಬಂಡವಾಳದ ಉನ್ನತ ನಿಯೋಗಗಳು ಬೆಂಗಳೂರಿಗೆ ಭೇಟಿ ನೀಡಿ ಅತ್ಯಂತ ತೃಪ್ತಿಯಿಂದ ಹಿಂತಿರುಗಿವೆ. ದೇವೇಗೌಡರು ದೇಶದ ಬಂಡವಾಳಗಾರರ ಜೊತೆ ಕಲ್ಕತ್ತದಲ್ಲಿ, ವಿದೇಶೀ ಬಂಡವಾಳಗಾರರ ಜೊತೆ ದಾವೂಸ್‌ನಲ್ಲಿ ನಿಕಟ ಸಂಪರ್ಕ ಬೆಳೆಸಲು ಪ್ರಯತ್ನಿಸಿದ್ದಾರೆ. ಜೊತೆಗೆ ಉಪ ಮುಖ್ಯಮಂತ್ರಿಗಳು ಸಿಂಗಾಪೂರದ ಪ್ರವಾಸೋದ್ಯಮಕ್ಕೆ ಶೇ. 30 ನಿವ್ವಳ ಲಾಭದ ಭರವಸೆ ನೀಡಿದ್ದಾರೆ. ಇದರಲ್ಲಿ ರಾಜ್ಯದ, ದೇಶದ ಜನತೆಯ ಹಿತಗಳನ್ನು ರಕ್ಷಣೆ ಮಾಡುವ ಎಚ್ಚರವನ್ನು ತೋರಿಸಿದ್ದೇನೂ ಕಾಣುವುದಿಲ್ಲ.

"ಆಹಾರ ಹಾಗೂ ರಸಗೊಬ್ಬರ ಸಹಾಯಧನದ ಹಿಂತೆಗೆತದ ಬಗ್ಗೆ ವಿರೋಧ ಹೊರತಾಗಿ ಹೊಸ ಆರ್ಥಿಕ ನೀತಿಯ ಬಗ್ಗೆ ನಮ್ಮ ಸ್ವಾಗತವಿದೆ ಎಂಬ ನಿರಂತರ ಹೇಳಿಕೆಗಳ ಜೊತೆಗೆ ಅವರು ತೆಗೆದುಕೊಂಡಿರುವ ಮೇಲಿನ ಬಂಡವಾಳ ಸ್ವಾಗತ ಕ್ರಮಗಳು, ಜೊತೆಗೆ ಭೂ ಸುಧಾರಣಾ ಕಾಯಿದೆಯ ಪ್ರತಿಗಾಮಿ ತಿದ್ದುಪಡಿ, ಹೊಸ ಕೃಷಿ ನೀತಿಯ ನಿರೂಪಣೆ ಮಾಡುವ ಕ್ರಮ, ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ವಿದ್ಯುತ್ ಹಾಗೂ ನೀರಾವರಿ ದರಗಳ ಏರಿಕೆ ಇವು ಇವರು ಹೊಸ ಆರ್ಥಿಕ ನೀತಿಯ ಪ್ರತಿಪಾದಕರಾಗಿದ್ದಾರೆ ಎಂದು ಜನರ ಮುಂದೆ ಘೋಷಣೆ ಮಾಡಿದಂತಾಗಿದೆ. ಒರಿಸ್ಸಾದ ಚುನಾವಣೆಯ ಫಲಿತಾಂಶಗಳ ಹಿನ್ನೆಲೆಯಲ್ಲಿ ಜನತಾದಳದ ಈ ಕ್ರಮಗಳು ಅವರನ್ನು ಜನತೆಯಿಂದ ದೂರ ಒಯ್ದು ಜಾತ್ಯಾತೀತ ಶಕ್ತಿಗಳನ್ನು ದುರ್ಬಲ ಮಾಡುತ್ತವೆ.

"ಹುಬ್ಬಳ್ಳಿಯ ಈದ್ಗಾ ವಿವಾದವನ್ನು ಬಗೆಹರಿಸಿದ್ದು ಸಾಮಾನ್ಯವಾಗಿ ಒಳ್ಳೆಯ ಅಭಿಪ್ರಾಯವನ್ನು ಮೂಡಿಸಿದ್ದರೂ ಈ ಸರಕಾರ ಮತ ಮಾನ್ಯಗಳ ಹಿತಗಳ ಪರವಾಗಿ ಅವರ ಪ್ರಭಾವಕ್ಕೆ ಸಿಕ್ಕಿದೆ ಎಂಬ ಅಭಿಪ್ರಾಯ ಮೂಡಿದೆ. ಕೋಮುವಾದವನ್ನು ನೇರವಾಗಿ ಕೊಂಬು ಹಿಡಿದು ಎದುರಿಸುವಲ್ಲಿ ಜನತಾದಳದಲ್ಲಿ ದೌರ್ಬಲ್ಯವಿದೆ. ಈ ದೌರ್ಬಲ್ಯವೇ "ಮಹಾಚೈತ್ರ" ಹಿಂದೆಗೆಯುವುದರಲ್ಲಿ ವ್ಯಕ್ತವಾಗಿದೆ. ಈ ದೌರ್ಬಲ್ಯವೂ ಮುಂದೆ ಬಿಜೆಪಿ ಆಕ್ರಮಣಕಾರಿ ಕ್ರಮಗಳಿಗೆ ಕೈ ಹಾಕಿದಾಗ ಜಾತ್ಯಾತೀತ ಶಕ್ತಿಗಳ ದೌರ್ಬಲ್ಯಕ್ಕೆ ಕಾರಣವಾಗುವ ಸಂಭವವಿದೆ" ಎಂದು ರಾಜ್ಯ ಸಮಿತಿ ಹೇಳಿದೆ. ಅದೇ ರೀತಿ ಜನತಾದಳದ ಸ್ವರೂಪದಿಂದಾಗಿಯೇ 1986ರಲ್ಲಿ ಜಿಲ್ಲಾ ಪಂಚಾಯತ್ ಚುನಾವಣೆಗಳ ನಂತರ ದಲಿತರ, ಕೆಳಜಾತಿಗಳ ಮೇಲೆ ದೌರ್ಜನ್ಯ ಹೆಚ್ಚಿದಂತೆ ಈಗಲೂ ಪಂಚಾಯ್ತಿ ಚುನಾವಣೆಗಳಲ್ಲಿ ಜನತಾದಳದ ವಿಜಯದ ಹಿನ್ನೆಲೆಯಲ್ಲಿ ಅದು ಮರುಕಳಿಸುವ ಸಂಭವವೂ ಇಲ್ಲದಿಲ್ಲ ಎಂದು ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

"ಇದರ ಜೊತೆಯಲ್ಲಿ ಜನತಾದಳ ಸರಕಾರ ಅಧಿಕಾರಕ್ಕೆ ಬಂದ ಮೊದಲನೇ ದಿನದಿಂದಲೇ ಬಿಜೆಪಿ ಆಕ್ರಮಣಕಾರಿಯಾಗಿ ಜನತಾದಳ ಸರಕಾರವನ್ನು ಎದುರಿಸುತ್ತಿದೆ. ಕಾಂಗ್ರೆ ಪಕ್ಷದಲ್ಲಿಯೂ ಕೆಲವರು ಇತ್ತೀಚೆಗೆ ಹೆಚ್ಚಾಗಿ ಆಕ್ರಮಣಕಾರಿಯಾಗುತ್ತಿದ್ದಾರೆ. ಮುಂದೆ ಈ ಪ್ರವೃತ್ತಿ ಇನ್ನೂ ಬಹಳ ಹೆಚ್ಚಾಗುತ್ತದೆ. ಆದರೆ ಅವರೆಲ್ಲರೂ ಜನರ ಪ್ರಶ್ನೆಗಳೇ ಅಲ್ಲದ ಪ್ರಶ್ನೆಗಳನ್ನೇ ತೆಗೆದುಕೊಂಡಿದ್ದಾರೆಯೇ ಹೊರತು ಜನತಾದಳ ಸರಕಾರದ ಮುಖ್ಯ ಧೋರಣೆಗಳನ್ನು. ವಿದೇಶೀ ಬಂಡವಾಳದ ಸ್ವಾಗತ ಮೊದಲಾದ ಆರ್ಥಿಕ ನೀತಿಯ ಯಾವುದೇ ಅಂಶವನ್ನು ಅವರು ಎತ್ತುತ್ತಿಲ್ಲ. ಏಕೆಂದರೆ ಕಾಂಗ್ರೆ ಬಿಜೆಪಿಗಳಿಗೆ ಇದು ಅವರದೇ ನೀತಿ" ಎಂದು ವಿಶ್ಲೇಷಿಸಿರುವ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಇಂತಹ ರಾಜಕೀಯ ಸನ್ನಿವೇಶದಲ್ಲಿ ಜನಗಳ ಸಮಸ್ಯೆಗಳನ್ನು ಪರಿಹರಿಸಬಲ್ಲಂತಹ ಎಡ ಪರ್ಯಾಯವನ್ನು ಮುಂದಿಡಲು ಹೋರಾಟ ಕಾರ್ಯಕ್ರಮವನ್ನು ರೂಪಿಸಿದೆ.